ಕೊಡಗು ಸಂಗಾತಿ

ಪಾಕ್ಷಿಕ ಪತ್ರಿಕೆ


ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಪಾದಕಿ : ಪಟ್ಟಡ ಶೀಲಾಮಣಿ


ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ


R. N. N. 240 ಸಂಪುಟ : 3 ಸಂಚಿಕೆ : 13 ಜುಲೈ 1 ರಿಂದ 15, 1999. ಪುಟಗಳು : 24 ಬೆಲೆ ರೂ. : 5-00

ಹಿಂದೂಸ್ಥಾನ್ ಮತ್ತು ಪಾಕಿಸ್ಥಾನ್ ನಡುವಣ ಶೀತಲ ಸಮರ ಕೊನೆಗಾಣುವುದೆಂದೋ - ಕಾಲವೇ ನಿರ್ಧರಿಸಬೇಕು









ಭಾರತದ ಮುಕುಟಮಣಿ ಕಾಶ್ಮೀರದ ಕಾರ್ಗಿಲ್‌ನಲ್ಲಿ ಈಗ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ವೀರ ಮರಣವನ್ನಪ್ಪಿದ ವೀರ ಯೋಧರ ಆತ್ಮಕ್ಕೆ ಶಾಂತಿಯನ್ನು ಕೋರೋಣ ಮತ್ತು ಆದಷ್ಟು ಶೀಘ್ರದಲ್ಲಿ ಶಮನವಾಗಲೆಂದು ಸಂಗಾತಿಯ ಓದುಗರೆಲ್ಲರೂ ಶುಭ ಹಾರೈಸೋಣ.

ವಿದೇಶ ಪ್ರಯಾಣಕ್ಕೆ ಶುಭ ಹಾರೈಕೆ



ಶ್ರೀ ದೇವಂಗೊಡಿ ಸುಧಾಕರ ಮತ್ತು ನಳಿನಿ (ಆಶಾ)

ದಿನಾಂಕ 12-6-1996ರಲ್ಲಿ ದಂಪತಿಗಳಾಗಿ 26-5-1999ರಂದು ಸೌದಿ ಅರೇಬಿಯಾದಲ್ಲಿರುವ ತನ್ನ ಪತಿಯ ಸನಿಹಕ್ಕೆ ತೆರಳಿದ ನಿನಗೂ ನಿನ್ನ ಸಂಸಾರಕ್ಕೂ ಕುಲಗುರು ಶ್ರೀ ವೆಂಕಟರಮಣನ ದಯೆ ಸದಾ ನಿಮಗಿರಲೆಂದು ಶುಭ ಹಾರೈಸುವೆವು.

ತಂದೆ ತಾಯಿ : ಚೋಂಡೀರ ಉತ್ತಯ್ಯ ಮತ್ತು ಹೇಮಾವತಿ, ಹಾರಂಗಿ

ತಮ್ಮಂದಿರು : ಚೋಂಡೀರ ದೇವರಾಜ್ (ಅನಿಲ), ಜಯಪ್ರಕಾಶ್ (ಅರುಣ) ತಂಗಿ : ಭವಾನಿ (ಅನಿತ)

ಅಜ್ಜಅಜ್ಜಿ : ಕಲ್ಲುಮುಟ್ಲು ಆನಂದ-ಗಂಗಮ್ಮ ಅತ್ತೆ ಮಾವಂದಿರು : ಕಲ್ಲುಮುಟ್ಲು, ಬಾಲು-(ಲತ), ಕಲ್ಲುಮುಟ್ಲು ವಿಠಲ-(ಹರಿಣಿ), ಆಂಟಿ ಅಂಕಲ್‌ಗಳಾದ : ಕುಯ್ಯಮುಡಿ ಮುದ್ದಯ್ಯ ಲಲಿತಕುಮಾರಿ, ಬೋಳನ ಚಿಟ್ಟಿಯಪ್ಪ-ಮೋಹಿನಿಕುಮಾರಿ, ಪೊನ್ನಚನ ಸೋಮಣ್ಣ-ಜಯಂತಿಕುಮಾರಿ, ಕೊಪುಳಿರ ಹರೀಶ್-ಜಲಕುಮಾರಿ

ಶುಭ ಹಾರೈಕೆ



ಅವಸಾನದ ಅಂಚಿನಲ್ಲಿದ್ದ ಕೊಡಗುಗೌಡ ಜನಾಂಗದ ಸಂಸ್ಕೃತಿ, ಸಂಪ್ರದಾಯ, ಆಚಾರ, ವಿಚಾರ ಹಾಗೂ ಅರೆಭಾಷೆ ಬಗ್ಗೆ ತುಂಬು ಹೃದಯದಿಂದ ಕೊಡಗು ಸಂಗಾತಿ, ಪಾಕ್ಷಿಕ ಪತ್ರಿಕೆಯನ್ನು ಹೊರತಂದು ಜನಾಂಗದ ಘನತೆ ಗೌರವವನ್ನು ಸಹೋದರ ಜನಾಂಗದ ಮುಂದೆ ತಲೆ ಎತ್ತಿ ನಿಲ್ಲುವಂತೆ ಮಾಡಿದ ನೀವು ಈಗ 51ನೇ ಸಂವತ್ಸರಕ್ಕೆ ಪಾದಾರ್ಪಣೆ ಮಾಡಿರುವುದು ನಮಗೆಲ್ಲರಿಗೂ ಅತೀವ ಸಂತೋಷ. ಈ ವಯಸ್ಸಿನ ನಿಮ್ಮ ಅಪಾರ ಕರ್ಮದ ಶ್ರಮಕ್ಕೆ ಕುಲಗುರು ಶ್ರೀ ವೆಂಕಟರಮಣನ ಮತ್ತೆ ನಿಮ್ಮ ಇಷ್ಟ ದೇವತೆಯ ಕೃಪೆ ಸದಾ ಇರಲೆಂದು ಹಾರೈಸುವೆವು.

ಶ್ರೀ ಪಟ್ಟಡ ಮುತ್ತಣ್ಣ ಪ್ರಭಾಕರ
ಜನನ : 10-6-1949

ಶ್ರೀ ತಡಿಯಪ್ಪನ ಕುಮಾರ ಜಯ, ಮೈಸೂರು
ಶ್ರೀಮತಿ ತಡಿಯಪ್ಪನ ಪದ್ಮ ಮತ್ತು ಮಕ್ಕಳು : ಭವ್ಯ ಹಾಗೂ ಕಿಶೋರ್

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :

ಪಟ್ಟಡ ಪಿ. ಶೀಲಾಮಣಿ

ಗೌರವ ಸಂಪಾದಕ :

ಪಟ್ಟಡ ಎಂ. ಪ್ರಭಾಕರ

ಚಂದಾ ಕಳುಹಿಸುವ ಮತ್ತು

ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ

ನಂ. 35, "ಸವಿತಾ ನಿಲಯ"

1ನೇ ಕ್ರಾಸ್, 4ನೇ ಬ್ಲಾಕ್,

ಜಯಲಕ್ಷ್ಮಿಪುರಂ, ಮೈಸೂರು - 570 012.

ಫೋನ್ : 0821/516771

ಸಂಪರ್ಕಿಸುವ ವಿಳಾಸ

ಬೈತಡ್ಕ ಜಾನಕಿ ಬೆಳ್ಯಪ್ಪ

ನಂ. 21-16 ಎಲ್. ಐ. ಸಿ. ಹತ್ತಿರ

ರೇಸ್ ಕೋರ್ಸ್ ರಸ್ತೆ, ಮಡಿಕೇರಿ

ದೂರವಾಣಿ : 08272/28047

ಮಣಿ ನಂಗಾರ್

ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,

ಚಿಕ್ಕಪೇಟೆ, ಮಡಿಕೇರಿ - 571 201

ದೂರವಾಣಿ : 08272/29372

ಕುಂಭಗೌಡನ ಸೋಮಣ್ಣ

ಮಯೂರ ಕೋಲ್ಡ್ ಸ್ಟೋರೇಜ್

ಮುಖ್ಯ ರಸ್ತೆ, ಕುಶಾಲನಗರ - 571 234

ಅಮ್ಮಾಜೇರ ಪೊನ್ನಪ್ಪ

20, 1ನೇ ಮೈನ್, 4ನೇ ಕ್ರಾಸ್

ಸಾಕಮ್ಮ ಗಾರ್ಡನ್, ಬಸವನಗುಡಿ,

ಬೆಂಗಳೂರು - 04

ದೂರವಾಣಿ - 080/642822

ಕಲ್ಲುಮುಟ್ಲು ಬಸಪ್ಪ c/o ನಾರಾಯಣ

ನಂ. 233/9, 2ನೇ ಕ್ರಾಸ್, ನಂಜಪ್ಪ ಬ್ಲಾಕ್,

ಕೆಂಪೇಗೌಡ ನಗರ, ಬೆಂಗಳೂರು - 19

ದೂರವಾಣಿ - 080/6549669

ಒಳನೋಟ

ಅರೆಭಾಷಿಕ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	-	**5 ರೂ.**
ಅರ್ಧ ವಾರ್ಷಿಕ	-	**60 ರೂ.**
ವಾರ್ಷಿಕ ಚಂದಾ	-	**120 ರೂ.**

ಸಂಪಾದಕೀಯ : ಮದುವೆಗಳಲ್ಲಿ ಮದ್ಯಪಾನ

ಮಾನವ ಸಂಘಜೀವಿ. ಮಾನವನು ಸಂಘಟನೆ ಇಲ್ಲದೆ ಬದುಕಲಾರ, ಸಂಘಟನೆಯಾದಾಗ ತನ್ನ ವ್ಯಕ್ತಿಗತವಾದ ಸಂಕಷ್ಟಗಳನ್ನು ಮರೆತು ಎಲ್ಲರೊಡನೆ ಕೂಡಿ ಕಲೆತು ತಿಂದು ಕುಡಿದು ಕುಪ್ಪಳಿಸಿ, ನೃತ್ಯವಾಡುವ ಪ್ರವೃತ್ತಿ ಬೆಳೆದು ಬರುತ್ತದೆ. ಅದೇ ರೀತಿ ಗೌಡರಲ್ಲಿಯೂ ಸಹ ಹಬ್ಬ ಹರಿದಿನ ಮದುವೆ ಮುಂಜಿಗಳಲ್ಲಿ ಊಟ ಉಪಚಾರ, ಕುಡಿತ, ಕುಣಿತ ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ಮದ್ಯಪಾನ ಸಾಮಾನ್ಯ ಮನುಷ್ಯನ ದೈನಂದಿನ ಜೀವನದಲ್ಲಿ ತನ್ನ ವ್ಯಕ್ತಿಗತ ಚಿಂತೆಯನ್ನು ಮರೆಯುವುದಕ್ಕಾಗಿ ಅಳವಡಿಸಿಕೊಂಡದ್ದು, ಕೆಲ ಸಮಯ ಅದು ಅತೀ ಹೆಚ್ಚಾಗಿ, ತನ್ನ ದೇಹದ ಆರೋಗ್ಯ ಹಾಗೂ ಸಂಪತ್ತನ್ನು ಕಳೆದುಕೊಳ್ಳುವುದಕ್ಕೂ ಹಾಗೂ ಸಮಾಜದಲ್ಲಿ ಅಶಾಂತಿ ಉಂಟಾಗಲೂ ಕಾರಣವಾಗುತ್ತದೆ.

ಕೊಡಗಿನ ಗೌಡರ ಮದುವೆಗಳಲ್ಲಿ ಕುಡಿತದ ಹಾವಳಿ ದಿನಂದಿನಕ್ಕೆ ಹೆಚ್ಚಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಒಂದು ಮದುವೆಯಲ್ಲಿ ಒಬ್ಬರು ಇನ್ನೂರು ಬಾಟಲಿ ಮದ್ಯ ಸೇರಿಸಿದರೆ, ಇನ್ನೊಬ್ಬರು ಅವರಿಗಿಂತ ನಾವೇನು ಕಡಿಮೆ ಎಂದು ನಾಲ್ಕುನೂರು ಬಾಟಲಿ ಮದ್ಯ ಸೇರಿಸಿ, ಮಿನಿ ಬಾರನ್ನೆ ತೆರೆಯುತ್ತಾರೆ. ಇದು ಶ್ರೀಮಂತರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹಣವಂತರು ಅನುಸರಿಸುವ ದಾರಿಯನ್ನು ತನ್ನ ಅಂತಸ್ಥೇನೂ ಕಡಿಮೆ ಇಲ್ಲವೆಂದು ತೋರಿಸಿಕೊಳ್ಳುವುದಕ್ಕೆ ಸಾಲ ಮಾಡಿಯಾದರೂ ಮದ್ಯವನ್ನು ಕೊಡಿಸುವ ಪ್ರವೃತ್ತಿ ಬೆಳೆಯುತ್ತಿದೆ.

ಮದ್ಯಸೇವನೆ ಇಲ್ಲದ ಮದುವೆ, ನೀರಸವಾದ ಮದುವೆ ಎಂಬ ಭಾವನೆ ಗೌಡ ಜನರಲ್ಲಿ ಉಂಟಾಗುವಷ್ಟು ಪರಿಸ್ಥಿತಿಯಾಗಿ ಗೌಡ ಸಮಾಜದ ಜನರು ಮದ್ಯಸೇವನೆಗಾಗಿ ವೆಚ್ಚ ಮಾಡುವುದು ಹೆಚ್ಚು ಹೆಚ್ಚಾಗಿ ಅದೊಂದು ಹುಚ್ಚು ಕೆಟ್ಟ ಸಂಪ್ರದಾಯವಾಗಿ ಪರಿಣಮಿ ಇದು ವರದಕ್ಷಿಣೆ ಪಿಡುಗಿನಂತೆಯೇ ಸಮಾಜದ ಸಾಮಾನ್ಯ ಜನ ಜಿಗಣೆಯಂತೆ ಕಾಡುತ್ತಿರುತ್ತದೆ.

ಒಬ್ಬ ಕಾಮುಕನಿಗೆ ತನ್ನ ತೀಟೆಯನ್ನು ತೀರಿಸಲು ಅ ಏರ್ಪಾಡುಗಳಿರುವಂತೆ ಕುಡುಕರಿಗೆ ಪರವಾನಗಿ ಪಡೆದ ಅ ಮುಂಗಟ್ಟುಗಳಿಲ್ಲವೆ? ಅಲ್ಲಿ ತಮಗೆ ಬೇಕಾದಷ್ಟು ಕುತ್ತಿಗೆ ಕುಡಿದು ಬರಲಿ. ಆದರೆ ಸಮಾಜದೊಳಗೆ ಸಮಾಜದ ಆವರಣದ ಅಲ್ಲ, ಗೌಡ ಕಲ್ಯಾಣ ಮಂಟಪಗಳಲ್ಲಿ ಪಾನ ನಿಷೇಧ ಹೇರಬೇಕು. ಕುಡುಕರಿಗೆ ಮುಕ್ತ ವಾತವರಣವನ್ನು ಮಕ್ಕಳಾದಿಂ ಪರೋಕ್ಷ ಆಗಿ ಸಮಾಜವೆ ಕಲ್ಪಿಸಿಕೊಟ್ಟಂತಾಗುವುದು ಅಲ್ಲವೇ. ಮೊದಲು ತಪ್ಪಬೇಕು. ಮದುವೆ ಜಂಬರಗಳಲ್ಲಿ ಕಳ್ಳ್ ಕೊಟ್ಟರೆ ತನ್ನ ಘನತೆಯು ಹೆಚ್ಚುವುದಿಲ್ಲ. ಈ ಸಾಂಕ್ರಾಮಿಕ ಪಿಡ ಪ್ರಾರಂಭವಾಗಿದ್ದು ಈಗ್ಯೆ 15-20 ವರ್ಷಗಳಿಂದ ಆದ ಅತೀಯಾಗಿದ್ದು ಇತ್ತೀಚಿನ ದಿನಗಳಲ್ಲಿ. ಈ ಸಂಕ್ರಾಮಿಕ ಪಿಡು ತೊಡೆದು ಹಾಕಲು ಜನಾಂಗದ ಹಿತ ಚಿಂತಕರು, ಪ್ರಜ್ಞಾವಂ ಸ್ಥಿತಿವಂತರು, ಬಡವ ಬಲ್ಲಿದರು, ಜನಾಂಗ ಪ್ರೇಮಿಗಳು, ಯ ಪೀಳಿಗೆಯ ಯುವಕ ಯುವತಿಯರು ಮೇಲಾಗಿ ಗೌಡ ಸಮಾಜ ಕೊಡಗುಗೌಡ ವಿದ್ಯಾಸಂಘ, ಗೌಡ ಸಾಂಸ್ಕೃತಿಕ ಅಕಾಡೆಮಿ ವ ಮುಖ್ಯವಾಗಿ ಮಹಿಳಾ ಒಕ್ಕೂಟವು ಈ ನಿಟ್ಟಿನಲ್ಲಿ ಇತರ ಸಂಸ್ಥೆ ಸಹಯೋಗದಿಂದಲೂ ಯುವಕ ಯುವತಿಯರ ಸಹಕಾರದಿಂದ ಈ ಮೇಲಿನ ವಿಷಯದಲ್ಲಿ ಚಿಂತಿಸಿ ಒತ್ತಡ ತಂದು ನಿಷೆ ಹೇರುವಲ್ಲಿ ಜಯಶೀಲರಾಗುವರೇ ಕಾದು ನೋಡೋಣಾ, ಅಲ್ಲ

ಚುನಾವಣೆ

ಬಂದ್‌ಬುಡ್ತಲ್ಲ ! ಚುನಾವಣೆ,
ನೋಡಿಕೆ ಬೊತ್ತು ಅವ್ರ ಬವಣೆ ।
ಕೊಟ್ಟವೆ ಕೈಗೆ ನೋಟು
ಕೇಳಿವೆ ಎಲ್ಲರ ಓಟು ।
ಕಡೆಗಾಣ್ಸುವೆ ಎಲ್ಲರ ಹಿತ
ಸಿಕ್ಕಿರೆ ಸಾಕ್ ಅವ್‌ಕೆ ಮತ ।
ಮಾಡ್ಟೆಲ್ಲಾ ಅನ್ಯಾಯ ಅನಾಚಾರ
ಮತ್ತೆ ಮಾಡುವೆ ಪೂಜೆ ಪುರಸ್ಕಾರ ।
ಚುನಾವಣೆಗ್ ಮುಂಚೆ......
ಎಲ್ಲವ್‌ಕೂ ಸೀರೆ-ಪಂಚೆ ।
ಎತ್ತಲೂ ದುಡ್ಡುದ್ ಮಳೆ
ಸುತ್ತಲೂ ಕಳ್ಳ್‌ದು ಹೊಳೆ ।
ಬಳ್ಸುವೆ ಶುಕುನಿನ ಯುಕುತಿ
ಓಟಿಗಾಗಿ ಭೀಮನ ಶಕುತಿ ।
ಮತದಾರಾದ್ರೇನ್ ಜೀವಂತ - ಶವ
ಸಾಕವ್‌ಕೆ ಇದ್ದರೆ ಸಿರಿ ವೈಭವ ।
ಗರೀಬ್‌ರ ಚಿಂತೆ ಆಮೇಲೆ
ಅದರ ದೃಷ್ಟಿ ಕಂತೆ ಮೇಲೆ ।
ಬಡವನ ಮನೆ ಭಣಭಣ,
ಇವ್ನ ಖಜಾನೆ ಝಣಝಣ ।
ಇರ್‌ಕಾಕನ ತಲೆಲಿ ನಿಶೆ
ಕೊಟ್ಟವೆ ಬೇಕಾದಷ್ಟ್ ಭರವಸೆ ।
ಒಮ್ಮೆ ಹತ್ತಿದೆ ಆಸನ
ಆತ್ ! ಭರವಸೆಗವಸಾನ ।
ತುಂಬಿದೆ ಪುಢಾರಿಗಳ ಕೋಶ
ಅದೆ, ದೇಶ ಸರ್ವನಾಶ.

ಮೂಡಗದ್ದೆ ಕೃಪಾ ಈರಪ್ಪ,
ತಿತಿಮತಿ

ಕೊಡಗು ಸಂಗಾತಿ

ಕೊ - ೞರಿಕೆಯ ಮೇರೆಗೆ
ಡ - ಮರುಗೋಪಾದಿಯಲ್ಲಿ
ಗು - ಡುಗು ಸಿಡಿಲು ನಡುವೆ
ಸಂ - ತೋಷದಿಂದ ತನ್ನನ್ನು ಅರ್ಪಿ
ಗಾ - ನ ಕೋಗಿಲೆಯ ಹಾಗೆ
ತಿ - ರುಗಿ ತಿರುಗಿ ಹೇಳುತಿಹುದು
ಗೌಡ ಬಾಂಧವರಿಗೆ ಈ ನಮ್ಮ
ಕೊಡಗು ಸಂಗಾತಿ

ಮುಕ್ಕಾಟಿ ಎನ್. ರವಿಕುಮಾ
ಚೇರಂಬಾ

ತ್ರ ಪರಿಚಯ : ಕ್ರೀಡೆಯಲ್ಲಿ ಮಹಿಳೆಯರು



ವಿಳಾಸ :
352, ಮಹಡಿ,
2ನೇ ಎ ಮುಖ್ಯ ರಸ್ತೆ,
6ನೇ ಕ್ರಾಸ್, ಎಂ. ಬ್ಲಾಕ್,
ಕುವೆಂಪುನಗರ, ಮೈಸೂರು-23

ಶ್ರೀಮತಿ ವಿಜಯರಮೇಶ್‌ರವರ ಜನನ : 21-1-1955ರಲ್ಲಿ ಡ್ಯದಲ್ಲಿ ಜನನವಾಯ್ತು. ಇವರು ಹಿರಿಯರ ವಿಭಾಗದಲ್ಲಿ ತರಾಷ್ಟ್ರೀಯ ಮಟ್ಟದ ಕ್ರೀಡಾಪಟು. ಎರಡು ಬಾರಿ ವಿದೇಶಕ್ಕೆ ಡಾಪಟುವಾಗಿ ತೆರಳಿದ್ದಾರೆ. ಮೊದಲ ಬಾರಿ 1996ರಲ್ಲಿ ್ಸನಲ್ಲಿ ನಡೆದ ಕ್ರೀಡಾಕೂಟದ ಲಾಂಗ್‌ಜಂಪ್ ವಿಭಾಗದಲ್ಲಿ ್ನದ ಪದಕವನ್ನು ಗಳಿಸಿದ್ದಾರೆ. 1998ರ ಡಿಸೆಂಬರ್‌ನಲ್ಲಿ ಲೇಷಿಯಾದಲ್ಲಿ ನಡೆದ ಮಹಿಳಾ ಕ್ರೀಡಾಕೂಟದಲ್ಲಿ ಭಾಗವಹಿಸಿ 0 ಮೀಟರಿನ ಹರ್ಡಲ್ಸ್‌ನಲ್ಲಿ ಚಿನ್ನದ ಪದಕವನ್ನು ಗೆದ್ದಿದ್ದಲ್ಲದೆ, ಜಂಪ್‌ನಲ್ಲಿಯೂ ಚಿನ್ನದ ಪದಕ ಇವರ ಕೊರಳನ್ನು ಧರಿಸಿತ್ತು. ತ್ತು ಇದೇ ಕೂಟದ ಲಾಂಗ್ ಜಂಪಿನಲ್ಲಿ ಬೆಳ್ಳಿ ಪದಕವನ್ನು ಪಡೆದು ರ್ನಾಟಕ ರಾಜ್ಯಕ್ಕೂ, ಭಾರತಕ್ಕೂ ಕೀರ್ತಿಯನ್ನು ತಂದಿರುತ್ತಾರೆ. ನಲ್ಲದೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಮಹಿಳಾ ಕೂಟದಲ್ಲಿ ಎರಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಹಾಲಿ ಈಗಲೂ ಸಹ ತಮ್ಮ ಟುವಟಿಕೆಯನ್ನು ಮುಂದುವರೆಸಿಕೊಂಡು ಬರುತ್ತಿರುವ ಇವರ ಧನೆ ಅಮೋಘ. ಕಳೆದ ಸಾಲಿನಲ್ಲಿ ಹಿರಿಯರ ಮಹಿಳಾ ವಿಭಾಗ ಲ್ಲಿ ಅಮೆರಿಕದಲ್ಲಿ ನಡೆಯಲಿದ್ದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದರೂ ಪ ಪ್ರಾಯೋಜಕರ ಕೊರತೆಯಿಂದ ಹೋಗಲಾಗದಿರುವುದಕ್ಕೆ ತಮ್ಮ ಸಹಾಯಕತೆಯನ್ನು ತೋಡಿಕೊಂಡು ಬೇಸರದಲ್ಲಿರುವ ಇವರು ಹಿಳಾ ಲೋಕದ ಚಿನ್ನದ ಮುಕುಟ ಮಣಿ ಎಂದನ್ನಬೇಕು.

ಇವರಿಗೆ ಹಲವಾರು ಸಂಘ ಸಂಸ್ಥೆಗಳು, ಸನ್ಮಾನಗಳನ್ನು ನೀಡಿ ೌರವಿಸಿದ್ದಾರೆ. ಕನ್ನಡ ರಾಜ್ಯೋತ್ಸವದ ಬಿರುದು ಬಾವಲಿಗಳನ್ನು ತತವಾಗಿ 4 ವರ್ಷಗಳಿಂದ ಪಡೆಯುತ್ತಾ ಬಂದಿದ್ದಾರೆ.

ಸದ್ಯ ಸಮಾಜಸೇವಕಿಯಾಗಿ, ತಮ್ಮ ಕಾರ್ಯಕ್ಷೇತ್ರವನ್ನು ಸ್ತರಿಸಿಕೊಂಡಿರುವ ಇವರು ರಾಜಕೀಯವಾಗಿ ಜನತಾದಳದ ಮೈಸೂರು ನಲಯದ ಮಹಿಳಾ ಉಪಾಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬ್ಬ ಮಹಿಳೆಯಾಗಿ ತನ್ನ ಕೈಲಾದ ಸಹಾಯವನ್ನು ನೀಡಲು ಇವರು ಂದೆ ಮುಂದೆ ನೋಡುವುದಿಲ್ಲ. ಇವರ ಚೈತನ್ಯಮಯ ಟುವಟಿಕೆಯು ನಿಜವಾಗಲೂ ಮೆಚ್ಚತಕ್ಕದ್ದೆ. ಇವರು ಚಿಕ್ಕಮಕ್ಕಳಿಗೆ ಕ್ರೀಡಾತರಬೇತಿಯನ್ನು ಸುಮಾರು 10ವರ್ಷಗಳಿಂದ ನೀಡುತ್ತಾ ಬಂದಿರುತ್ತಾರೆ. ಚಿಕ್ಕ ವಯಸ್ಸಿನಿಂದಲೇ ಕ್ರೀಡಾರಂಗದಲ್ಲಿ ಬಹಳ ಆಸಕ್ತಿ ಇವರಿಗೆ. ಜೀವನದಲ್ಲಿ ಸಾಕಷ್ಟು ನೋವು ನಲಿವು ಕಂಡು ಮುಂದೆ ಬಂದಿರುವ ಇವರು ನಿಜಕ್ಕೂ ಸಾಹಸಿಗರು.

ಇವರಿಗೆ ಇಬ್ಬರು ಮಕ್ಕಳು. ಮಕ್ಕಳು ಕೂಡ ಒಳ್ಳೆಯ ಕ್ರೀಡಾಪಟುಗಳು. ಮಗ ವಿನಯನಾಗ್ ವಿದ್ಯಾವರ್ಧಕ ಶಾಲಾ ಕಾಲೇಜಿನಲ್ಲಿ ಬಿ. ಬಿ. ಎಂ. ಓದುತ್ತಿದ್ದಾನೆ. ಇವನು ಉತ್ತಮ ಸೈಕ್‌ಲಿಸ್ಟ್ ಹಾಗೂ ಟ್ರೆಕ್ಕಿಂಗ್ ಕೂಡ. ಇವರ ಮಗಳು ಅಕ್ಷತಾ ಒಳ್ಳೆಯ ಕ್ರೀಡಾಪಟು, 3ವರ್ಷಗಳಿಂದಲೂ ಬೆಸ್ಟ್ ಅಥ್ಲೆಟಿಕ್ ಬಿರುದು ಪಡೆದಿದ್ದಾಳೆ. ಇವಳು ನಗರದ ಮರಿಮಲ್ಲಪ್ಪ ಶಾಲೆಯಲ್ಲಿ 10ನೆ ತರಗತಿಯಲ್ಲಿ ಈ ವರ್ಷ 90% ಅಂಕ ಗಳಿಸಿದ್ದಾಳೆ. ಇವರ ಪತಿ ರಮೇಶ್‌ಗೌಡ ಒಳ್ಳೆಯ ಮರಾಥನ್ ಕ್ರೀಡಾಪಟು. ಇವರು ಮಾಜಿ ಇಂಡಿಯನ್ ಏರ್‌ಪೋರ್ಸ್ ವ್ಯಕ್ತಿಯಾಗಿದ್ದು ಈಗ ಕೆನರಾ ಬ್ಯಾಂಕ್‌ನ ಉದ್ಯೋಗಿಯಾಗಿ ಸ್ವಇಚ್ಛೆಯಿಂದ ನಿವೃತ್ತಿ ಬಯಸುವ ಹಂತದಲ್ಲಿದ್ದಾರೆ.

ಹಾಲಿ ಮೈಸೂರಿನ ಕುವೆಂಪುನಗರದಲ್ಲಿ ವಾಸವಾಗಿರುವ ಇವರ ಪತಿ ರಮೇಶ್‌ಗೌಡ ಎಲ್ಲಾ ವಯಸ್ಸಿನ ಪುರುಷರಿಗೆ ಹಾಗೂ ಮಹಿಳೆಯರಿಗೆ ಕ್ರೀಡಾ ತರಬೇತಿಯನ್ನಲ್ಲದೆ, ಉಚಿತವಾಗಿ ವೈದ್ಯಕೀಯ ಸಲಹೆಯನ್ನು ಸಹ ನೀಡುತಲಿದ್ದಾರೆ.

ಮೈಸೂರು ನಗರದ ವಿಜಯನಗರದ ಮೊದಲ ಬಡಾವಣೆಯಲ್ಲಿ ಇವರ ಈ ಮಹಿಳಾ ಕ್ರೀಡಾರಂಗದ ಅಮೋಘ ಸೇವೆಗೆ ಕರ್ನಾಟಕ ರಾಜ್ಯಸರಕಾರವು ನಿವೇಶನ ನೀಡಿ ಗೌರವಿಸಿದೆ. ಇಲ್ಲಿ ತನ್ನ ಮುಂದಿನ ಸಾಂಸಾರಿಕ ಜೀವನವನ್ನು ನೆಮ್ಮದಿಯಿಂದ ಕಳೆಯಲು ಬಯಸಿರುವ ಇವರ ಜೀವನದ ಆಶೋತ್ತರಗಳೆಲ್ಲವೂ ನೆರವೇರಲಿ ಎಂದು ಭಗವಂತನಲ್ಲಿ ಹಾರೈಸೋಣವೇ.

ಲೇಖನ : ಪಟ್ಟಡ ಪ್ರಭಾಕರ.

ಬಲು ದೊಡ್ಡ ಆಸ್ತಿ

ತಲೆ ತಲೆ ಮಾರ್‌ಂದ ಬಂದ ಜಮ್ಮಾ ಆಸ್ತಿ
ತಾತ ಮುತ್ತಾತಗಳ ಕೈ ಜಾರಿ ಬಂದ ಆಸ್ತಿ ||
ಪಂಡ್ ಗಂಡ್ ನೋಡಿಕೆ ಬಂದವುಕೆ ತೋರ್ಸಿದ ಆಸ್ತಿ
ಇದೆಲ್ಲಾ ನಂದೆತ ಕೈ ತೋರ್ಸಿ ಮಿಷಿ ಪಟ್ಟ ಆಸ್ತಿ ||
ಅಂದ್ ಅಣತಮ್ಮಂಗ ಕತ್ತಿಕೋವಿ ಹಿಡ್ಪೊ ಆಸ್ತಿಗಾಗಿ
ಇಂದ್ ಇವರ ಮನೆ ಮುಂದೆ ಕಾರ್ ಗೀರ್ ಇರ್‍ವೊಂದ್ ಆಸ್ತಿ ||
ಅಂದ್ ರಾಜಕಾರ್‍ನಿಗ ಬಾಚಿಕೊಡಿಟ್ಟೊ ಕೋಟಿ ಕೋಟಿ ಆಸ್ತಿ
ಇಂದ್ ಇವರ ಮಕ್ಕೆಲ್ಲಾ ದಿಕ್ಕ್ ಪಾಲೋದೊ ಇದೊಂದು ಆಸ್ತಿ ||
ಅಂದ್ ಅರೆಭಾಷೆ ಗೌಡರಿಗೆಲ್ಲಾ ಗುರುಕಾರೋಣ ದೊಡ್ಡ ಆಸ್ತಿ
ಇಂದ್ ನಮ್‌ಗೆಲ್ಲವುಕ್ಕೆ ಕೊಡಗು ಸಂಗಾತಿ ಬಲುದೊಡ್ಡ ಆಸ್ತಿ ||

ಪಾಣತ್ತಲೆ ಶಿವಣ್ಣ ನಂಜಪ್ಪ
ಬೆಂಗಳೂರು - 16

ಹಲೋ ಬ್ಯಾಂಗ್ಲೂರ್

ಕೆಲಪ್ಪ ಮಡ್ಡರ್‌ಗ 6ನೇ ಕ್ಲಾಸ್ 3ನೇ ಕ್ಲಾಸ್ ಓದಿ ಬೆಂಗ್‌ಳೂರಿಗೆ ಹೋಗಿ ಯಾವುದೊ ಕೆಲ್ಸಕ್ಕೆ ಸೇರಿ ಟಿಪ್ ಟಾಪ್ ಆಗಿ ಬರ್‌ತಿದ್ದದರ ನೋಡಿ ನಂಗೂ ಬೆಂಗ್‌ಳೂರಿಗೆ ಹೋಕುತ್ತ ಆಸೆ ಆತ್. ಇವೆ ಇಸ್ಟ್ ಜೋರಾಗಿ ಬಾಕಾಕನ ಎಸ್.ಎಸ್.ಎಲ್.ಸಿ. ಓದಿದ ನಂಗೆ ಬಾರಿ ದೊಡ್ಡ ಕೆಲ್ಸ ಸಿಕ್ಕುದುತೇಳಿ ನಾನ್, ನನ್ನ ಫ್ರೆಂಡ್ ದುಗ್ಗಂಡ ಚೋಮ ಇಬ್ಬರು ಸೇರಿ ರಾತ್ರೊರಾತ್ರಿ ಯಾರಿಗೂ ಗೊತ್ತಿಲ್ಲದಂಗೆ ಇರುವ ಎರಡ್ ಸೂಟ್ ಬಟ್ಟೆನ 50ಪೈಸೆ ಪ್ಲಾಸ್ಟಿಕ್ ಕವರ್‌ಲಿ ಹಾಕಂಡ್, ಯಾಗೋ ಪಣ್‌ಪುಳಿ ಮಾರಿ ಮಡಗಿಕಂಡಿದ್ದ 150ರೂ. ತಕ್ಕಂಡ್ ನಾನ್, ನನ್ನ ಫ್ರೆಂಡ್ ಚೋಮ ಇಬ್ಬರು ನೈಟ್ ಸರ್ವೀಸ್ ಬಸ್ಸ್ ಹತ್ತಿದೊ.

ಬೆಳಿಗೆ 6 ಗಂಟೆಗೆ ಬೆಂಗ್‌ಳೂರ್ ತಲುಪಿದೊ. ಹಂಗೆ ಬಿ.ಟಿ.ಎಸ್. ಬಸ್ಸ್ ಹತ್ತಿ ಮಾರ್ಕೆಟ್‌ಗೆ ಹೊಟ್ರೊ. ಬಸ್ಸ್‌ಲಿ ಜನ ಬಾರಿ ರಸ್ಸ್ ಇತ್ತ್. ಚೋಮ ನನ್‌ಗಿಂತ ಬಾರಿ ಮುಂದೆ ಹೋಗಿ ನಿಂತಿತ್ತ್. ನಾನ್ ಹಿಂದ್‌ಗಡೆ ನಿಂತ್ತಿದ್ದೆ. ಸ್ವಲ್ಪ ದೂರ ಹೋಗಿ ಆಕಾಕನ ರೋಡ್ ಸೈಡ್‌ಲಿ ಒಂದು ದೊಡ್ಡ ಸಂತೆ ಕಾಂಬಕ್ಕೆ ಸಿಕ್ಕಿತ್ ಅಲ್ಲೆ ಬಸ್ಸ್ ನಿಂತ್ತತ್ತ್. ಇದೆ ಬೆಂಗ್‌ಳೂರ್ ಮಾರ್ಕೆಟ್‌ತೇಳಿ ನಾನ್ ಅಲ್ಲೆ ಇಳ್‌ದ್ ಬುಟ್ಟೆ. ನನ್ನ ಫ್ರೆಂಡ್ ಚೋಮಂಗೆ ಬೆಂಗಳೂರಿಗೆ ಹೋಗಿ ಬಂದ್ ಅಭ್ಯಾಸ ಇರುದರ್‌ಂದ ಅಂವ ಬಸ್ಸ್‌ಲೇ ಮುಂದಕ್ಕೆ ಹೋತ್. ನಾನು ಅವನು ಬೇರೆ ಬೇರೆ ಆಗಿಬುಟ್ಟೊ. ನನ್ನ ಕೈಲಿದ್ದ 50 ರೂಪಾಯಿನೂ ಚೋಮನ ಕೈಲಿ ಆಗಿ ಹೋತ್. ಒಮ್ಮೆ ತಲೆಕೆಟ್ಟಾಂಗಾದರೂ ಧೈರ್ಯ ತಕ್ಕಂಡ್ ಕೆಲ್ಸ ಹುಡ್ಕಿಕೆ ಸುರು ಮಾಡ್ದೆ. ಒಂದು ದಿನ ಇಡೀ ಎಲ್ಲಾ ಫ್ಯಾಕ್ಟ್ರಿಗಳ್‌ಲ್ಲು ಕೆಲ್ಸ ಕೇಳ್ದೆ, ಯಾವ ಫ್ಯಾಕ್ಟ್ರಿಲೂ ಕೆಲ್ಸ ಇಲ್ಲೆಂತ ಹೇಳ್ದೊ. ಕೆಲವು ಫ್ಯಾಕ್ಟ್ರಿಗಳ್‌ಲಿ ನನ್ನ ಪಾಪತ್ ನೋಡಿ ಅಪ್ಲಿಕೇಷನ್ ಕೊಟ್ಟ್ ಹೋಗ್‌ತ ಹೇಳ್ದೊ. ಕೆಲ್ಸ ಸಿಕ್ಕಿರೂ ಫ್ಯಾಕ್ಟ್ರಿಗಳ್‌ಲಿ ಮಲಗಿಸಿಕಂಬದುಲ್ಲೇತ ಆಗ ಗೊತ್ತಾತ್. ಹಿಂಗೆ ಕೆಲ್ಸ ಹುಡ್ಕಿ ಹುಡ್ಕಿ ಆ ದಿನ ರಾತ್ರಿ ಆತ್. ರಾತ್ರಿ ಮಲಗುವ ಚಿಂತೆ ಬ್ಯಾರೆ ಸುರಾತ್. ಪುನಃ ದಾರಿ ಹುಡ್ಕಿಕಂಡ್ ಹೆಂಗೆಲ್ಲಾಗಿ ಮೆಜೆಸ್ಟಿಕ್ ಬಸ್ ಸ್ಟ್ಯಾಂಡ್‌ಗೆ ಬಂದೆ. ಆ ಹಸಿದ ಹೊಟ್ಟೆಲಿ ಟಿ. ವಿ. ನೋಡಿಕಂಡ್ ಬಸ್‌ಸ್ಟ್ಯಾಂಡ್ ಕುರ್ಚಿಲಿ ಕುದ್ದುಕೊಂಡೆ. ಬಾರಿ ಜನ ನನ್ನಂಗೆ ಟಿ.ವಿ. ನೋಡಿಕಂಡ್ ಕುದ್ದಿದ್ದೊ. ಅದರ್‌ಲಿ ಎಷ್ಟ್ ಜನ ನನ್ನ ಕಂಪನಿಯವು ಒಳತ ಗೊತ್ತ್‌ಲೆ, ಅಂತು ಬಸ್ಸ್ ಸ್ಟ್ಯಾಂಡ್ ಕುರ್ಚಿಲಿ ಕುದ್ದ್ ನಿದ್ರೆ ಮಾಡಿ ಬೆಳಿಗ್ಗೆ ಮಾಡ್ದೆ.

ಪುನಃ ಮಾರನೆ ದಿನ ಕೆಲ್ಸ ಹುಡ್ಕಿಕೆ ಸುರು ಮಾಡ್ದೆ. ಇನ್ನ್ ಫ್ಯಾಕ್ಟ್ರಿಗಳ್‌ಲಿ ಕೆಲ್ಸ ಹುಡ್ಕಿರೆ ಸಿಕ್ಕುದುಲೆತೇಳಿ ಹೋಟೆಲ್, ಬಾರ್‌ಗಳ್‌ಲಿ ಕೆಲ್ಸ ಹುಡ್ಕಿಕೆ ಸುರು ಮಾಡ್ದೆ. ಎಲ್ಲಾ ಕಡೆ ಹುಡ್ಕಿ ಕಡೆಗೆ ಸಾಯಂಕಾಲ ಆಕಾಕನ ಒಂದು ಹೈವೆ ಸೈಡ್ ಬಾರ್‌ಲಿ ಕೆಲ್ಸ ಸಿಕ್ಕಿತ್. ಬೆಂಗಳೂರಿಗೆ ಹೋಗಿ ಪ್ರಥಮ ಕೆಲ್ಸ ಸಿಕ್ಕಿದ್ ಬಾರ್‌ಲಿ ಸಪ್ಲೈಯರ್ ಕೆಲ್ಸ. ಅಂತು ಹೆಂಗಾರಾಗಿ ಹೊಟ್ಟೆಗೆ ಊಟ ಗ್ಯಾರೆಂಟಿ ಆತ್. ಮ್ಯಾನೇಜರ್ ಒಳಗಡೆ ಕರ್‌ಕಂಡ್ ಹೋಗಿ ಹಸಿದ ಹೊಟ್ಟೆಗೆ ಪಸ್ಟ್ ಎರಡ್ ಪರೋಟ ಕೊಡ್ಸಿತ್. ಎರಡ್ ದಿನಂ‍ ಹಸಿದ

ಹೊಟ್ಟೆಗೆ ಅದ್ ಯಾವ ಮೂಲೆಗೂ ಸಾಲದೆ ಹೋತ್. ಕ
ಅದೇ ಬಾರ್‌ಲಿ ಸಪ್ಲೈಯರ್ ಕೆಲ್ಸ ಸುರು ಮಾಡ್ದೆ. ಹಿಂಗೆ
ಕಳಿತಿದ್ದಂಗೆ ಒಂದು ದಿನ ಹೊರಗಡೆ ಸುತ್ತಿಕೆತ ಹೋಗಿದ್ದೆ.
ಬ್ಲಾಕ್‌ಲಿ ಹೋಗಿ ಸೆಕೆಂಡ್ ಬ್ಲಾಕ್‌ಲಿ ತಿರ್‌ಗಿದಷ್ಟೆ ತಡ. ಆಕಡೆ
ಹಾಯಿಸಿರೆ ಯಾವುದೋ ಸಿನಿಮಾದ ಹಿರೋಯಿನ್ ಬರು
ಒಂದು ಗೂಡೆ ಬರ್‌ತುಟ್ಟು. ತುಟಿಗೆ ಮೆತ್ತಿದ ಆ ಲಿಪ್‌ಸ್ಟಿಕ್
ಹಗಲ್ ಟೈಂ ಟಾರ್ಚ್ ಬುಟ್ಟಂಗೆ ದೂರಕ್ಕೆ ಕಾಣ್‌ತ್ತಿತ್ತ್. ಕೂ
ಹೆಗಲ್ ಮ್ಯಾಲೆ ಬೀಳ್‌ತುಟ್ಟು. ಹತ್ರ ಹತ್ರ ಬರ್‌ತ್ತಿದ್ದಂಗೆ ಆ
ಹಾಕಿದ ಪ್ಯಾಂಟ್ ನೋಡಿ ನಮ್ಮ ತಾತನ ಆ ದೊಡ್ಡ ಗೀಟ್ ಗಿ
ಸುರಾಲ್‌ದ್ ನೆನ್‌ಪುಬಾತ್. ಅವಳ ಶರ್ಟ್ ಮಾತ್ರ ನಮ್ಮ ಅ
ಉದ್ದ ಕೈ ಜಾಕೇಟ್ ತರ ಕಾಣ್‌ತ್ತಿತ್ತ್. ಕಾಲಿಗೆ ಹಾಕಿದ ಚಪ್ಪಲ
ಅಡಿಬಾಗ ನೋಡ್‌ರೆ ಹಳೆ ಸವುದ್ ಹೋದ ಪಿಕಾಸಿತರ ಕಾಣ್‌ತಿ
ದೂರಂದಲೇ ಇಷ್ಟ್ ನೋಡಿ ಆಕಾಕನ, ಆ ಗೂಡೆ ಹತ್ರಕೆ ಬ
ತಲುಪಿಬುಟ್ಟಿತ್. ಒಂದೇ ಸಲ ನನ್ನ ಮುಖ ನೋಡಿ ಹಲೊ
ಹೇಳ್‌ತ್. ನಂಗೆ ಮಾತ್ರ ಆ ಗೂಡೆ ಯಾರ್‌ತ ಗೊತ್ತಾತ್ಲೆ.
ಬೆಂಗ್‌ಳೂರ್‌ಲಿ ನಂಗೆ ಹಲೋ ಹೇಳವು ಯಾರ್‌ತೇಳಿ ಯೋ
ಮಾಡಿಕಂಡ್ ಮುಖ ನೋಡ್‌ತ್ತ ನಿಂತ್‌ಬುಟ್ಟೆ. ಆಗ ಆ ಗೂ
"ಅಯ್ಯೊ ನನ್ನನ್ನು ಯಾರುಂತ ಗೊತ್ತಾಗಿಲ್ವ. ನಾನು ಹುಲ್ಲು
ಗೌರಿ ಅಲ್ವ, ಏನು ಮುಖ ನೋಡ್ತಾನೆ ನಿಂತ್ತಿದ್ದೀರಾ. ಇ
ಗೊತ್ತಾಗಿಲ್ವ" ತ ಕೇಳ್ತ್. ಕ್ಷಣ ಮಾತ್ರಲಿ ನನ್ನನ್ನೇ ನಾನೇ ನಂಬದ
ಬುಟ್ಟೆ. "ಅಂದ್ ಮಾರುದ್ದ ಜಡೆ ಬುಟ್ಟ್, ಲಂಗ ಜಂಪ
ಹಾಕಿಕಂಡ್, ಕಿಣಿ ಕಿಣಿತ ಓಡಾಡಿಕಂಡ್ ಇದ್ದ ಗೌರಿ ಏಳನೆ ಕ್ಲಾಸ
ಮೂರು ವರ್ಷ ಪೈಲ್ ಆಗಿ ಸುಟ್ಟ್‌ತಿಂಬಕೆ ಒಂದಕ್ಷರ ಕನ್ನ
ಸರಿಯಾಗಿ ಓದಿಕೆ ಬರಿಯಕೆ ಬಾರದೆ ಒಂದ್ ವರ್ಷ ಬಾಣೆಲಿ ದನ
ಮೇಯಿಸಿ ಈಗ ಬೆಂಗ್‌ಳೂರಿಗೆ ಬಂದ್ ಫ್ಯಾಕ್ಟ್ರಿ ಸೇರಿ ಎರಡ್ ವರ್ಷ
ಅರೆಬಾಷೆನೆ ಮರ್ತ್ ಹೋಗಿ, ಕನ್ನಡನೇ ಮಾತಾಡ್‌ತುಟ್ಟು. ಕನ್ನ
ನಾಡ್‌ಲಿ ಹುಟ್ಟಿ, ಬೆಳ್‌ದ್ ಕರ್ನಾಟಕದ ರಾಜಧಾನಿಲಿ ಕನ್ನ
ಮಾತಾಡ್ದು ತುಂಬಾ ಸಂತೋಷ. ಆದ್ರೆ 'ನನ್ನ ನೆರೆಮನೆಯವು
ನನ್ನ ಜಾತಿಯವುಳು, ಅಲ್ಲದೆ ನನ್ನ ಹತ್ರದ ನೆಂಟ್ರ ಕೂಡ ಅ
ಅರೆಭಾಷೆನೆ ಮಾತಾಡ್‌ತ್ತಿದ್ದ ಗೌರಿ ಈಗ ಅರೆಭಾಷೆ ಗೊತ್ತಿ
ದವರಂಗೆ ಕನ್ನಡ ಮಾತಾಡ್ದು ನೋಡಿ ಕಪಾಲ್ ಮ್ಯಾಲೆ ಎರ
ಬಾರ್‌ಸುವಷ್ಟು ಸಿಟ್ಟ್ ಬಾತ್. ಆದ್ರೂ ನಾವು ಒಟ್ಟಿಗೆ ಒಂದೆ ಕ್ಲಾಸ್
ಓದಿದ ಪರಿಚಯಕ್ಕಾದರ್ ಅವುಳಾಗಿಯೇ ಈ ಸಿಟಿಲಿ ನನ್ನ
ಮಾತಾಡ್ಸಿತಲ್ಲಾಂತೇಳಿ ಖುಷಿ ಪಟ್ಟ್ ಅಡ್ರಾಸ್ ಕೇಳಿಕಂಡ್ ಗುಡ
ಬೈ ಹೇಳಿ ಬಾರ್‌ಗೆ ಹೋದೆ.

ಅಂದ್ ಸಾಯಂಕಾಲ ಗಿರಾಕಿಗ ಬಾರಿ ಕಮ್ಮಿ ಇತ್ತ್. ಯಾಕೊ
ನನ್ನ ಟೇಬಲ್‌ಲಿ ಬಾರಿ ದೊಡ್ಡ ಮನ್ಸ ಬಂದ್ ಕುದ್ದಂಗೆ ಕಂಡೆ ಓ
ಹೋಗಿ "ಏನ್ ಬೇಕ್ ಸಾರ್"ತ ಕೇಳ್ದೆ. ಗಿರಾಕಿ "ಒಂದ್ ನಾಕ
ಔಟ್ ಬೀರ್ ತಕಂಡ್ ಬಾ, ಆಮೇಲೆ ತಿನ್ನಲಿಕೆ ಏನೇನ್ ಇದೆತ
ಕೇಳ್ತ್. ಅದಿಕ್ಕೆ "ತಿನ್ನಲಿಕೆ ಚಿಕನ್ ಫ್ರೈ, ಚಿಲ್ಲಿ ಚಿಕ್ಕನ್, ಚಿಕ್ಕನ
ಮಸಾಲ..... ಇಂತದೆಲ್ಲ ಉಟ್ಟುತ್ತಾ ಹೇಳ್ದೆ. ಆಗ ಆ ಗಿರಾಕಿ "ಅದೆಲ್ಲ
ಬ್ಯಾಡ ದೊಡ್ಡ ಅಯಿಲೆ ಮೀನ್ ಹೊರ್ದದ್ ಇದ್ದರೆ ತಕ್ಕಂಡ್ ಬ

ೞಿ ಹೇಳ್ತ್. ಈ ಮಾತ್ ಕೇಳಿ ಇಂವ ನಮ್ಮ ಕಡೆ ಹಳ್ಳಿಯವನೇ ರಕೂ ಗೊತ್ತಾತ್. ಇನ್ನೊಮ್ಮೆ ಮುಖನೆ ದಿಟ್ಟಿಸಿ ನೋಡ್ವೆ ಇಂವ ಯಾರೂ ಅಲ್ಲ ನನ್ನ ಜೊತೆಲಿ ಬೆಂಗ್ಳೂರಿಗೆ ಓಡಿ ಬಂದ ನನ್ನ ್ರೆಂಡ್ ದುಗ್ಗಂಡ ಚೋಮ. ಇವನ ಸೂಟ್ ಬೂಟ್, ೂಲಿಂಗ್ಲಾಸ್, ಕ್ಯಾಪ್ ಇದೆಲ್ಲ ನೋಡಿ ನಂಗೆ ತುಂಬಾ ಆಶ್ಚರ್ಯ ಗಿಹೋತ್. ಇಂವ ಇಷ್ಟ್ ಬ್ಯಾಗ ಇಷ್ಟ್ ಜೋರಾಗಿ ಆಗುಟ್ಟಲ್ಲಾ. ನೀನ್ ಏನ್ ಕೆಲ್ಸ ಮಾಡ್ತೋಳತ ಕೇಳ್ವೆ. ಅದಿಕೆ ಅಂವ ನಾನ್ ್ಯಕೊ ಕಂಪನಿಲಿ ಕೆಲ್ಸ ಮಚಾಡ್ತೊಳೆ ಹಂಗೆ ಓಂಗೆತೇಳಿ ಬಾರಿ ಾಚ್ಚಿಕಂಡತ್ತ್. ನನ್ನ ಪರಿಸ್ಥಿತಿ ನೋಡಿ ನಂಗೆ ತುಂಬಾ ಬೇಜಾರಾತ್, ಊರಿಗೆ ಹೋದರೆ ನಾನ್ ಬಾರ್‌ಲಿ ಸಪ್ಲೆಯರ್ ಕೆಲ್ಸ ಮಾಡ್ತುತ ಯಾರಿಗೂ ಹೇಳ್‌ಬೇಡ, ನಿನ್ನ ಕಂಪನಿಲಿ ಏನಾರ್ ಕೆಲ್ಸ ಖಾಲಿ ಇದ್ದರೆ ನ್ನ ಹೆಂಗಾದರ್ ಮಾಡಿ ಸೇರಿಸಿಬುಡ್‌ತೇಳ್ವೆ. ಆಗ ಅಂವ ಆತ್ ್ರೈ ಮಾಡ್ನೆ, ಈಗ ಹೆಚ್ಚಿಗೆ ಮಾತಾಡಿಕೆ ಟೈಂ ಇಲ್ಲೆ ಬರುವ ವಾರ ನ್ನೆಂತೇಳಿ ಹೊರಟ್ ಹೋತ್. ಹಿಂಗೆ ನನ್ನ ಜೀವನ ಮಾತ್ರ ಬಾರ್‌ಲಿ ಪ್ಲೈಯರ್ ಕೆಲ್ಸಲಿ ಸಾಗ್‌ತ್ತಿತ್ತ್.

ನಂಗೆ ಸಿನಿಮಾ ನೋಡುವ ಹುಚ್ಚು ಸ್ವಲ್ಪ ಜಾಸ್ತಿ. ಒಂದ್ ನ ಹತ್ರದ ಥಿಯೆಟರ್‌ಲಿ 'ಹಳ್ಳಿಮೇಸ್ಟ್ರು' ಸಿನಿಮಾ ಹಾಕಿದ್ದೊ. ಬಾರಿ ನಗಳ್‌ಂದ ಸಿನಿಮಾ ನೋಡದಿದ್ದ ನಾನ್ ಅಂದ್ ಸಿನಿಮಾಕೆ ಹೋಗಿದ್ದೆ. ಸಿನಿಮಾ ಬಾರಿ ಲಾಯ್ಕ ಇತ್ತ್. "ಕಾಯಿ ಕಾಯಿ ುಗ್ಗೆಕಾಯಿ" ಹಾಡ್ ಹೇಳಿಕಂಡ್ ದಾರಿಲಿ ಬರ್‌ತಿರ್‌ಕಾಕನ, ಅಲ್ಲೆ ಂದು ಗಾಡಿಲಿ ಪಾನಿಪುರಿ ಮಾರ್‌ತ್ತಿದ್ದೊ. ಪಾನಿಪುರಿ ತಿನ್ನುಕುತ್ತೇಳಿ ಗಾಡಿ ಹತ್ರ ಹೋದೆ. ಪಾನಿಪುರಿ ಮಾರ್‌ವನ ಡ್ರೆಸ್ ನೋಡಿ ಆಶ್ಚರ್ಯ ಆತ್. ಮೊನ್ನೆ ನನ್ನ ಫ್ರೆಂಡ್ ಚೋಮ ನನ್ನ ಬಾರ್‌ಗೆ ಹಾಕಿಕಂಡ್ ಬಂದಿದ್ದ ಅದೇ ಡ್ರೆಸ್ ಕೂಲಿಂಗ್ಲಾಸ್, ಕ್ಯಾಪ್ ಹಾಕಂಡಿದ್ದದ್ ನೋಡಿ ಈ ಚೋಮ ಇಲ್ಲೆಲ್ಲೊ ಇರಕುತ ಸಂಶಯ ಬಾತ್. ಪಾನಿಪೂರಿ ತಿಂದ್ ಪ್ಲೇಟ್ ಇಟ್ನೆತೇಳಿ ಗಾಡಿ ಹಿಂದ್‌ಗಡೆ ಹೋದೆ. ಅಲ್ಲೆ ಒಬ್ಬ ಪಂಚೆ ಉಟ್ಟ್‌ಕಂಡ್ ಪ್ಲೇಟ್ ತೊಳಿತ್ತಿತ್ತ್, ಬೆನ್ನ್ ಹಿಂದೆ ಶರ್ಟ್ ಹರ್ದ್ ವಿಶಾಲ ಕರ್ನಾಟಕ ಕಾಣ್‌ತ್ತಿತ್ತ್. ಹಿಂದೆಂದ ನೋಡ್‌ಕಾಕನ ಡೌಟ್ ಬಂದ್ ಮುಂದ್‌ಗಡೆ ಹೋಗಿ ನೋಡ್ವೆ. ಇಂವ ಯಾವ ಕ್ಲೀನರ್ ಹೈದನು ಅಲ್ಲ ನನ್ನ ಫ್ರೆಂಡ್ ಚೋಮ ಆಗಿತ್ತ್. ಮೈಕೋ ಕಂಪನಿಲಿ ಕೆಲ್ಸ ಮಾಡ್ತುತ ಸುಳ್ಳ್ ಹೇಳಿ ಇಲ್ಲಿ ಪಾನಿಪುರಿ ಪ್ಲೇಟ್ ತೊಳಿಯತುಟ್ಟು. ನನ್ನ ನೋಡ್‌ಕಾಕನ ಅವಂಗೆ ತಲೆ ಮ್ಯಾಲೆ ಪರ್ವತ ಬಿದ್ದಂಗೆ ಆತ್. ಇದೇರ ನಿನ್ನ ಮೈಕೋ ಕಂಪನಿತೇಳಿ ಜೋರಾಗಿ ಅಡ್ಡಡ್ಡ ಬಿದ್ದ್ ಕಟ್ಲ್‌ಗೆ ಬಡ್ಕಂಡ್ ನೆಗಾಡ್ಡೊ. ಅಷ್ಟಾಕನ ಕೋಳಿ ಕೂಂಗುದು ಕೇಳಿ ನಿದ್ರೆಂದ ಎಚ್ಚರ ಆಗೋತ್. ಅಮ್ಮ ಬಂದ್ "ಗಂಟೆ 7 ಆದರೂ ಏಳಿಕಾತ್‌ಲೆ ಎಷ್ಟೊಂದು ನಿದ್ರೆ ಮಾಡ್ತುತೇಳಿ ನನ್ನನ ನಿದ್ರೆಂದ ಏಳಿಸಿ ಬುಟ್ಟೊ. ಇದ್ ನಂಗೆ ಕಟ್ಟಿದ ಹಲೋ ಬೆಂಗ್‌ಳೂರ್ ಕನಸ್ಸೆ. ಅಲ್ಲದೆ ಮತ್ತೇನ್ ಹೇಳಿ?

ಅಮೆ ಬೆಳ್ಯಪ್ಪ ಶೇಖರ
ಚೆಟ್ಟಿಮಾನಿ.

ವೀರಗೀತೆ

ಕೊಡಗಿನವ ನಾನೇಂದು ಎದೆ ತಟ್ಟಿ ಹೇಳು ।
ಕೊಡಗಿಗೆ ಜಯವೆಂದು ಕೈಯೆತ್ತಿ ಹೇಳು ॥
ಕೊಡಗಿನ ನಾಡಿದುವೆ ಗುಡಿಯೆಂದು ತಿಳಿಯೇ ।
ಪೂಜಿಸು ವರತಾಯಿ ಕಾವೇರಿಯಮ್ಮೆಯನು ॥
ಕೊಡಗಿನ ನೆಲದಮಣ್ಣು ಬಂಗಾರವೆನ್ನು ।
ಕೊಡಗಿನ ವನಸಿರಿಯು ಸಿಂಗಾರವೆನ್ನು ॥
ಕೊಡಗಿನ ಜನತೆಯನ್ನು ವೀರ ಧೀರರೆನ್ನು ।
ಕೊಡಗಿನ ವನಿತೆಯನ್ನು ದೇವಕನ್ನೆಯೆನ್ನು ॥
ಅನುದಿನವು ನೆನೆಯುತ್ತಿರು ಕೊಡಗಿನ ನಾಡು ನುಡಿಯನ್ನು ।
ಮರೆಯದಿರು ನೀನೆಂದು ಅರೆ ಭಾಷೆಯ ಜನರನ್ನು ॥
ಕೊಡಗಿನ ಕಂದ ಇದೇ ನಿನಗೆ ಆನಂದ ।
ತನ್ನತನವ ಉಳಿಸಿ ಮೆರೆಯುತ್ತಿರು ನೀನಿಲ್ಲಿ ॥
ಕೊಡಗನ್ನು ಎಂದು ತಳ್ಳದಿರು ದಾಸ್ಯಕ್ಕೆ ।
ಕೊಡಗನ್ನು ನೀನು ಬಲಪಡಿಸು ಇಂದು ॥
ಕೊಡಗಿನವ ನಾನೇಂದು ಎದೆತಟ್ಟಿ ಹೇಳು ।
ಕೊಡಗಿಗೆ ಜಯವೆಂದು ಕೈಯೆತ್ತಿ ಹೇಳು ॥

ರಚನೆ : ಪಟ್ಟಡ ಮುತ್ತಣ್ಣ ಪ್ರಭಾಕರ

ಕೂಸು ಹುಟ್ಟಿರೆ ಹುಟ್ಟಕು ಶ್ರೀಮಂತರ ಮನೇಲಿ

ಹುಟ್ಟಿರೆ ಹುಟ್ಟು ನೀ ಶ್ರೀಮಂತರಾ ಮನೆಲಿ
ನಿನ್ನಾ ಬಾಳ್ ಬಂಗಾರಾ, ಆ ಕೊರೆ
ಎ ಕೂಸು ನೀ ಹುಟ್ಟು ಶ್ರೀಮಂತರ ಮನೇಲಿ !
ಬಡವ ಆದರೇನ್ ಕಣ್ಣೆಕುರುಡು ಆದರೇನ್
ಕಿವಿಯು ಕೇಳದಿದ್ದರೇನ್, ಬಾಯಿ ಬಾರದಿದ್ದರೇನ್
ಏ ಕೂಸು ನೀ ಹುಟ್ಟು ಶ್ರೀಮಂತರ ಮನೇಲಿ ॥ಹುಟ್ಟಿರೆ॥
ವಿದ್ಯೆನು ಕಲಿಸೂವೆ, ಬುದ್ಧೀನು ಹೇಳುವೆ ನಿಂಗೆ
ಕುಸಿ ಇದ್ದದ್ ಕೊಟ್ಟವೆ, ನಿಂಗೆ ಕುಸಿ ಇದ್ದದ್ ಕೊಟ್ಟವೆ
ಏ ಕೂಸು ನೀ ಹುಟ್ಟು ಶ್ರೀಮಂತರಾ ಮನೇಲಿ ॥ಹುಟ್ಟಿರೆ॥
ಬಡವನ ಮನೇಲಿ ನೀ ಹುಟ್ಟಿ ಏ ಕೂಸು
ಬಾರಾದ ಕಷ್ಟ ಬಂದೋತು, ಬಾರಾದ ಕಷ್ಟ ಬಂದೋತು
ಏ ಕೂಸು ಕಣ್ಣೀರ್ ಕಾವೇರಿ ಹೊಳೆಯಾಗಿ
ಹರಿದ್ ಹೋತು ॥ಹುಟ್ಟಿರೆ॥
ಬಂಜೆ ಆದರೂ ಆತಿತ್ತ್ ಈ ಕೂಸು ಬ್ಯಾಡಿತ್ತ್ ಯಾವ
ಜನ್ಮದ ಪಾಪ ಇದ್, ಯಾವ ಜನ್ಮದ ಪಾಪದ ಫಲವೇನೊ
ನೀ ಹುಟ್ಟು ಶ್ರೀಮಂತರ ಮನೇಲಿ ॥ಹುಟ್ಟಿರೆ॥

ಬೊಬ್ಬಿರ ಗೊಂಬೆ, ಕುಂಬಳದಾಳು

ಆಡಂಬರದ ಮದುವೆಗಳು ಸುಖಜೀವನಕ್ಕೆ ಸೋಪಾನವೇ?

ಪುಟ್ಟಯ್ಯನವರಿಗೆ ಅದೆಂಥಹದೋ ಹುಚ್ಚು, ತನ್ನ ಮಕ್ಕಳ ಮದುವೆಯನ್ನು ಒಬ್ಬರಿಗಿಂತ ಒಬ್ಬರದನ್ನು ಹೆಚ್ಚು ಹೆಚ್ಚು ಆಡಂಬರವಾಗಿ ಮಾಡಬೇಕೆಂಬ ಹುಚ್ಚು ಬಯಕೆ. ಇದರಿಂದ ಸಮಾಜದಲ್ಲಿ ತನ್ನ ಪ್ರತಿಷ್ಠೆ ಹೆಚ್ಚುತ್ತದೆಂಬ ಹುಚ್ಚು ಕಲ್ಪನೆ ಅವರದು. ತನ್ನ ಮೂವರು ಪುತ್ರರ ಮದುವೆಯನ್ನು ಅದ್ದೂರಿಯಾಗಿ ನಡೆಸಿದ ಪುಟ್ಟಯ್ಯನವರು ತಮ್ಮ ಇಬ್ಬರು ಪುತ್ರಿಯರ ವಿವಾಹವನ್ನು ವಿಜೃಂಭಣೆಯಿಂದ ನಡೆಸಿದ್ದರು. ತನ್ನ ಆಗರ್ಭ ಶ್ರೀಮಂತಿಕೆಯನ್ನು ಈ ಐದು ಮದುವೆಗಳ ಮೇಲೆ ಧಾರೆಯೆರೆದಿದ್ದರು. ಆದರೆ ಮದುವೆಯ ನಂತರ ಪುಟ್ಟಯ್ಯನವರ ಶ್ರೀಮಂತಿಕೆಯೂ ನಿಲ್ಲಲಿಲ್ಲ, ಪ್ರತಿಷ್ಠೆಯೂ ಉಳಿಯಲಿಲ್ಲ. ಆಸ್ತಿಗಾಗಿ ತಮ್ಮೊಳಗೆ ಹೊಡೆದಾಡಿದ ಮಕ್ಕಳು ತಂದೆ ತಾಯಿಯರನ್ನೂ ದೂರ ತಳ್ಳಿದರು. ಪ್ರತಿಷ್ಠೆಯ ಗೀಳು ಅವರನ್ನು ಇಂದು ಭಿಕಾರಿಯ ಸ್ಥಾನಕ್ಕೆ ತಳ್ಳಿದೆ. ತಾನು ಮಕ್ಕಳ ಮದುವೆಗಾಗಿ ಖರ್ಚು ಮಾಡಿದ ಹಣವನ್ನಾದರೂ ಉಳಿಸಿದ್ದರೆ ಅದರಲ್ಲೇ ಸುಖಜೀವನ ನಡೆಸಬಹುದಿತ್ತು ಎನ್ನುವ ಕೊರಗು ಪುಟ್ಟಯ್ಯನವರಿಗೆ ಇಂದು.

ಇದು ಕೇವಲ ಪುಟ್ಟಯ್ಯನವರ ಕಥೆ ಮಾತ್ರವಲ್ಲ ಸಮಾಜದ ಎಷ್ಟೋ, ಮಂದಿಯದು. ಮದುವೆಯೆಂಬುದು ಜೀವನದಲ್ಲಿ ಒಂದು ಬಾರಿ ಘಟಿಸುವ ಅವಿಸ್ಮರಣೀಯ, ಅಮರಣೀಯ ದಿನ. ನವ ಸಂಸಾರಕ್ಕೆ ಕಾಲಿಡುವ ಸುದಿನ. ಆದುದರಿಂದಲೇ ಕೆಲವು ಪದ್ಧತಿ ಸಂಪ್ರದಾಯಗಳನ್ನೂ ಅನುಸರಿಸಿ, ವಧೂವರರು ಹಿರಿಯರಿಂದ ಆಶೀರ್ವಾದವನ್ನು ಪಡೆದು ತಮ್ಮ ಭಾವೀ ಜೀವನವನ್ನು ಆರಂಭಿಸಲು ಅನುವು ಮಾಡಿಕೊಡಲಾಗುತ್ತದೆ. ಆದರೆ ಇಂದು ಮದುವೆಯೆಂಬುದು ತನ್ನ ನಿಜವಾದ ಅರ್ಥವನ್ನು ಕಳೆದುಕೊಂಡಿದೆ. ಅದು ಇಂದು ಪ್ರತಿಷ್ಠೆಯನ್ನು ಮೆರೆಯಿಸುವ ವೇದಿಕೆಯಾಗಿ ಮಾರ್ಪಟ್ಟಿದೆ. ಇಲ್ಲಿ ಸಂಪ್ರದಾಯ, ಪದ್ಧತಿಗಳಿಗೆ ಸ್ಥಾನಮಾನ ಗೌಣವಾಗಿದೆ. 'ವಿಜೃಂಭಣೆ' ಮದುವೆ ಮಾಡುವವನು ಪ್ರತಿಷ್ಠೆಯನ್ನು ತೋರಿದರೆ, ತನ್ನ ವೇಷಭೂಷಣ ಮತ್ತು ತಾನು ನೀಡುವ ಉಡುಗೊರೆಯಿಂದ ಮದುವೆಯ ಅತಿಥಿ ತನ್ನ ಪ್ರತಿಷ್ಠೆಯನ್ನು ಮೇಳೈಸಿಕೊಳ್ಳುತ್ತಾನೆ. ಒಟ್ಟಿನಲ್ಲಿ ಅದೊಂದು ಪ್ರತಿಷ್ಠೆ ಪ್ರದರ್ಶನದ ಕಣವಾಗಿರುತ್ತದೆ.

'ಮದುವೆ ಮಾಡಿನೋಡು, ಮನೆ ಕಟ್ಟಿನೋಡು' ಎನ್ನುವ ಗಾದೆಯಿದೆ. ಮದುವೆ ಮಾಡುವುದು ಇಂದಿನ ದಿನಗಳಲ್ಲಿ ಸುಲಭದ ಕಾಯಕವಲ್ಲ. ಆದರೆ ಬಡವರೂ ಸಹ ಇಂದು ಆಡಂಬರವಾಗಿ ಮದುವೆ ನಡೆಸುವುದರಲ್ಲಿ ಹಿಂದೆ ಬಿದ್ದಿಲ್ಲ. ಸಾಲ ಮಾಡಿಯಾದರು, ಆಸ್ತಿಪಾಸ್ತಿ, ಮನೆಮಠಗಳನ್ನು ಮಾರಿಯಾದರೂ ಅದ್ದೂರಿಯಾಗಿ ಮದುವೆ ಮಾಡಿ ಜನಸಾಮಾನ್ಯರಿಂದ ಹೊಗಳಿಸಿಕೊಳ್ಳಬೇಕೆಂಬ ಬಯಕೆ ಅವರದು. ಆದರೆ ಜನರಿಂದ ಎಲ್ಲವೂ ಸರಿಯಾಗಿತ್ತೆನಿಸಿ ಕೊಳ್ಳುವುದು ಕೇವಲ ಭ್ರಮೆಯಾಗಿಯೇ ಉಳಿಯುತ್ತದೆ. ಯಾವುದಲ್ಲಾದರು ತಪ್ಪು ಹುಡುಕಿ ತೆಗಳುವ ಜನ ಇದ್ದೇ ಇರುತ್ತಾರೆ. ಅಂತೂ ತಾನು ಮಾಡಿದ ಸಾಲವನ್ನು ತೀರಿಸುವುದಕ್ಕಾಗಿ ಜೀವ ಪರ್ಯಂತ ಹೆಣಗಬೇಕಾದ ಪರಿಸ್ಥಿತಿ ಸಾಮಾನ್ಯ ವ್ಯಕ್ತಿಯದು.

ಪ್ರತಿಯೊಂದು ಮದುವೆಯಲ್ಲೂ ಓಲಗದ ಭರಾಟೆ, ಕುಡಿತ ಚಟ, ಅದೇ ಊಟ, ಅದೇ ಕುಣಿತ ಸರ್ವೇ ಸಾಮಾನ್ಯವಾಗಿರುತ್ತದ ಇತ್ತೀಚೆಗೆ ಜಗಳ, ಹೊಡೆದಾಟಗಳಲ್ಲಿ ಸಹ ಮದುವೆಯ ಅವಿಭಾಜ ಅಂಗವಾಗತೊಡಗಿದೆ. ಯಾವುದೋ ಹಳೆಯ ದ್ವೇಷಗಳನ ತೀರಿಸಿಕೊಳ್ಳಲು, ತಮ್ಮ ವಿರೋಧಿಗಳನ್ನು ಮಟ್ಟ ಹಾಕಲ ಮದುವೆಯಂತಹ ಶುಭ ಸಮಾರಂಭಗಳನ್ನು ರಣರಂಗವನ್ನಾ ಮಾರ್ಪಡಿಸುವ ತಲೆ ಹಿಡುಕರು ತಲೆಯೆತ್ತುತ್ತಿದ್ದಾರೆ. ಕಳೆದ ವರ್ಷ ನಡೆದ ಮದುವೆಯೊಂದರಲ್ಲಿ ಇಡೀ ಗೌಡ ಜನಾಂಗವನ ಪ್ರತಿನಿಧಿಸುವ ಗೌಡ ವಿದ್ಯಾಸಂಘದ ಕಿಟಕಿ ಗಾಜುಗಳನ್ನು ಪೀಠೋಪಕರಣಗಳನ್ನು ಧ್ವಂಸ ಮಾಡಲಾಗಿತ್ತು. ಈ ಘಟನೆಯಲ್ಲಿ ಗೌಡಯುವಕರೇ ಪಾಲ್ಗೊಂಡಿದ್ದು, ನಮ್ಮ ಯುವಕರಿಗೆ ನಮ್ಮ ಜನಾಂಗದ ಬಗ್ಗೆ ಎಷ್ಟು ಆಸ್ಥೆಯಿದೆ, ಮದುವೆ ಜನಾಂಗ ಸಂಘಟನೆಯಲ್ಲಿ ಎಷ್ಟರ ಮಟ್ಟಿಗೆ ಪ್ರಭಾವ ಬೀರಬಹುದ ಎಂಬುದಕ್ಕೆ ಜ್ವಲಂತ ಸಾಕ್ಷಿಯಾಗಿತ್ತು. ಅಂದರೆ ಇಂತಹ ಮದುವೆಗಳ ಜನರನ್ನು ಸಂಘಟಿಸುವ ಬದಲು ಜನರನ್ನು ಒಡೆಯಲ ಪ್ರೇರಕವಾಗುತ್ತದೆಯೆಂಬುದನ್ನು ಸ್ವಲ್ಪಮಟ್ಟಿಗಾದರೂ ಒಪ್ಪಲೇ ಬೇಕಾಗುತ್ತದೆ. ಇಂತಹ ಘಟನೆಗಳು ಮತ್ತೆ ಮತ್ತೆ ಮರುಕಳಿಸುವಂತಿದ್ದರೆ, ಅದು ನಾಗರೀಕ ಗೌಡ ಜನಾಂಗವನ್ನು ತಲೆತಗ್ಗಿಸುವಂತೆ ಮಾಡುವುದರಲ್ಲಿ ಸಂಶಯವಿಲ್ಲ.

ಕೊಡಗಿನಲ್ಲಿ ಮಳೆಗಾಲವನ್ನು ಹೊರತು ಪಡಿಸಿದರೆ ಇನ್ನು ಎಲ್ಲಾ ಅವಧಿಯಲ್ಲಿಯೂ ಮದುವೆಗಳು ನಡೆಯುತ್ತವೆ ಮಾರ್ಚ್‌ನಿಂದ, ಜೂನ್‌ವರೆಗಂತೂ, ನಮ್ಮ ಜನಾಂಗದಲ್ಲಿ, ಪ್ರತಿದಿನ ಪ್ರತಿಕುಟುಂಬದ ಒಬ್ಬ ವ್ಯಕ್ತಿಗಾದರೂ ಮದುವೆಗೆ ಹೋಗಬೇಕಾದ ಅನಿವಾರ್ಯತೆ ಇದ್ದೇ ಇರುತ್ತದೆ. ಮದುವೆ ಮಾಡುವವನಿಗೆ ತಾನು ಅದ್ದೂರಿಯಾಗಿ ಮದುವೆ ನಡೆಸದಿದ್ದರೆ ಜನ ಏನಾರು ಅಂದುಕೊಳ್ಳುತ್ತಾರೆಂಬ ಭಾವನೆ. ಮದುವೆಗೆ ಹೋಗುವವನೇನೂ ಸಂಪೂರ್ಣ ಆತ್ಮ ಸಂತೋಷದಿಂದ ಹೋಗಲಾರ. ಆಮಂತ್ರಣ ನೀಡಿ ಬಿಟ್ಟಿದ್ದಾನೆ, ಹೋಗದಿದ್ದರೆ ಆಗದು ಅನ್ನುವ ಮನೋಭಾವನೆ. ಒಟ್ಟಿನಲ್ಲಿ ಇಬ್ಬರೂ ತಮ್ಮ ಮನದಾಳದ ಅನಿಸಿಕೆಯನ್ನೂ ಬಚ್ಚಿಟ್ಟು ಸಮಸ್ಯೆಗಳೊಳಗೇ ಸಂತಸ ಕಾಣುವ ಪ್ರಯತ್ನ ನಡೆಸಿರುತ್ತಾರೆ. ಇಲ್ಲಿ ಇಬ್ಬರ ಹಣ ಮತ್ತು ಕೆಲಸ ಹಾಳಾಗಿರುತ್ತದೆ. ಇದನ್ನು ನಾವು ಆಳವಾಗಿ ಗಮನಿಸಿದರೆ ಕೋಟ್ಯಾನುಕೋಟಿ ಹಣ ವ್ಯರ್ಥವಾಗಿ ಪೋಲಾಗುವುದಲ್ಲದೆ, ಅಮೂಲ್ಯವಾದ ಸಮಯ ಮತ್ತು ಅತ್ಯಮೋಘ ಶ್ರಮವೂ ನಿರರ್ಥಕವಾಗುತ್ತಿರುತ್ತದೆ. ಆರ್ಥಿಕ ಸಂಕಷ್ಟದಲ್ಲಿ ಮುಳುಗಿರುವ ನಮಗಿದು ಬೇಕೇ?

20 ನೇ ಪುಟಕ್ಕೆ

ಪತ್ರ ವಿಭಾಗ :



ಮೆಚ್ಚುಗೆ

ಜೂನ್ 1-15ರ ಸಂಚಿಕೆಯಲ್ಲಿ ಹೊದ್ದೆಟಿ ಭವಾನಿ ಶಂಕರ್‌ರವರ ವೀರ ಪುತ್ರರಾದ ಕೊಡಗಿನ ರಾಮೇಗೌಡರು ಮತ್ತು ಅಪ್ಪಯ್ಯಗೌಡರ ದೇಶ ಸೇವೆಯ ಪ್ರಶಂಸೆಯನ್ನು "ಅಮರ ಸುಳ್ಯದ ಎಂಡಾಯ" "**ಕೊಡಗು ದಂಗೆ**" ಎಂಬ ಲಾವಣಿ ರೂಪದಲ್ಲಿ ತುಂಬಾ ಕೂಲಂಕುಶ, ಹಾಗೂ ಅರ್ಥಪೂರ್ಣವಾಗಿ ಬರೆದಿದ್ದಾರೆ. ಅದನ್ನು ನಾನು ಲಾವಣಿ ರೂಪದಲ್ಲಿ ಹಾಡಿದೆ. ನನಗೆ ತುಂಬಾ ಸಂತೋಷವಾಯ್ತು ಹಾಗೂ ಕೊಡಗಿನ ಧೀರ ಪುತ್ರರು, ಇಂದಿನ ಮಕ್ಕಳು ಮುಂದಿನ ಪ್ರಜೆಯೆಂಬಂತೆ ನನ್ನದು ಎಂಬುವುದನ್ನು ಬಿಟ್ಟು ನಮ್ಮದು ಎಂಬ ಛಲ ಇಂದಿನ ಮಕ್ಕಳಲ್ಲಿ ಮೂಡಿಬರಲಿ, ಈಗಾಗಲೇ ಪಾಕಿಸ್ಥಾನ, ಭಾರತ ಯುದ್ಧದಲ್ಲಿ ಹಲವಾರು ಯೋಧರು ದೇಶಕ್ಕಾಗಿ ತನ್ನ ಪ್ರಾಣವನ್ನೇ ತೆತ್ತಿದ್ದಾರೆ. ಅವರ ತಂದೆ, ತಾಯಿ ಪತ್ನಿ, ಮಕ್ಕಳು ಇವರಿಗೆ ದುಃಖದ ಜೊತೆಗೆ ದೇಶಕ್ಕೆ ಹೋರಾಡಿದ "ವೀರಪುತ್ರ" ಎಂಬ ಹೆಮ್ಮೆ ನಮ್ಮದಾಗಿದೆ. ಅವರಿಗೆ ದೇವರು ಮನಸ್ಸಿಗೆ ನೆಮ್ಮದಿ, ಶಾಂತಿ ತರಲಿ ಎಂದು ಬೇಡುತ್ತಾ ಹಾಗೂ ಅಪ್ಪಯ್ಯಗೌಡರು ಮತ್ತು ರಾಮಯ್ಯಗೌಡರಂತೆ ದೇಶದ ಹಿತಕ್ಕಾಗಿ **ಅರೆಭಾಷಿಕ ಯೋಧರು** ವೀರ ಕೀರ್ತಿಯನ್ನು ದೇಶಕ್ಕೆ ತರಲಿ ಎಂದು ಹಾರೈಸುವ ಮತ್ತು ಒಳ್ಳೆ ಕವನಗಳು ಹಾಗೂ ಲಾವಣಿಗಳು ಮೂಡಿ ಬರಲಿ ಎಂದು ಆಶಿಸೋಣವೇ.

ಆಜಡ್ಕ ರಾಣಿ ಬಾಲಕೃಷ್ಣ, ಕುಶಾಲನಗರ

ಕುಞ್ಞಣ್ಣನ ಇಸ್ಕೂಲ್ ಡೇಸ್

7 ಜನ ಅಣ್ಣತಮ್ಮಂದ್ರಲ್ಲಿ ಕೊನೆಯಂವ ನಮ್ಮ ಕುಞ್ಞಣ್ಣ, ಹಂಗಾಗಿ ಅವನ ಅವ್ವ ಅವನ್ನ ತುಂಬಾ ಮುದ್ದ್‌ಂದ ಬೆಳ್ಸಿತ್. ದಿನಾ ಬೆಳಿಗ್ಗೆ 7 ಜನ ಸ್ಕೂಲಿಗೆ ಒಟ್ಟಿಗೇ ಹೋದು. ಬ್ಯಾಗ್ ಕೋಸಿಕಂಡ್, ತೋಡ್ ಗದ್ದೆ ದಾಟಿಕಂಡ್ ಉಬ್ಬುಲ್ ಹತ್ತಿಕಂಡ್ 7 ಜನ ಹೋದ್ನ ನೋಡಿಕೆ ಕಣ್ಣ್‌ಗೆ ಹಬ್ಬ. ಅಣ್ಣ ತಮ್ಮಂದ್ರಲ್ಲಿ ಬಾರೀ ಒಗ್ಗಟ್ಟ್, ಸ್ಕೂಲಿಗೆ ಚಕ್ಕರ್ ಹೊಡ್ಯದೂ ಜೋತೇಲಿ, ಬೇರೆಯವರ ತೋಟಂದ ಹಾಲ್ ಹಣ್ಣ್, ಚಕ್ಕೊತ ಕದಿಯದೂ ಜೊತೇಲೇ. ರೋಡ್ ಸೈಡ್‌ಲಿರುವ ಮಾಪ್ಳೆ ಅಂಗಡೀಲಿ ಪೆಪ್ಪರ್‌ಮಿಂಟ್ ತಕ್ಕಂಡ್ ಅದ್ನ ನೀರ್‌ದ್ ಬಾಟ್ಲಿಯೊಳಗೆ ಹಾಕಿ ಲಾಯ್ಕ ಕುಲ್ಕುದು, ಮದ್ಯಾನಕ್ಕೆ ಅದೇ ಇವ್ಕೆ 'ರಸ್ನಾ' ಜ್ಯೂಸ್ !

ಒಂದ್ ಸಲ ಈ 7ಜನ ಡಿಸೈಡ್ ಮಾಡಿಕಂಡ್ ಸ್ಕೂಲ್‌ಗೆ ಚಕ್ಕರ್ ಹೊಡ್ದ್ ಕಾವೇರಿ ಹೊಳೇಲಿ ಮೀಯಕೆ ಹೋದ್. ಅವ್ವ ಕೊಟ್ಟ ಬುತ್ತಿನ ಮರಳೊಳಗೆ ಹೂತ್ ಮಡ್ಗಿ, ಬಟ್ಟೆ ಬಿಚ್ಚಿ ಕೆಸ ಗಿಡದೊಳಗೆ ಅಣ್‌ಗಿಸಿಟ್ಟ್ ಮೀಯಿತಾ ಇರ್‍ಕಾಕನ ಒಂದ್ಸಲ ನಮ್ಮ ಸೋಂಪ ಮಾವ ನೋಡಿಬುಟ್ಟು ಅವರೆಲ್ಲರ ಬಟ್ಟೆಗಳ್ನ ತಕಂಡ್ ಹೋಗಿ ಮನೇಲಿ ಕೊಟ್ಟ್ ಬುಟ್ಟಿದ್‌ಗಡ. ಅಂದ್ ನೋಡೊಕು ಈ ಏಳ್ ಜನ ಗೊಮ್ಮಂಟೆಂಗಳ ಬೆತ್ತಲೆ ಮೆರವಣಿಗೆ. ಅಂದ್ ಅವರಪ್ಪ ಎಲ್ಲವ್‌ಕೆ ಸರೀ ಬೈದ್ ಒದ್ದತ್‌ಗಡ.

ಇವು ಸ್ಕೂಲ್‌ಂದ ಮನೆಗೆ ಬಾಕಾಕನ ಅವರ ಅವ್ವ ದಿನಾಲೂ ಎಂತಾರ್ ತಿಂಡಿ ಮಾಡಿ ಮಡ್ಗುದು. ಪಾಪಾ, ಮಕ್ಕ ಸ್ಕೂಲ್‌ಂದ ಹೊಟ್ಟೆ ಹಸ್ಕಂಡ್ ಬಂದಿದ್ದವೆತ. ಪ್ರೀತಿಯ ಪುತ್ರ ಕುಞ್ಞಣ್ಣಂಗೆ ಯಾಗೋಳೂ ಒಂದು ಪಾಲ್ ಹೆಚ್ಚಿಗೇ ಕೊಡ್ದು ಗಡ. ಹಿಂಗೇ ಒಂದ್ ಸಲ ಸ್ಕೂಲ್ ಬುಟ್ಟಂಗೇ ಕುಞ್ಞಣ ಒಂದುಸುರಿಗೆ ಮನೆಗೆ ಓಡಿ ಬಂದ್ ನೋಡ್‌ಕ್ಕಾಕನ ಅವ್ವ ಹಾಲ್ ಕರಿಯಕೆ ಹೋಗಿತ್ತ್‌ಗಡ. ಇಂವ ಬ್ಯಾಗ್‌ನ ಬಿಸಾಡಿ, ಅಡಿಗೆ ಮನೆಗೆ ಹೋಗಿ ನೋಡ್ಕನ ಒಂದು ತಟ್ಟೆಲಿ ಕೆಂಪಾಗಿ ಎಳ್ಳುಂಡೆನಂಗೆ ಎಂತೋ ಉಂಡೆ ಮಾಡಿ ಮಡ್‌ಗಿದ್ದನ ನೋಡ್ತ್‌ಗಡ ಇನ್ನ್ ಅಣ್ಣಂದ್ರ್ ಬಂದ್ ಬುಟ್ಟರೆ ಅವ್ಕೆಲ್ಲಾ ಪಾಲ್ ಕೊಟ್ಟ್ ಮೇಲೆ ಉಳಿಯದು ಈ ತಿಂಡಿ ಪೋತಂಗೆ ಸಾಕಾದೆ?! ಅದಿಕ್ಕೆ ಇಂವ ಕೈನೂ ತೊಳೆಯದೆ ಆ ಉಂಡೆನ ಮುದ್ದೆ ಮಾಡಿ ಒಂದುಸುರಿಗೆ ಗಬಗಬತ ಮುಕ್ಕಿತ್‌ಗಡ. ಅಷ್ಟ್ ಹೊತ್ತಿಗೆ ಅವಂಗೆ ಬಾಯಿ ಹೊಗಿಯಕೆ ಶುರು ಆಗುಟ್ಟು. ಅವಂಗೇನ್ ಗೊತ್ತು ಆ ಉಂಡೆ ಉಪ್ಪಿನಕಾಯಿಗೆ ಮಿಕ್ಸ್ ಮಾಡಿಕೆ ಅವ್ವ ಮಾಡಿ ಮಡ್‌ಗಿದ ಸಣ್ಣ ಮೆಣ್‌ಸ್‌ನ ಉಂಡೆತ ! ಸ್ವಲ್ಪ ಹೊತ್ತ್‌ಗೆ ಬಾಯಿ, ಹೊಟ್ಟೆ, ತಿಕ ಎಲ್ಲಾ ಉರಿ ಹತ್ತಿ ಕುಞ್ಞಣ್ಣಂಗೆ ಕುಂಡಿ ಸುಟ್ಟ್‌ಕಂಡ್ ಕೊತ್ತಿನಂಗೆ ಆತ್‌ಗಡ. ಅಂವ ಕಣ್ಣ್‌ಲಿ ನೀರ್ ಸುರ್‍ಸಿಕಂಡ್ ಕಿರ್‌ಚಾಡ್ದನ್ನ ಕೇಳಿ ಮನೆಯವೆಲ್ಲಾ ಸೇರೊಳೊ. ಅವನ ಅಣ್ಣಂದ್ರ್‌ಗಂತೂ ಖುಷಿನೋ ಖುಷಿ. ಹಂಗೇ ಆಕು ಇವಂಗೇತ ಬೈಕಂಡ್ ತಮಾಷೇ ನೋಡ್ತಾ ಇರ್‌ಕ್ಕಾಕನ ಅವ್ವ ಓಡಿ ಬಂದ್ ಅವಂಗೆ ನೀರ್ ಕುಡ್ಸಿ, ಬಾಯಿಗೆ ಸಕ್ಕರೆ ಸುರ್‍ದ್, ಬೆಣ್ಣೆ ತಿನ್ಸಿ ಆರೈಕೆ ಮಾಡುಟ್ಟು. ಅಂದ್ರೂನೂ ಉರಿ ಕಮ್ಮಿ ಆಗದೆ ಇರ್ಕನ ಅವನ ಬಟ್ಟೆಯೆಲ್ಲಾ ಬಿಚ್ಚಿ ಮಂಡೆಯೊಳಗೆ ಕುತ್ತಿಗೆ ನೀರ್‌ಲಿ ಕೂರ್‍ಸಿದೊ ಗಡ. ಕುಞ್ಞಣ್ಣ ನೀರೊಳಗೆ ಕುದ್ದ್‌ಕಂಡ್ ಬಿಕ್ಕಿ ಬಿಕ್ಕಿ ಮರಡ್‌ಕಾಕನ ಅವ್ವನ ಕರ್‌ಳ್ ಚುರುಕ್‌ತೇಳಿ ಅವಂಗೆ ಸಮಾಧಾನ ಮಾಡಿಕಂಡ್ "ಮರ್‍ದ್ ಬೇಡ, ನಾನ್ ನಿಂಗೆ ಬೇಗ ವಾಸಿಯಾಗುವಂಗೆ ಹರ್ಕೆ ಮಾಡ್‌ನೆ" ತೇಳ್‌ಕಾಕನ ಕುಞ್ಞಣ್ಣ "ಅವ್ವಾ.... ದೊಡ್ಡ ದೊಡ್ಡ ದೇವ್ರುಗಳ್ಗೆ ಹರ್ಕೆ ಮಾಡ್.... ಬೇಗ.... ಇಲ್ದಿದ್ರೆ ನಾನ್ ಸತ್ತ್ಹೋನೆ" ತೇಳಿ ಕಿರ್‍ಚಿತ್ ಗಡ.

ಈ ಘಟನೇನ ಹೇಳ್‌ಕಂಡ್ 25 ವರ್ಷಗ ಆದಮೇಲೆನು ಈಗಲೂ ಮನೆಯವೆಲ್ಲಾ ನೆಗಾಡುವೆ

ಎಡಿಕೇರಿ ಸುದರ್ಶನ್, ಬೆಂಗಳೂರು.

ಬಯಕೆ

ಕವಿ ಬಯಸುವುದು ಕಾವ್ಯವನ್ನು
ನವಿಲು ಬಯಸುವುದು ನಾಟ್ಯವನ್ನು
ಆದರೆ ನಾನು ಬಯಸುವುದು
ನನ್ನ ಕೊಡಗು ಸಂಗಾತಿಯನ್ನು

ಮಂಞ್ಞಣ್ಣನ ಶೋಭ, ಕಾಲೂರು

ಕರಿಚಿನ್ನ -ಧಾರಾವಾಹಿ-28

ಮೂಲಕಥೆ : ಅಶ್ವಥಿ ಅರವಿಂದ್

[ಅರೆಭಾಷೆಗೆ] : ಎಂ. ಇ. ಮುಹಮ್ಮದ್

"ಹುಟ್ಟಿದವೆಲ್ಲ ಎಂದಾದರೊಂದು ದಿನ ಸಾಯ್ಲೇಬೇಕ್ ಮಾರಾಯ ಇಂದ್ ನಾನ್, ನಾಳೆ ನೀನ್, ಹಿಂಗೆ ಹೊತ್ತ್ ವ್ಯತ್ಯಾಸ ಮಾತ್ರ ನಮ್ಮ ಮಧ್ಯಲಿ ಇರ್ದು. ನೀನ್ ಒಂದ್ ಎರಡ್ ಪೆಗ್ ಹಾಕ್ಕಿ ಅವರ್ನ್ನು ಕರಿ"

ದೇವಯ್ಯ ಅರ್ಧ ಮುಗ್‌ದಿದ್ದ ಕಳ್ಳ್ ಬಾಟ್ಲ್‌ನ ಕಾಳನ ಕೈಗೆ ಕೊಟ್ಟತ್.

"ಏನೂ ಇಲ್ಲೆ ಆ ಗೂಡೆದ್ ಆಯುಷ್ಯ ಮುಗಿದ ಹೋತ್‌ಗಡ. ಏನ್ ಮಾಡ್‌ದು ಹೇಳ್. ಈಗ ನಾನ್ ಗಾಳಿಮರ ಸೋಮಯ್ಯನು ಒಂದೇ ಥರ ಆಗಿಯೊಳೊ. ಮಕ್ಕಳ್‌ನೆ ಕಳ್‌ಕೊಂಡವು. ನನ್ನ ಮಂಜ್ಞ ಸತ್ತರೆ ಅವನ ಮಗಳ್ ಸತ್ತೋತ್ ಅಷ್ಟೆ.

"ಎಂತ ದೇವಯ್ಯಣ್ಣ ಆ ಗೂಡೆ ಸತ್ತ್ ಹೋತಾ? ನಾನ್ ಮಾತ್ರ ಸುಮ್ಮನೆ ಇರಕ್‌ಲೆ ನೋಡಿ. ಆಡಳಿತಪಕ್ಷದ ಓರ್ವ ನಾಯಕನಾಗಿರೋ ನಾನ್ ಇದನ್ನೆಲ್ಲ ನೋಡ್‌ಕಂಡ್ ಮುಚ್ಕಂಡ್ ಕೂರ್ತ್ನಾ? ಇದಕ್ಕೆ ಒಂದ್ ಆಯೋಗ ರಚನೆ ಮಾಡಿ ತಪ್ಪಿತಸ್ಥನ ಹಿಡಿಯದೆ ಇರಕಿಲೆ ನೋಡಿ"

ದಿವಾಕರ್ ಜೋರಾಗಿ ಹೇಳ್‌ಕಂಡ್ ಕೈನ ಮುಷ್ಠಿ ಹಿಡ್‌ಕಂಡ್ ಮೇಜಿಗೆ ಗುದ್ದಿತ್. ಅಲ್ಲಿ ಗ್ಲಾಸ್‌ಲಿ ಇದ್ದ ಕಳ್ಳ್‌ನ ಒಂದೇ ಉಸ್‌ರ್‌ಗೆ ಕುಡ್ತ್.

ಎಲ್ಲವೂ ಸೇರಿಕೊಂಡ್ ಜೋರಾಗಿ ನೆಗಾಡಾದೊ.

"ಆಲ್ ಐ ಕ್ಯಾನ್ ಸೇ ಈಸ್ ದಟ್ ಇಟ್ ಈಸ್ ಎ ವೆರಿ ಸ್ಯಾಡ್ ಅಂಡ್ ಅನ್‌ಫಾರ್ಚುನೇಟ್ ಎಕ್ಸ್‌ಪೀರಿಯನ್ಸ್ ಯಾಸ್ ಏನ್ ಅಡ್ವೋಕೇಟ್"

ರತೀಶ್ ಹೇಳಿಕಂಡ್ ಇರ್‌ಕಾಕನ ದೇವಯ್ಯ ಅರ್ಧದಲ್ಲೇ ತಡ್‌ದ್ ನಿಲ್ಲಿಸ್‌ತ್.

"ಮಿ. ಅಡ್ವೋಕೇಟ್ ರತೀಶ್"

ಅಂವ ಸಿಟ್ಟ್‌ಲಿ ಕರ್‌ತ್

"ನನ್ನ ವಿಸ್ಕಿ, ಬ್ರಾಂಡಿ ಕುಡ್‌ದ್ ನಾನ್ ಏರ್ಪಾಡ್ ಮಾಡಿದ ಗೂಡೆದ್ ರಸ ನೋಡಿ ಈಗ ನಂಗೆ ಅರ್ಥ ಆಗದ ಭಾಷೆಲಿ ನೀನ್ ಹೇಳೊದೇನೂ ಬೇಡ ಗೊತ್ತಾತಲ್ಲೆ...... ಅದೇನ್ ಹೇಳ್ಬೆ ಅದ್‌ನೆ ಚೆನ್ನಾಗಿ ಅರೆಭಾಷಲೇ ಹೇಳ್.

ರತೀಶ್‌ಗೆ ಒಂದ್ ತರಾ ಆದ್ರೂ ಅದ್ನ ತೋರ್‌ಸದೆ ಅರಭಾಷೆಲೆ ಬಿಡ್ಸಿ ಹೇಳ್‌ತ್.

"ದೇವಯಣ್ಣಾ ನಾನ್ ಹೇಳಿದ್ದರ ಅರ್ಥ ಇದೊಂದು ಭಾರಿ ದುಃಖದ ದುರಾದೃಷ್ಟದ ಸಂಗತಿ ಆಗಿ ಹೋತ್‌ತ ಒಂದ್ ಲಾಯರ್ ಆಗಿರೋ ನಾನ್ ನ್ಯಾಯ್ಯ ಮರಿಯಕೆ ಬೊತ್ತಲ್ಲ?"

"ನ್ಯಾಯ ಬದನೇಕಾಯಿ ಅಲ್ಲ ಮಾರಾಯ ನಮ್ಮ ಊರ್ಲಿ ಈ ನ್ಯಾಯದ ಅರ್ಥ ಗೊತ್ತಿಲ್ಲದ ಲಾಯರ್ಸ್, ಇಂಜಿನೀರ್ಸ್, ಡಾಕ್ಟರ್ಸ್ ಎಷ್ಟಿಲ್ಲೆ ಹೇಳ್? ರಸ್ತೆ ನಡೂಲಿ ಹತ್ತ್ ಮಂದಿಯ ಮುಂದೆ ಒಂದ್ ಕೊಲೆ ಮಾಡ್‌ದ ವ್ಯಕ್ತಿದ್ ಪರವಾಗಿ ಕೋರ್ಟ್‌ಲಿ ವಾದ ಮಾಡಿ ಮಾಡಿ ಆ ಆರೋಪಿನ ಮಹಾತ್ಮ ಗಾಂಧಿ ಮಾಡಿ ಬುಟ್ಟ್ ಅವನ ಸುಮ್ಮನೆ ಬಿಡುಗಡೆ ಮಾಡ್ಸೋದ್ರ್‌ಲಿ ಎಸ್ಟ್ ನ್ಯಾಯ ಉಟ್ಟ್ ಮಾರಾಯ? ಸರ್ಕಾರದ ಸಿಮೆಂಟ್ ಕದ್ದ್‌ವಾರಿ ಅರೆಬರೆ ಸಿಮೆಂಟ್ ಹಾಕಿ ಸೇತುವೆ ಕಟ್ಟ್‌ದು ಸ್ವಲ್ಪ ದಿನಲೇ ಅದ್ ಮುರಿದ್ ಬಿದ್ದದ್, ಕೂಡ್ಲೆ ಎರಡನೇ ಸಲ ಸೇತುವೆ ಕಟ್ಟ್‌ಕೆ ಟೆಂಡರ್ ಕರ್‌ದವೆ. ಇದಕ್ಕೆಲ್ಲ ಎಂತ ನ್ಯಾಯ ಉಟ್ಟು ಮಾರಾಯ? ಬೆರಳ್ ಮುರ್ದ್‌ದ್ರೂ ಡಾಕ್ಟರ್ ಇಡೀ ಕೈಗೆ ಪ್ಲಾಸ್ಟರ್ ಹಾಕಿದೆ. ಕೂಸಗೆ ಸುಖ ಇಲ್ದೆ ಹೋದ್ರೆ ಅವ್ವನ ಟೆಸ್ಟ್ ಮಾಡೋ ಡಾಕ್ಟರ್ ಕೂಡ ನಮ್ಮಲ್ಲಿ ಒಳೊ. ಇದೆಲ್ಲ ಯಾವ ನ್ಯಾಯ ಹೇಳ್ ನೀನ್ ನ್ಯಾಯ ಅನ್ಯಾಯನ ನಂಗೆ ಕಲ್ಸಿಕೆ ಬಾದು ಬೇಡ ಗೊತ್ತಾತಾ?

ಬೋರ್‌ಗುಡ್ಡೆ ದೇವಯ್ಯ ಅಷ್ಟ್ ಹೇಳಿ ಬುಟ್ಟ್ ತನ್ನ ಪ್ಯಾಂಟ್ ಜೋಬ್‌ಲಿ ಇದ್ದ ಪಿಸ್ತೂಲ್ ಮತ್ತು ಚೆಕ್ ಬುಕ್‌ನ ಹೊ[illegible] ತೆಗ್‌ತ್.

"ಇದಾ ಎಸ್ಟ್ ಹಣ ಬೇಕ್ ಅಸ[illegible] ಬರ್‌ಕ. ನೀಲುನ ಹೆಣನ ನೀನ್ ಸಾಗಿ[illegible] ಎಲ್ಲಿಯಾದರೂ ಕಾಣದಂಗೆ ಮಾಡ್. ಆದು[illegible] ನಂಗೆ ಬೊತ್ತ್‌ತ ಹೇಳ್‌ದ್ರೆ ಇದಾ ನೋ[illegible] ಈ ಪಿಸ್ತೂಲ್ ಮಾತಾಡ್ದೆ. ನಾನ್ ಇನ್ಸ್‌ಪೆಕ್ಟ[illegible] ದಿವಾಕರನೂ ಈಗಲೇ ಇಲ್ಲಿಂದ ಹೋದ[illegible] ನಿಂಗೆ ಸಹಾಯಕೆ ಬೇಕಿದ್ರೆ ಇಲ್ಲಿ ನನ್ನ ಜನ ಇದ್ದವೆ."

"ಎಂತ ನಾನ್ ನನ್ನ ಕಾರ್‌ಲಿ ಈ ಡೆ[illegible] ಬಾಡಿನ ಹಾಕ್ಕಂಡ್ ಹೋಕೂಂತನಾ?"

ರತೀಶ್ ಕೇಳ್‌ತ್

ಹೌದ್ ಮಾರಾಯ ನಿನ ಕಾರಲ್ದೆ ಇನ್ನೇ[illegible] ನನ್ನ ಜೀಪ್‌ಲಿ ತಕ್ಕಂಡ್ ಹೋದಿಯಾ? ನ[illegible] ಜೀಪ್ ಅತ್ತಿತ್ತ ಒಡ್‌ದ್ ಕಂಡರೆ ಊರವು ಸಂಶಯಬಾಕೆ ಸಾಕ್. ಚಂಗುಮಣಿ ಮೇ[illegible] ಇರೋ ಸಿಟ್ಟ್‌ಗಾಗಿ ನಾನ್ ನೀಲು[illegible] ಕೊಂದಿರ್‌ದೂಂತ ಜನ ಮಾತಾಡಿಕೊಂಬಕು ಸಾಕ್. ನಿಂಗೆ ಈ ಕಾರ್ಯಕ್ಕೆ ಎಸ್ಟ್ ಹ[illegible] ಬೇಕ್ ಅದ್‌ನ ಬರ್‌ದ್ ತಕ ಹ್ನೂಂ?

ಬೋರಗುಡ್ಡೆ ದೇವಯ್ಯ ಒಂದ[illegible] ಬ್ಲಾಂಕ್ ಚೆಕ್‌ಗೆ ಸಯಿನ್ ಹಾಕಿ ಅದ್[illegible] ರತೀಶ್‌ದ್ ಜೇಬ್‌ಗಿ ತುರಾಕಿತ್.

"ದೇವಯ್ಣ್ಣ ನಾನೊಬ್ಬ ಅಡ್ವೋಕೇಟ್[illegible] ನೀವು ಗ್ಯಾನ ಮಾಡೊಕು, ಜನಕೆ ನ್ಯಾಯ[illegible] ಕೇಡ್‌ಸೊಂವ ನಾನ್. ನಾನೇ ಇಂತ ಬೇಡ[illegible] ಕೆಲ್ಸಲಿ ಪಾಲ್‌ದಾರ್ ಆದೂಂತ ಹೇಳ್ರೆ ಅದ್[illegible] ಜನಕೆ ಗೊತ್ತಾದ್ರೆ.........?"

ಗೊತ್ತಾಕೆ ಬೊತ್ತ್ ಮಾರಾಯ ಅದ್ ನಿನ್ನ ಸಾಮರ್ಥಗೆ ನಿಂಗೆ ಒಳ್ಳೆ ವಿದ್ಯೆ ಉಟ್ಟು ಹಂಗೆನೆ ದೇವ್ರು ಬುದ್ಧಿನೂ ಕೊಟ್ಟುಟ್ಟು.

ಇಲ್ಲಿಯವರೆಗೆ........

ಅಣ್ಣ ಚೆಂಗುಮಣಿನ ಸ್ವರ ಕೇಳ್‌ದಂಗಾಗಿ ನೀಲೂ ಬಾಗ್‌ಲ್ ತೆಗ್ದದೆ. ದೇವಯ್ಯನ ರೌಡಿಗ ಅವಳು ಬಾಯಿ ಬಡಿಯದಂಗೆ ತುಟಿಗೆ ಪ್ಲಾಸ್ಟರ್ ಹಾಕಿ ಎತ್ತಿಕೊಂಡು ಹೋದವೆ. ಗಾಡಿ ಕಾಫಿ ತೋಟದ ಮಧ್ಯಕ್ಕಾಗಿ ದೊಡ್ಡ ಬಂಗ್ಲೆಗೆ ಹೋದೆ. ಅಲ್ಲಿ ಬೋರುಗಡ್ಡೆ ದೇವಯ್ಯನ ದೋಸ್ತ್‌ಗಳಿಂದ ನೀಲುನ ಅತ್ಯಾಚಾರ ಆದೆ. ಕೊನೆಗೆ ಹೋದ ಕರಾಟೆ ಕಾಳ ನೀಲು ಅಲ್ಲಾಡದೆ ಬಟ್ಟೆ ಎಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದುಕಂಡು ಇರ್ದು ನೋಡಿ ದೇವಯ್ಯನ ಕರ್ದ್ ಹೇಳ್ದೆ "ಸಾರ್ ನೀಲು ಗೂಡೆ ಪತ್ತೆ ಕಂಡದೆ. ಸ್ವಲ್ಪ ಬನ್ನಿ ಇತ್ತಾತ ಹೇಳ್ದೆ...... ಮುಂದೆ !!!......??

ಮುಂದೆ ನೀವ್ ಓದಕು

ೂನೂ ಗೊತ್ತುಟ್ಟು. ಗೇನ ಮಾಡಿ ಕೆಲ್ಸ ಗ್ಲಿ ಬುಡ್. ನಾನ್ ಮಾತ್ರ ಆ ಗೂಡೆನ ಟ್ಟೇ ಇಲ್ಲೆ ನೀನ್ ಹೋಗಿ ಬರಕಾರನ ್ ಸತ್ ಹೋಗಿರ್‌ದು. ಇನ್ ನಿಂಗೆ ್ ನಿನ್ನ ಕೋರ್ಟ್ ಬಾಷೆಲಿ ಹೇಳೊದಾದ್ರೆ ್ತ ಹೋದ ಗೂಡೆ ಒಟ್ಟಿಗೆ ಕಡೇಗೆ ಬಂದ ಬೆಳೆಸಿದಂತ ನೀನ್. ಅಂದರೆ ಸ್ಟರ್ ರತೀಶ್ ಅಡ್ವಕೇಟ್ ಗೊತ್ತಾತ್ತಲ್ಲ? ನಿನ್ನು ಬಂದವೆ."

ಬೋರ್‌ಗುಡ್ಡೆ ದೇವಯ್ಯ ಡ್ರೈವರ್‌ನ ್ತ್. ಅವು ಮೂರಾಳೂ ಜೀಪ್‌ಲೇ ೀದೊ.

ರತೀಶ್ ಮುಖ ಬಾಡಿಸ್‌ಕಂಡ್ ಕಾಗದದಂಗಾತ್.

ಹೆದ್ರಬೇಡಿ ಸಾರ್, ಒಂದು ನೊಣಕೆ ಡ ಗೊತ್ತಾಗದಂಗೆ ಇದ್‌ನ ನಾವು ಮಣ್ಣು ಾಡಿ ಬುಡನ. ನಾವು ನಿಮ್ಮೊಟ್ಟಿಗೆ ಒಳೊ.

ಕರಾಟೆ ಕಾಳ ಅರ್ಥನಗೆ ಬೀರ್‌ಕಂಡ್ ತೀಶಂಗೆ ಧೈರ್ಯ ಕೊಟ್ಟತ್. ಮೇಜಿನ ೀಲಿದ್ದ ಕಳ್ಳ್‌ನ ಅವು ಮೂರ್ ಜನನೂ ಡ್‌ದ್ ಖಾಲಿ ಮಾಡ್ದೊ.

ಗಾಳಿಮರ ಸೋಮಯ್ಯಂಗೆ ಎಚ್ಚರ ಆಕನ ಳಗಾಗಿತ್ತ್. ಮಲಗಿದಲ್ಲಿಂದಲೇ ಅಂವ ತನ್ನ ಂಗಳ್ನ ಕರ್‌ತ್.

"ನೀಲೂ ಏ ಮಗ್ಳು, ನೀಲೂ"

ಮಗಳ ಸದ್ದೇ ಇಲ್ಲೆ. ರಾತ್ರಿ ತಾನ್ ೆನ್ನಾಗಿ ಕುಡ್‌ದ್ ಬಂದ ಸಿಟ್ಟ್‌ಲಿ ಅವಳು ಾತಾಡ್‌ದುಲೇಂತ ಅಂವ ಗೇನ ಮಾಡ್‌ತ್.

ಕುಡಿಬೇಡ ಪಪ್ಪಾ. ಕುಡಿಬೇಡ ಪಪ್ಪಾಂತ ಅವಳು ಯಾಗಳೂ ಹೇಳ್‌ತಿತ್ತ್. ಆದರೆ ಕೈಲಿ ಣ ಇರ್‌ಕಾಕನ ಮನೆಲಿ ಅನ್ನಕ್ಕೆ ಅಕ್ಕಿ ಇಲ್ಲದಿದ್ರೂ ನನ್ನ ಕಾಲ್ ಸಾರಾಯಿ ಅಂಗಡಿಗೆ ಹೋಗ್‌ತಿತ್ತ್. ಥೂ ಅದೇಂಥ್ ಕೆಟ್ಟ ಅಭ್ಯಾಸ ಆಗಿಹೋತ್.

ಒಂದೋ ಈ ಬೋರ್‌ಗುಡ್ಡೆಲಿ ಕಳ್ಳಂಗಡಿ ಇಲ್ಲದೆ ಆಕು. ಇಲ್ಲದಿದ್ರೆ ನಾನ್ ಸತ್ತ್ ಹೋಕು. ಈ ಎರಡ್ರಲ್ಲಿ ಒಂದ್ ನಡಿದೆ ಹೋದ್ರೆ ತಾನ್ ಕಳ್ಳ್ ಕುಡಿಯುದ್‌ನ ನಿಲ್ಸುದು ಕಷ್ಟಾಂತ ಹೇಳಿ ಸೋಮಯ್ಯ ಗೇನ ಮಾಡ್ತ್.

"ನೀಲೂ, ನೀಲು.........."

ಅಂವ ಎದ್ದ್ ನೀಲುನ ಕೋಣೆಗೆ ಹೋತ್ ಅಷ್ಟರಲ್ಲಿ ಅಡಿಗೆ ಮನೆದ್ ಬಾಗಿಲ್ ತೆಗೆದಿದ್ದ್ ಕಾಣಿಸ್‌ತ್. ಅಂಗಳ ಇಳ್ದ ಸೋಮಯ್ಯ ತನ್ನ ಮಗಳ್ನ ಜೋರಾಗಿ ಕರ್‌ತ್. ನೆರೆಮನೆಗೂ ಹೋತ್.

"ನಮ್ಮ ನೀಲುಗೂಡೆ ಅಲ್ಲಿಗೆ ಬಂದುಟ್ಟಾ ಜೋಯಪ್ಪ?"

"ಇಲ್ಲೆಲ್ಲ ಬಾವ, ಇಲ್ಲಿಗೆ ಬಾತ್‌ಲೆಲ್ಲ?"

"ಕುಡ್‌ದ್ ಸೂಯೆ ಇಲ್ಲದೆ ಬೀಳುವರಿಗೆ ಮನೆಲಿ ನಡಿಯೋ ವಿಸ್ಯ ಒಂದೂ ಗೊತ್ತಾದ್‌ಲೆಲ್ಲ. ಪಾಪ ಆ ಗೂಡೆ ಹಗ್ಗ ತಕ್ಕಂಡೂ ಬಾವಿಗೆ ಹಾರಿಯೇ ಸತ್ತಿರಕು ಸಾಕ್"

ಜೋಯಪ್ಪನ ಹೆಣ್ಣ್ ಹೇಳ್‌ತ್.

ಸೋಮಯ್ಯಂಗೆ ಎಂತ ಹೇಳೊಕೂಂತಲೇ ಗೊತ್ತಾತ್‌ಲೆ. ಅಂವ ದೊಡ್ಡಮನೆ ಚಂಗಪ್ಪನಲ್ಲಿಗೆ ಹೋಗಿ ಅದೇ ಪ್ರಶ್ನೆ ಕೇಳ್‌ತ್.

ಇಲ್ಲೆ ಅಲ್ಲಿಗೂ ಹೋತ್‌ಲೆ. ಈಗ ಸೋಮಯ್ಯಂಗೆ ಹೆದ್ರಿಕೆ ಸುರ್ ಆತ್. ಅಂವ ಸೀದಾ ಬೋರ್‌ಗುಡ್ಡೆ ದೇವಯ್ಯನ ಮನೆಗೆ ಹೋತ್.

ಎಂತಾ ಒಂದ್ ಗ್ರಾಚಾರ ಇದ್? ಇದ್ದ ಒಬ್ಬ ಮಂಜ್ಣ ಜೈಲ್‌ಲಿ ಉಟ್ಟು. ಅಂವ ಬೋರ್‌ಗುಡ್ಡೆಗೆ ಬಂದಿತ್ತ್‌ತ ಯಾರೋ ಹೇ[illegible] ಕೇಳ್ರೂ ನಿಜನಾ ಸುಳ್ಳಾಂತ ದೇವ್ರಿಗೇ ಗೊತ್ತ್.

ಅಂವ ಬೋರ್‌ಗುಡ್ಡೆ ದೇವಯ್ಯನಲ್ಲಿಗೆ ಹೋಗಿ ಆಕನ ಅಲ್ಲಿ ಸಂಗತಿ ತಿಳ್ತ್.

ಚಂಗುಮಣಿ ಮತ್ತೆ ಫ್ಯಾಕ್ಟ್ ಮಾದಯ್ಯ ಸ್ಟೇಷನ್‌ಗೆ ಹೋಗಿ ತಪ್ಪುನ ಒಪ್ಪಿಕೊಂಡೊಳೊ ಗಡ. ಸೋಮಯ್ಯಂಗೆ ತಲೆ ತಿರ್‌ಗ್‌ಕೆ ಸುರ್ ಆತ್.

ಬೋರ್‌ಗುಡ್ಡೆ ದೇವಯ್ಯ ತನ್ನ ಆಫೀಸ್‌ಗೆ ಹೋಗಿ ಎತ್ತಿದ್ದೊ ಫೋನ್ ರಿಂಗಾತ್.

"ಹಲೋ ಡ್ಯಾಡಿ?"

"ಹ್ಣೂ ಹೌದ್‌ರಾ"

ಅದ್ ಮಂಜ ಜೀವನ್‌ದ್ ಫೋನ್.

"ಡ್ಯಾಡಿ ಅಣ್ಣನ ಕೇಸ್‌ಲಿ ತಪ್ಪಿತಸ್ಥ ಗಳಲ್ಲದವರ್ನ ಪೋಲೀಸ್‌ಗೆ ಕೊಡಿಕೆ ಬೋತ್ತ್‌ತ ನಾನ್ ನಿಂಗೆ ಹೇಳಿಯೊಳ ಅಲ್ಲಾ. ಮತ್ತೆ ಯಾಕೆ ನೀನ್ ಆ ಫ್ಯಾಕ್ಟ್ ಮಾದಯ್ಯನ ಪೋಲೀಸ್‌ಗೆ ಕೊಟ್ಟೆದ್?"

"ಛೇ ಛೆ ನನ್ನ ದುಡ್ಡೆಲ್ಲ ಸುಮ್ಮನೆ ಹಾಳಾಗಿ ಹೋತಲ್ಲರಾ, ನಿನ್ನ ಎಂ. ಎ. ವರೆಗೆ ಓದ್ಸಿ ಎಂತ ಪ್ರಯೋಜನ ಆತ್ ಹೇಳ್. ನಿಂಗೆ ಓದಿಕೆ ಗೊತ್ತಿಲ್ಲದೆ ಹೋದ್ರೆ ಯಾರ್‌ಕಲೆ ಆದ್ರೂ ಹೇಳಿ ಓದ್ಸರಾ. ಪೇಪರ್ ತೆಗ್‌ದ್ ನೋಡ್. ಆ ಫ್ಯಾಕ್ಟ್ ಮಾದಯ್ಯನ ಯಾರೂ ಪೊಲೀಸ್‌ಗೆ ಹಿಡ್‌ದ್ ಕೊಟ್ಟದಲ್ಲ. ಅವನೇ ಹೋಗಿ ಒಪ್ಪಿಕಂಡದ್. ಗಾಳಿಮರ ಸೋಮಯ್ಯನ ಮತ್ತೆ ಅವನ ಮಗಳ್‌ನ ಬಚಾವು ಮಾಡಿಕೆ ಇರೋ ಕಣಿ ಅದ್. ಪೊಲೀಸ್ ಜೊತೆ ಆಡ್‌ಕಾಕನ ಎಚ್ಚರಲಿ ಇರೂಕೂಂತ ನಾನ್ ಫ್ಯಾಕ್ಟ್ ಮಾದಯ್ಯಂಗೆ ಹೇಳಿಯೊಳೆ. ಕೇಸ್ ರಿಜಿಸ್ಟರ್ ಆಕೆ ಮೊದ್ಲೇ ಹೊರಗೆ ಬಾಕಿ ನೋಡ್‌ತ ನಾನ್ ತಿಳಿಸಿಯೊಳೆ, ಆದರೆ ಆ ನೀಲು ಗೂಡೆದ್ ಪೊರ್‌ಲ್‌ನ ಗೇನ ಮಾಡಿಕಾಕನ ಅವಂಗೆ ನನ್ನ ಮಾತ್ ಕೇಳಿಕೆ ಮನಸೇಬಾಲೆ. ನನ್ನ ತಪ್ಪ್‌ತ ಹೇಳಿಯಾ ನೀನ್. ಇದರಲ್ಲಿ ತಲೆ ಹಾಕುದೇನೂ ಬೇಡ. ನಿನ್ನ ಪಾಠ ಚೆನ್ನಾಗಿ ಕಲಿಯಕ ನೋಡ್ ಗೊತ್ತಾತಲ್ಲೆ"

"ನೋ ಡ್ಯಾಡಿ, ನೀನ್ ಹೇಳುದ್‌ನ ನಂಗೆ ನಂಬಿಕೇ ಆಲೆ. ಇದರಲಿ ಏನೋ ಒಂದು ವಂಚನೆ ಉಟ್ಟು. ಮಾದಯ್ಯ ತಪ್ಪ್ ಮಾಡ್‌ದಂವ ಅಲ್ಲ. ಅವ್ನ ನಾನ್ ಜಾಮಿನ್‌ಲಿ ಬುಡ್ಸದೆ ಇರ್ದುಲೆ ನೋಡ್"

"ಛೇ ನೀನ್ ನನ್ನ ಮಂಜ್ಣನಾಗಿ ಹುಟ್ಟಿ ನನ್ನ ಮಾತ್‌ನ ನಂಬುದುಲೆಲ್ಲರಾ. ಪೋರ್ಕಿ, ಹೋಗಿ ಆ ಮಾದಯ್ಯನ ಕೇಳಿ ನೋಡ್ ನಿಂಗೆ ಎಲ್ಲ ಅರ್ಥ ಆದೆ. ಮತ್ತೆ ಒಂದ್ ಮಾತ್ ಗೇನ ಮಾಡ್ಕ ಅವನ ನೀನ್ ಜಾಮೀನ್‌ಲಿ ಬುಡ್ಸಿನೇತ ಹೇಳ್ದೆ ಅಲ್ಲ ಆ ಬೊಡ್ಡಿ ಮಂಜ್ಣ ನಮ್ಮ ಗೋಡೆಲಿ ಎಂತೆಲ್ಲಾ ಬರ್ದ್ ಮಾಡ್ದ್‌ತ್‌ತ್ಂತ ಸ್ವಲ್ಪ ಗೇನ ಮಾಡಿ ನೋಡ್. ನಿಂಗೆಲ್ಲ ಅಣ್ಣ, ತಮ್ಮ, ಅಪ್ಪ, ಮಕ್ಕ ತೇಳುವ ಪ್ರೀತಿ ಇದ್ದರೆ ನೀನ್ ಹಿಂಗಿಲ್ಲ ಹೇಳಿಯಾ?

ದೇವಯ್ಯ ರಿಸೀವರ್‌ನ ಕುಕ್ಕಿತ್.

ಕೂಡ್ಲೇ ರಿಂಗಾಕೆ ಸುರ್ ಆದ್ರೂ ಅಂವ ತೆಗಿಯಕೇ ಹೋತ್‌ಲೆ. ಅವಂಗೆ ಅಂದ್ ಇಡೀ ದಿನ ಕೆಲ್ಸ ಇತ್ತ್. ಮನೆಲಿ ಅವನತ್ತರ ಯಾರ್‌ಸನ ಮಾತಾಡ್ತಿತ್ತ್‌ಲೆ.

"ನಿನ್ನ ನಾಲಿಗೆಗೆ ದನ ಮೆಟ್ಟಿಟ್ಟಾ ನಿಂಗೆಲ್ಲ ಎಂತ ಆಗುಟು ಯಾಕೆ ಮೊಕನ ಮೂಟೆ ಯಂಗೆ ಹೊತ್ಕೊಂಡೋಳ?"

ದೇವಯ್ಯ ತನ್ನ ಹೆಣ್ಣ್‌ನೊಟ್ಟಿಗೆ ಕೇಳ್ತ್.

(ಸಶೇಷ)

ಗೌಡ ಸಂಸ್ಕೃತಿ : (ಹಿಂದಿನ ಸಂಚಿಕೆಯಿಂದ.......)

ಸ್ವರ್ಗ ಸಲ್ಲಿಸುವ ಕ್ರಮ : ಕುಂಟಿಕೆದಾರ ಮತ್ತು ಮನೆಯವರು ಶರಣು ಮಾಡಿದ ನಂತರ ಸತ್ತವರ ಸರಿಯಾದ ಪರಿಚಯ ಇರುವವರೊಬ್ಬರು ಈ ಕೆಳಗಿನಂತೆ ಹೇಳುವರು. "ಬ್ರಹ್ಮಲಿಪಿಯಂತೆ ಅವರ ಮಾತಪಿತ್ರರ ಸುಪುತ್ರ/ಸುಪುತ್ರಿಯಾಗಿ ಹುಟ್ಟಿ ಬಾಲ ಲೀಲೆಗಳಿಂದ ಅವರ ಕಣ್ಮಣಿಯಾಗಿ ಬೆಳೆದೆ. ನಂತರ ಗುರುಕುಲವನ್ನು ಸೇರಿ ತಕ್ಕ ವಿದ್ಯಾಭ್ಯಾಸವನ್ನು ಪಡೆದೆ. ಪ್ರಾಪ್ತ ವಯಸ್ಸಿಗೆ ಬರುತ್ತಲೆ ಪತಿ/ಸತಿಯನ್ನು ವರಿಸಿದೆ. (ಇಲ್ಲಿ ಅವರ ಹೆಸರು ಹೇಳಿ ಅವನ/ಅವಳ ಪರಿಚಯ ಹೇಳಬೇಕು. ಅಲ್ಲದೆ ಕೆಲವೊಂದು ಅವರ ಗತವೈಭವ ಚರಿತ್ರೆಯನ್ನು ಹೇಳಬೇಕು) ಮಕ್ಕಳನ್ನು ಮೊಮ್ಮಕ್ಕಳನ್ನು ಪಡೆದೆ. ಮನೆಗೆ ಬಂದವರಿಗೆ ಹೊಟ್ಟೆಗೆ ಅನ್ನ ಕೊಟ್ಟೆ. ತಲೆ ನೋಡಿ ಎಣ್ಣೆ ಕೊಟ್ಟೆ. ಮೈನೋಡಿ ಬಟ್ಟೆ ಕೊಟ್ಟೆ. ಸರ್ವ ವಿಧಿಗಳಿಂದಲು ದಾನ ಧರ್ಮಗಳನ್ನು ಮಾಡಿ ಕೀರ್ತಿ ಶ್ರೇಷ್ಠರಾಗಿ ಬಾಳಿ ಬದುಕಿದೆ. ಆದರೆ ಇಂದಿಗೆ ಚಿಗುರೆಲೆ ಕಾಯಿ ಎಲೆಯಾಗಬೇಕು. ಕಾಯಿ ಎಲೆ ಹಣ್ಣೆಲೆಯಾಗಬೇಕು. ಹಣ್ಣೆಲೆ ಉದುರಲೇಬೇಕು. ಎನ್ನುವ ಸೃಷ್ಠಿ ನಿಯಮದಂತೆ ಮಕ್ಕಳನ್ನು, ಬಂಧುಗಳನ್ನು, ಅಷ್ಟೈಶ್ವರ್ಯವನ್ನು ಬಿಟ್ಟು ಜೀವಮಾನದಿಂದ ಅಂತ್ಯಗೊಂಡೆ. ನಾಡನ್ನು ಬಿಟ್ಟು ಕಾಡನ್ನು ಸೇರಿದೆ. ಆತ್ಮವು ಪರಮಾತ್ಮನಲ್ಲಿ ಮಿಲನವಾಯಿತು.

ನೀನು ಪರಮಾತ್ಮನ ವಶವಾದ ಕೂಡಲೇ ಸರ್ವರಿಗೂ ತಿಳಿಯಲಿ ಎಂದು, ಆತ್ಮ ದೇವನಲ್ಲಿ ಐಕ್ಯವಾಗುವ ಸೂಚನೆಯಂತೆಯು, ಜೋಡು ಗುಂಡನ್ನು ಆಕಾಶಕ್ಕೆ ಹಾರಿಸಿ ನೆರೆಕರೆಯವರು ಬಂದು ತುಳಿಸಿ ನೀರನ್ನು ಕೊಟ್ಟರು. ಊರಿನವರು ದಹನಕ್ಕೆ ಬೇಕಾದಷ್ಟು ಕಟ್ಟಿಗೆಯನ್ನು ತಯಾರು ಮಾಡಿದರು. ನಂತರ ಶಾಸ್ತ್ರೋಕ್ತವಾಗಿ ಮೃತ ದೇಹವನ್ನು ಸ್ನಾನ ಮಾಡಿಸಿ ಮಡಿಯನ್ನು ಉಡಿಸಿ ಮತ್ತು ಹೊದಿಸಿ ಚಟ್ಟದ ಮೇಲಿರಿಸಿ ತಲೆ ಕಡೆಯಿಂದ ಮನೆಯವರು ಕಾಲು ಕಡೆಯಿಂದ ಊರವರು ಹೊತ್ತುಕೊಂಡ್ಹೋಗಿ ತೆಂಕು ಬಡಗು ಆಗಿ ಕಾಟದಲ್ಲಿ ಇಟ್ಟು, ತಲೆ ಕಡೆಯಿಂದ ಮನೆಯವರು ಕಾಲು ಕಡೆಯಿಂದ ಊರಿನವರು ಬೆಂಕಿ ಕೊಟ್ಟು ಉರಿಸಿದರು. ಅಂದಿನಿಂದ ನಿನ್ನ ಪವಿತ್ರ ದೇಹವು ಭೂಮಿಗೆ ಗೊಬ್ಬರವಾಗಿ ಆಕಾಶಕ್ಕೆ ಹೊಗೆಯಾಗಿ ಪರಿವರ್ತನೆಯಾಯಿತು. ಇಂದು ನೀನು ಸಹ ಇಹ ಲೋಕವನ್ನು ಬಿಟ್ಟು 11ನೇಯ ದಿನಾವಾಗಿದೆ. ಹಾಗೆಯೇ ನಾವೆಲ್ಲರೂ ನಿನ್ನ ಆತ್ಮಕ್ಕೆ ಶಾಂತಿಯನ್ನು ಕೋರಲಿಕ್ಕಾಗಿ ಇಲ್ಲಿ ಬಂದು ನೆರೆದಿದ್ದೇವೆ. ಸಂಸಾರಿ ನೌಕೆಯನ್ನು ನಡೆಸುತ್ತಾ ಬಂದಂತೆ ನಿಮಗೆ ವಯಸ್ಸಾಯಿತು. ಕಾಯಿಲೆಯಲ್ಲಿ ಮಲಗಿದಿರಿ. ಪುರೋಹಿತ ರಲ್ಲಿ ಶಾಸ್ತ್ರ ಕೇಳಿಸಲಾಯಿತು. ವೈದ್ಯರಿಂದ ಔಷಧಿ ಮಾಡಿಸಲಾಯಿತು. ಯಾವುದರಿಂದಲೂ ಗುಣವಾಗಲಿಲ್ಲ, ನಿನ್ನ ಪ್ರಾಣವಾಯು ಮೃತ್ಯುವಿನಿಂದಲೋ ಅಥವಾ ಅಪಮೃತ್ಯುವಿನಿಂದಲೋ ಈ ದೇಹ ಬಿಟ್ಹೋಯ್ತು. ಇನ್ನು ಮುಂದೆಂದೂ ಕಷ್ಟಗಳಿಗೆ ಸಿಕ್ಕದೆ ಪರಮಾತ್ಮನಲ್ಲಿ ಐಕ್ಯಗೊಳ್ಳು ಎಂದು ಹರಸುತ್ತೇವೆ. ಅಲ್ಲದೆ ಮುಂದಿನ ಜನ್ಮದಲ್ಲಿ ಅಗಸನ ಕಲ್ಲಾಗದೆಯೂ, ಗಾಣಿಗನ ಎತ್ತಾಗದೆಯೂ, ಹಾದಿ ಬದಿಯ ಮರವಾಗದೆಯೂ, ಬ್ರಾಹ್ಮಣನ ಆಳಾಗದಂತೆಯೂ ಇರು. ಈ ಜನ್ಮವನ್ನು ತೊರೆದು ಬಾಳೆ

ದಿಂಡಿನ ಪಾಲದಲ್ಲಿ ನೂಲಿನ ಕೈತಾಂಗಿನಲ್ಲಿ ಸ್ವರ್ಗಕ್ಕೆ ಹೋ
ಶ್ರೀಮನ್ನಾರಾಯಣನ ಬಲಭಾಗದಲ್ಲಿ ಸಂಪಿಗೆಯ ಮರವಾಗಿ ಹು
ಎಂದು ನಿನ್ನ ಮನೆಯವರು ಊರಿನವರು, ನೆಂಟರಿಷ್ಟರು ಹಾ
ಸರ್ವರು ಹಾರೈಸುತ್ತೇವೆ. (ಇಲ್ಲಿ ಇಷ್ಟಪಟ್ಟ ಹೆಸರಿನಿ
ಕರೆಯಬೇಕು) "ಸ್ವರ್ಗಕ್ಕೆ ಹೋಗು" "ಸ್ವರ್ಗಕ್ಕೆ ಹೋ
"ಸ್ವರ್ಗಕ್ಕೆ ಹೋಗು" ಎಂದು 3 ಬಾರಿ ಹೇಳಿ ಅಕ್ಕಿ ಹಾಕುವ
ನಂತರ ಒಂದೆರಡು ನಿಮಿಷ ದೂಪೆಗೆ ಬೆನ್ನು ಹಾಕಿ ಹಿಂತಿ
ನಿಲ್ಲುವರು. (ದೂಪೆಗೆ ಇಟ್ಟ ತಿಂಡಿ ತಿನಿಸು ಮಧ್ಯ ಇತ್ಯಾದಿಗಳ
ಮೊದಲಾಗಿ ಮಡಿವಾಳನು, ಅನಂತರ ಕ್ಷೌರಿಕ, ವಾದ್ಯದವರು ಮ
ತೆಗೆದುಕೊಳ್ಳ ಬಹುದಲ್ಲದೆ ಇನ್ನಿತರರು ಯಾರು ಸೇವಿಸಕೂಡದ

ಎಲ್ಲರೂ ಹಿಂತಿರುಗಿದ ನಂತರ ಮನೆಯವರು, ಕುಟು
ದವರೆಲ್ಲರೂ ತಣ್ಣೀರಿನಲ್ಲಿ ಸ್ನಾನ ಮಾಡಿ (ಸಾಬೂನ ಹಾಕಬಾರ
ಮಡಿವಾಳನಿಂದ ಮಡಿಬಟ್ಟೆ, ಕೇಳಿ ಉಟ್ಟುಕೊಳ್ಳತಕ್ಕದ್ದು. ಅಂ
ನೆರೆದಿರತಕ್ಕ ಎಲ್ಲರೂ ಕೈಕಾಲು ಮುಖ ತೊಳೆದು ತಲೆಗೆ ಸ್ವಲ್ಪ ನೀ
ಸಿಂಪಡಿಸಿಕೊಳ್ಳಬೇಕು.

ಅನಂತರ ಮನೆಯ ಮುಂದೆ ಅಂಗಳದಲ್ಲಿ ಮನೆಗೆ ಮು
ಮಾಡಿ ಮನೆಯವರು ಸಾಲಾಗಿ ನಿಲ್ಲಬೇಕು. ಊರಿನವರು ಮ
ನೆಂಟರಿಷ್ಟರು ಸೂರಿನ ಪಕ್ಕದಲ್ಲಿ ಮನೆಗೆ ಬೆನ್ನು ಹಾಕಿ ಸಾಲ
ನಿಲ್ಲುವರು. ಹೀಗೆ ಎರಡು ಕಡೆಯವರು ಸಾಲಾಗಿ ನಿಂತ ನಂ
ಮಡಿವಾಳನು ಮೊದಲು ಊರಿನವರಿಗೆ ಆತನು ತಂದಿರತಕ್ಕ ಖಾ
ನೀರನ್ನು (ಬಟ್ಟೆ ಒಗೆಯುವ ಸೋಡಾ ಪುಡಿಯನ್ನು ನೀರಿನ
ಮಿಶ್ರಮೀಡಿದ ನೀರಿಗೆ ಖಾರ ನೀರೆಂದು ಹೆಸರು) ಮಾವಿನ ಎಲೆಯ
ಮೊದಲು ಕಾಲಿಗೆ, ಅನಂತರ ನಡುಭಾಗಕ್ಕೆ ತಂದನಂತರ ಎದೆ ಮಟ್ಟ
ಎಲ್ಲರಿಗೂ ಚಿಮುಕಿಸುವನು. ಖಾರ ನೀರು ಚಿಮುಕಿಸಿದ ಪ್ರಕಾ
ಅಕ್ಕಿಯನ್ನು ಮೂರು ಬಾರಿ ಕಾಲಿಗೆ ನಡುಭಾಗಕ್ಕೆ, ಎದೆ ಭಾಗ
ಎರಚುವನು, ನಂತರ ಮಡಿವಾಳನು ಊರಿನವರಿಗೆ ಖಾರ ನೀರು ಅ
ಎರಚಿದ ಪ್ರಕಾರ ಮನೆಯವರಿಗೂ ಎರಚುವನು. ಆ ಪುಣ್ಯ ನೀರನ
ತಲೆಯ ಮೇಲೆ ಊರಿನವರು ಚಿಮುಕಿಸುವರು. ತದನಂತ
ಊರಿನವರೊಬ್ಬರು ದೂಪ ಮಿಶ್ರಿತ ಕೆಂಡದ ತಟ್ಟೆ ಮತ್ತು ಸವ
ಗಂಧ, ಹೂಗಳನ್ನು ಒಂದು ಬಾಳೆ ಎಲೆಯಲ್ಲಿಟ್ಟು ಎಲ್ಲರಿಗೂ ಅಂದ
ಮೊದಲು ಊರಿನರಿಗೂ ತದನಂತರ ಮನೆಯವರಿಗೂ ತೋರಿಸುತ್ತಾ
ಬರುವರು.

ಮನೆಯ ಹೊರಭಾಗದಲ್ಲಿ ಶಾಸ್ತ್ರಕ್ರಿಯೆಗಳು ನಡೆಯುತ್ತಿದ್ದಂ
ಊರಿನ ಯಾರಾದರು ಇಬ್ಬರು ಯಾ ಮೂವರು ಮನೆಯ ಒಳ
ಹೋಗಿ ಮನೆಯನ್ನೆಲ್ಲಾ ಗುಡಿಸಿ, ಸಗಣಿ ನೀರು ಹಾಕಿ ದೇವರ ದೀ
ಹಚ್ಚುತ್ತಾರೆ. ಅನಂತರ ಮಡಿವಾಳನು ಒಂದು ಬಿಳಿ ಬಟ್ಟೆಯನ್ನು
ಮನೆಯ ಮೆಟ್ಟಲಿಗೆ ಹಾಸುತ್ತಾನೆ. ಎಲ್ಲರೂ ಆ ಬಟ್ಟೆಯನ್ನು ಮೆಟ್ಟಿ
ಒಳಗೆ ಹೋಗಿ ದೇವರ ದೀಪಕ್ಕೆ ಶರಣು ಮಾಡಿ ಅಕ್ಕಿ ಹಾಕುವರು.

ಶುದ್ಧಕ್ರಮ ಕಳೆಯುವವರೆಗೆ ಸೂತಕದ ಮನೆಯವರು ಅಡಿಗೆ
ಮಾಡಕೂಡದು. ಬಂದ ಅತಿಥಿಗಳಿಗೆ ಊಟ ಕೊಡಿಸಲು ಊರಿನವರು
ನೆಂಟರು ಮೊದಲಾದವರು ಸೇರಿ ಹೊರಗಡೆ ಅಡಿಗೆ ಮಾಡಬೇಕು.
ಶುದ್ಧಕ್ರಿಯೆಯಲ್ಲಿ ಮಾಂಸ ಮುಂತಾದವುಗಳನ್ನು ಉಪಯೋಗಿಸ

ಡದು. ಅದಕ್ಕಾಗಿ ಪಾಯಸ ಮುಂತಾದ ಸಿಹಿ ಪದಾರ್ಥ. ಅನ್ನ, ಲೋಗರ ಸಾರು ಮಾಡತಕ್ಕದ್ದು.

ಆ ದಿನದ ಸರ್ವ ಕೆಲಸ ಕಾರ್ಯಗಳು ಊರಿನವರು ಹಾಗೂ ಟರಿಷ್ಟರು ಮಾಡಬೇಕಾಗಿರುವುದರಿಂದ ಮನೆಯ ಮುಂಭಾಗದ ಗಳದಲ್ಲಿ ಎರಡು ಪಂಕ್ತಿಯಾಗಿ ಅಂದರೆ ಮನೆಯವರು ಮನೆಗೆ ನುರಾಗಿಯೂ ಊರಿನವರು ಮನೆಗೆ ಬೆನ್ನುಮಾಡಿಯೂ ಳಿತುಕೊಳ್ಳತಕ್ಕದು. ಸರ್ವರಿಗೂ ಊಟಕ್ಕೆ ಎಲೆಕೊಟ್ಟು ಬಡಿಸಿದ ತರ ಕುಂಟಿಗೆದಾರನು ಒಂದು ಚೆಂಬು ನೀರು ಹಿಡಿದು ಎದ್ದು ನಿಂತು ಲ್ಲರಿಗೂ ಕೇಳುವಂತೆ ವಿನಯದಿಂದ ಈ ಕೆಳಗಿನಂತೆ ಹೇಳಬೇಕು. **ಮೃತರ ಹೆಸರಿನಲ್ಲಿ ನಾವು ಅಂಬಲಿ ಗಂಜಿ ತುಂಬೆ ಸೊಪ್ಪಿನ ಸಾರು ಕ್ಕಿದ್ದೇವೆ. ತಾವೆಲ್ಲರೂ ಸಂತೋಷದಿಂದ ಊಟ ಮಾಡಿ ಮೃತರ ತ್ಮಕ್ಕೆ ಶಾಂತಿ ಕೋರಬೇಕು**" ಎಂದು ಹೇಳಿದ ನಂತರ ಸರ್ವರೂ ಟ ಮಾಡುವುದು. ಊಟ ಮುಗಿಯುತ್ತಾ ಬಂದಂತೆ ಅಂದರೆ ಟಕ್ಕೆ ಕುಳಿತವರು ಏಳುವ ಮೊದಲ ಮನೆಯಿಂದ ಕೊಟ್ಟ ಹೆಣ್ಣು ಕ್ಕಳಿದ್ದರೆ, ಅವರಲ್ಲಿ ಒಬ್ಬರು ಒಂದು ವಿಳ್ಯದೆಲೆ ಒಂದು ಅಡಿಕೆ ತಿಯೊಬ್ಬರ ತಲೆಗೆ ಎಣ್ಣೆ ಕೊಡುತ್ತಾ ಹೋಗಬೇಕು. ಊಟ ಾಡುವಾಗ ಎಲೆ ಅಡಿಕೆ ಪ್ರತಿಯೊಬ್ಬರಿಗೂ ಕೊಡುತ್ತಾ ೋಗಬೇಕು. ಇನ್ನೊಬ್ಬಳು ಹಲಸಿನ ಮರದ ಎಲೆಯನ್ನು ಚಮಚ ಕಾರ ದಲ್ಲಿ ಜೊನ್ನೆ ಮಾಡಿ ಒಂದು ಪಾತ್ರೆ ಅಥವಾ ಚೆಂಬಿನಲ್ಲಿ ಂಗಿನ ಎಣ್ಣೆ ಹಾಕಿ ಪ್ರತಿಯೊಬ್ಬರ ತಲೆಗೆ ಎಣ್ಣೆ ಕೊಡುತ್ತಾ ೋಗಬೇಕು. ಊಟ ಮಾಡುವಾಗ ಎಲೆ ಅಡಿಕೆ ಮತ್ತು ಎಣ್ಣೆ ಾಡುವ ಕ್ರಮವು ಏಕೆಂದರೆ ಮೃತನು ಜೀವಂತವಿದ್ದಾಗ ಸಾಕಷ್ಟು ಶ್ವರ್ಯ ಗಳಿಸಿಡುತ್ತಾನೆ. ಹಲವೊಮ್ಮೆ ಅನ್ಯಾಯದ ಗಳಿಕೆಯು ಸೇರಿರುತ್ತದೆ. ಆದರೆ ಆತನು ಸಾಯುವಾಗ ಸರ್ವಸ್ವವನ್ನು ಬಿಟ್ಟು ಹೋಗುತ್ತಾನೆ. ಆತನು ಮಾಡಿದ ಪಾಪ ಕರ್ಮಗಳಿಂದ ಮುಂದಿನ ಜನ್ಮದಲ್ಲಿಯಾದರೂ ಸಂಕಟಕ್ಕೆ ಗುರಿಯಾಗದೆ ಮೃತನ ಆತ್ಮಕ್ಕೆ ಶಾಂತಿ ಸಿಗಲೆಂಬ ಉದ್ದೇಶಕ್ಕಾಗಿ ಹೊಟ್ಟೆಗೆ ಊಟ, ತಲೆಗೆ ಎಣ್ಣೆ, ಬಾಯಿಗೆ ತಾಂಬೂಲವನ್ನು ಕೊಡುವುದು ಹಿಂದಿನಿಂದಲೂ ನಡೆದುಬಂದ ಪದ್ಧತಿ.

ಶುದ್ಧ ಮತ್ತು ತಿಥಿಕರ್ಮಾಂತರವು ಹನ್ನೊಂದನೆಯ ದಿನದಂದು ಆಚರಿಸುವುದು, ಹಿಂದಿನಿಂದಲೂ ನಡೆದುಬಂದ ನಿಯಮ. ಆದರೆ ಹನ್ನೊಂದು ದಿವಸದ ವರೆಗೆ ಅಶ್ವಸ್ಥತೆಯಲ್ಲಿದ್ದರೆ ಕೆಲಸಕಾರ್ಯಗಳಿಗೆ ತಿರುಗಾಟಕ್ಕೆ ತುಂಬಾ ತೊಂದರೆಯಾಗುವುದರಿಂದ ಶುದ್ಧವನ್ನು ಮೊದಲು ಮುಗಿಸಿ ತಿಥಿಕರ್ಮಾಂತರವನ್ನು ಮಾತ್ರ ಹನ್ನೊಂದನೆಯ ದಿನದಂದು ಏರ್ಪಡಿಸುತ್ತಾರೆ.

ಕೆಲವು ಸಂದರ್ಭಗಳಲ್ಲಿ ಜೀವನ ವ್ಯವಸ್ಥೆ, ಆರ್ಥಿಕ ಮಟ್ಟ, ಕೆಲಸಕಾರ್ಯಗಳ ತೊಂದರೆಯಲ್ಲಿರುವವರು ಬೇರೆ ಬೇರೆ ಖರ್ಚುಗಳನ್ನು ಪೂರೈಸಿಕೊಳ್ಳಲು ಅಸಾಧ್ಯವಿರುವವರು ಹನ್ನೊಂದರಂದೇ ಶುದ್ಧ ಮತ್ತು ತಿಥಿಯನ್ನು ಏರ್ಪಡಿಸುತ್ತಾರೆ. ಆದರೆ ಇನ್ನೂ ಕೆಲವರು ಶುದ್ಧವನ್ನು ಮೊದಲು ಮುಗಿಸಿ ಉತ್ತರಕ್ರಿಯೆಗಳನ್ನು ಹದಿನಾರನೆಯ ದಿನದಂದು ಏರ್ಪಡಿಸುವುದು ಇದೆ. ಏಕೆಂದರೆ ಬೇರೆಬೇರೆ ದಿನಗಳಲ್ಲಿ ಆಗುವ ಖರ್ಚುಗಳು, ಅತಿಥಿಗಳು ಬಂದು ಹೋಗುವ ತೊಂದರೆ ಹೀಗೆ ಹಲವಾರು ಅಡಚಣೆಗಳು ಎದುರುಗೊಳ್ಳುವುದರಿಂದ ಅವರವರ ಸೌಕರ್ಯಗಳಿಗನುಸಾರವಾಗಿ ಏರ್ಪಡಿಸಿಕೊಳ್ಳುತ್ತಾರೆ.

– ಮುಂದುವರೆಯುತ್ತದೆ.

ಮನೆ ಹೆಸರು ಹುಡುಕಿ

ಇದರಲ್ಲಿ ಕೆಲವು ಮನೆ ಹೆಸರುಗಳು ಅಡಗಿಕೊಂಡಿವೆ. ಅವುಗಳನ್ನು ಸರಿಯಾಗಿ ಬರೆದು ಆವರಣದೊಳಗಿರುವ ಅಕ್ಷರಣಗಳನ್ನು ಕೂಡ ಸರಿಯಾದ ಕ್ರಮದಲ್ಲಿ ಬರೆದರೆ 'ಕುಟುಂಬ ಅಥವಾ ಸೇನೆ' ಎಂಬ ಅರ್ಥ ಬರುವ ಮನೆಯ ಹೆಸರು ಸಿಗುತ್ತದೆ. ಪ್ರಯತ್ನಿಸಿ

1. ಟ್ಟಪಡ ☐◯☐
2. ಉರವಾನಳು ☐☐◯☐
3. ಮನೆಚೆಯರಿ ☐◯☐☐☐
4. ರಜೆಸಿಕ ☐◯☐☐

ಹೊಸ ಪದ ☐☐☐☐

ಪೊನ್ನೆಟಿ ಸುನೀಲ್,
ಬಾಗಮಂಡ್ಲ.

ಉತ್ತರ : 1. [illegible] 2. [illegible] 3. [illegible] 4. [illegible] ಹೊಸ ಪದ : ಪರಿವಾರ

ವಿಸ್ಮಯ ಗಣಿತ ಲೋಕ

$$5^2 = 5\times5 = 25$$
$$15^2 = 1\times2 + 5\times5 = 225$$
$$25^2 = 2\times3 + 5\times5 = 625$$
$$35^2 = 3\times4 + 5\times5 = 1225$$
$$45^2 = 4\times5 + 5\times5 = 2025$$
$$55^2 = 5\times6 + 5\times5 = 3025$$
$$65^2 = 6\times7 + 5\times5 = 4225$$
$$75^2 = 7\times8 + 5\times5 = 5625$$
$$85^2 = 8\times9 + 5\times5 = 7225$$
$$95^2 = 9\times10 + 5\times5 = 9025$$
$$105^2 = 10\times11 + 5\times5 = 11025$$

ಸಂಗ್ರಹ : ಮಂಡೇಂಡ್ರ ಚೈತ್ರ ಈರಪ್ಪ,
ಯವಕಪಾಡಿ

"ಪ್ರಜ್ಞಾವಂತನಾದ ಗೌಡನೇ
ಜನಾಂಗದ ನಿಜವಾದ ಆಸ್ತಿ"

ತಿಮ್ಮಪ್ಪನ ಮೈಮ್ಯಾಲೆ ಬಂದ ದೇವುರುಗೆ ಗೋವಿಂಧಾನೂ ಗೋವಿಂಧ, ಗೋ...ವಿಂ...ಧ

ವಿಷ... ಹಂಗೆಲ್ಲ ಆತಲ್ಲಾ. ಅದೆ ನಾಣಿ ದೊಡ್ಡಪ್ಪ ಧರ್ಮಸ್ಥಳಕ್ಕೆ ಹಕ್ಕೆ ಹೊತ್ತ್‌ಕಂಡದ್ ಶಶಿ ಅತ್ತಿಗೆನ ಸುರುಮಂಜನ ಹೆರಿಗೆ ಆಕಾಕನ ಗಂಡಂಗೆ ಗೊತ್ತಿಲ್ಲದಂಗೆ ಸುಬ್ರಮಣ್ಯಕ್ಕೆ ಕೂಸುನ ಪ್ರತಿರೂಪ ಒಪ್ಪಿಸಿನೆತ ಹೇಳಿ ಕಂಡದ್, ಬಿದ್ದಪ್ಪಯ್ಯನ ಜಾಗನ ಅವರ ದೊಡ್ಡಪನ ಮಂಜ ಒಳಗೆ ಹಾಕಿಕಂಡದ್, ಹಂಗೆ ತಪ್ಪಿಹೋದ ಜಾಗನ ಪುನಃ ನಂಗೆ ಸಿಕ್ಕಿರೆ ಕುಟುಂಬದವರ್‌ನೆಲ್ಲಾ ಸೇರ್‌ಸಿ ಐನ್ ಮನೇಲಿ ಹರಿಸೇವೆ ಮಾಡ್ಸಿನೆತ ಅವು ಹೇಳಿಕಂಡದ್ ಇದರೆಲ್ಲದರ ಫಲ ಇಡೀ ಕುಟುಂಬಕ್ಕೆ ಕಂಟಕ ಬಂದದ್ ! ಮಲಿಯನ ಹತ್ರ ಕೇಳ್ಸ್‌ಕಾಕನ ವೆಂಕಟ್ರಮಣಸ್ವಾಮಿದ್ ಹರಿಸೇವೆ ಮಾಡ್ಸಿ, ಬಂಡಾರನ ತಿರುಪತಿಗೆ ಒಪ್ಸಿರೆ ಇಡೀ ಕುಟುಂಬದ ಕಷ್ಟನಷ್ಟ ಪರಿಹಾರ ಆದೆತ ಅಂವ ಹೇಳ್ದ. ಕುಟುಂಬದ ಕುಡಿಯಾಗಿ ನಾನ್ ಅದರ್‌ಲಿ ಪಾಲ್ಗೊಂಡದ್. ಅದೆಲ್ಲ ಒತ್ತೊಟ್ಟಿಗೆ ಇರ್‌ಲಿ. ಮುಂದೆನ ಸಂಗತಿ ಕೇಳಿನೋಡಿ.

ಹಂಗೆ ಕುಟುಂಬದವರ್‌ನ ಸೇರ್‌ಸಿ ಹರಿಸೇವೆ ಮಾಡ್ಲೊಕು, ಕುಟುಂಬದ ಪರವಾಗಿ ಎರ್ಡ್ ಗುಂಡನ ಕಟ್ಸಕು. ಕೆಂಚಿರಾಯನ ಬ್ಯಾಟೆಗೆ ಒಂದು ಆಡ್‌ನ ಕೊಯ್ಸ್‌ಕು. ಅದರ ಖರ್ಚಿಗಾಗಿ ಒಂದು ಒಲೆಗೆ ನೂರ್ ನೂರ್ ರೂಪಾಯಿ ನಂಗೆ ಚಂದ ಎತ್ತಕು. ಬಾಕಿ ಖರ್ಚಿನ ಬಿದ್ದಪ್ಪಯ್ಯನೆ ನೋಡೊಕುತ ಐನ್‌ಮನೆಲಿ ಕುಟುಂಬದವೆಲ್ಲ ಸೇರಿ ತೀರ್ಮಾನ ಮಾಡ್ಲೊ. ದಾಸನ ಹತ್ರ ಮಾತಾಡಿ ದಿನ ನಿಗದಿ ಮಾಡಿ ಕಾಗದನೂ ಪ್ರಿಂಟ್ ಮಾಡ್ಲೊ. ದೇವುರು ನಿಲ್ಲಿಕೆ ಬಂಟರ ತಿಮ್ಮಪ್ಪಂಗೆ ಹೇಳ್ಲೊ. ಈ ತಿಮ್ಮಪ್ಪಂಗೆ ದೇವುರು ಮೈಮ್ಯಾಲೆ ಬಂದದೆತ ಎಲ್ಲಾವುಕು ಗೊತ್ತುಟ್ಟು ತಾನೆ? ಹಂಗಾಗಿ ಇವನ ಗತ್‌ಗೌರವ ಹೆಚ್ಚಿತ್. ನಾನ್ ಏನ್ ಮಾಡ್ರು ನನ್ನ ಎದ್‌ರ್ ನಿತ್ತ್ ಕೇಳುವ ಮಂಜ ಯಾರ್‌ತ್ತೇಳುವ ಹುಂಬ ಧೈರ್ಯನೂ ಇತ್ತ್. ಆ ಧೈರ್ಯಲೇ ಒಂದು ದಿನ ಕೆಂಬಟಿ ಕೆಂಚನ ಹಂದಿಗೂಡಿಗೆ ನುಗ್ಗಿತ್. ಅವಂಗೆ ಸರಕಾರದವು ಹಂದಿ ಸಾಂಕಿಕೆತ ಲೋನ್ ಕೊಟ್ಟಿದ್ಲೊ. ಅಂವ ಐದಾರ್ ಜಾತಿ ಹಂದಿಗಳ್ನ ಸಾಂಕಿತ್ತ್. ಅದರ್‌ಲಿ ಒಂದು ಬೀಜದ ಹಂದಿ ಒಂಟಿಂಗನಂಗೆ ಲಾಯ್ಕಲಿ ದಪ್ಪ ದಪ್ಪಾಗಿ ಬೆಳೆದಿತ್ತ್. ಈ ತಿಮ್ಮಪ್ಪ ಸಾಯಂಕಾಲಕನ ಕೆಂಚಂಗೆ ಲಾಯ್ಕಲಿ ಕುಡ್ಸಿ, ಚರಂಡಿಲಿ ಬೀಳ್ಸಿ, ಹಂದಿನ ಹೊಡ್ದ್ ಹೊತ್ತತ್. ಮಾರ್‌ನೆದಿನ ಕೆಂಚನ ಹೆಣ್ಣ್ ಹಂದಿಗೆ ಹೊಯ್ಯಕೆ ಹೋಕನ ಬೀಜದ ಹಂದಿ ನಾಪತ್ತೆ. ಹಂದಿ ಏನಾತ್‌ತ ಅವುಳುಗೂ ಗಾಬರಿ. ಅವಳ ಬಾಯಿ ಬೇರೆ ಬೊಂಬಾಯಿ. ಊರಿಡಿ ಬೊಬ್ಬೆ ಹಾಕಿತ್. ಏನಾದರೇನ್ ಹಂದಿ ಮಾತ್ರ ಸಿಕ್ಕಿತ್ಲೆ. ಎಷ್ಟಾದರೂ ಹೊಲ್‌ಸ್ ನಾರಕೊಲೆ. ನಾಲ್ಕುದಿನ ಕಳೆಯಕಾಕನ ಇದೇ ತಿಮ್ಮಪ್ಪನೆ ಹಂದಿ ಹೊಡ್ದ್ ಮಾರ್ಡ್‌ತ್ತೇಳಿ ಊರಿಡೀ ಟಾಮ್ ಟಾಮ್ ಆತ್. ಕೆಂಚಂಗೆ ಬ್ಯಾರೆ ಲೋನ್‌ಲಿ ಸಿಕ್ಕಿದ ಹಂದಿ. ಅಂವ ರಾಜಕಾರ್ಣಿಗಳ ಹಿಡ್ಕಂಡ್ ತಿಮ್ಮಪ್ಪನ ಮ್ಯಾಲೆ ಕೇಸ್ ಮಾಡ್ತ್. ಪೋಲಿಸ್‌ನವು ಬೂಟ್‌ಕಾಲ್‌ಲಿ ಒದ್ದ್ ತಿಮ್ಮಪ್ಪನ ಒಳಗೆ ಹಾಕಿದೊ. ತಪ್ಪು ಒಪ್ಪಿಕೊಂಡ ತಿಮ್ಮಪ್ಪ ಹಂದಿಮಾಸ ಮಾರಿ ಸಿಕ್ಕಿದ ದುಡ್ಡಿಗೆ ಬಡ್ಡಿ ಸೇರ್‌ಸಿ ಕೆಂಚಂಗೆ ಕೊಟ್ಟಿತ್.

ಅದೇ ತಿಮ್ಮಪ್ಪ ಈಗ ನಮ್ಮ ಹರ್‌ಸೇವೇಲಿ ದೈವಭಕ್ತನಾಗಿ ನಿಲ್ಲುದುಗಡ. ಇವಂಗೆ ದೇವರು ಬಾದುಗಡ ! ಇವನ ಮೇ... ...ರು ಬಾಕಕನ ನಾವು ಕಷ್ಟಸುಖ ಹೇಳಿ ಕಣೋಕುಗಡ. ಇಂವ ಪರಿ... ಕೊಟ್ಟದೆ ಗಡ. ವಿಷಯ ನಂಗೆ ಗೊತ್ತಿದ್ದರೂ ಬ್ಯಾಡತ್ತೆ... ನಾನ್ಯಾರ್? ಹತ್ತರೊಟ್ಟಿಗೆ ಹನ್ನೊಂದುತ ಜೈ !

ಅದಿರ್‌ಲಿ, ಹರಿಸೇವೆಯೂ ಬಾತ್. ದಾಸಯ್ಯನೂ ದೇ... ಬರುವ ತಿಮ್ಮಪ್ಪನೂ ಬಂದೊ. ಗುಂಡನು ಕಟ್ಟಿಯಾತ್. ಭಕ್ತ... ಕ್ಯಾಟಗಾಳಿಗೆ ತಣ್ಣೀರ್‌ಲಿ ಮೀದ್‌ನಿತ್ತೊ. ದಾಸಯ್ಯನ ಪೂಜೆ ... ಮೇಲೆ ದೇವುರು ತಿಮ್ಮಪ್ಪನ ಮೈಮೇಲೆ ಬಾತ್. ಒಬ್ಬೊಬ್ಬನೆ ... ಸುಖ ಹೇಳಿಕಂಡೊ. ತಿಮ್ಮಪ್ಪ ಕನ್ನಡ ಭಾಷೆಗೆ ಅರ್ಥತುಳು ... ಪರಿಹಾರ ಕೊಡ್ತಿತ್ತ್. ಅಷ್ಟಾಕನ ಕೆಂಚನು ಕೆಂಚಿನು ... ಹಾಜರಾದೋ? ಅವುಕೆ ಹರಿಸೇವೆ ಕಾಗದ ಕೊಟ್ಟದ್ ಯಾರೋ... ಇಲ್ಲೆ ತಿಮ್ಮಪ್ಪಂಗೆ ದೇವುರು ಬಂದದೆತ ತಿಳ್ಕಂಡ್ ಅವ್ವೇ ಬಂದನ... ನಂಗೊತ್ಲೆ. ಕೆಂಚನು ಕೆಂಚಿನು ಪಟ್ಟೆದಾರನ ಒಪ್ಪಿಗೆ ಪಡ್ಕಂಡ್ ... ಕೇಳಿಕೆ ಸುರು ಮಾಡ್ಲೊ. ಕೆಂಚ ಹೇಳ್ತ್, ನನ್ನ ಹಂದಿ ಗೂಡ್... ಒಂದು ಹಂದಿ ನಾಪತ್ತೆಯಾಗಿಟ್ಟು, ಅದನ್ನು ಹೊಡೆದು ಮಾರಿ... ಯಾರ್‌ತ ಕೇಳ್ತ್. ಆಗ ತಿಮ್ಮಪ್ಪನ ಮೈಮೇಲೆ ಇದ್ದ ದೇವುರು... ಅದ್ ಈಗಾಗಲೇ ನಿನ್ನ ಅರಿವಿಗೆ ಬಂದಿದೆಯಲ್ಲ ಶಿಶುವೆ? ತೇ... ಈಗ ಕೆಂಚಿ ಇಲ್ಲ ಇಲ್ಲ ನನಗೆ ತಿಳಿದಿಲ್ಲ. ಆತನ ಹೆಸರು ತಿಳಿಸಬೇ... ಮತ್ತೆ ಅವಂಗೆ ನನ್ನ ಕಣ್ಣೆದುರಿನಲ್ಲೆ ತಕ್ಕ ಶಾಸ್ತಿ ಆಗಬೇಕು ತೇಳ... ಅದ್ಕೆ ತಿಮ್ಮಪ್ಪ ಹೇಳ್ತ್ ಭಯಪಡಬೇಡ ಶಿಶುವೆ, ಒಂಜಿಗ್ ರಡ್ಡಾ... ರಡ್ಡೆಗ್ ನಾಲಾತ್ (ಒಂದಕ್ಕೆ ಎರಡಾಗಿ ಎರಡಕ್ಕೆ ನಾಲ್ಕಾಗಿ) ಬೇ... ಉಳ್ಸಿ ಕೊಟ್ಟೆನೂ ನೀನು ಇನ್ನು ಹೋಗುತ್ತೇಳ್ತ್. ನಾನ್ ಅ... ಎಯ್, ತಿಮ್ಮ ಈಗ ನಿಂಗೆ ಬಂದ ಸಂಕಟ ಪರಿಹಾರ ಆಕುತ್ತೇ... ಸೀದಾ ಮಡಿಕೇರಿ ಬಸ್‌ಸ್ಟ್ಯಾಂಡ್ ಎದ್‌ರ್ ಹರಿವ ತೋಡ್‌ಲಿ ಮೀ... ಬಾತ ಹೇಳ್‌ಕುತ ಗ್ಯಾನ ಮಾಡಿಕಂಡ್ ಅವನ ನಾಟಕನ ಕೆಕ್ಕರಿಸಿಕಂ... ನೋಡಿಕಂಡೆ ನಿತ್ತೇ ಇದ್ದೇ.

ತಿಮ್ಮಪ್ಪನ ಮೈಮೇಲೆ ಬಂದ ದೇವುರುಗೆ ಗೋವಿಂಧಾನೂ.. ಗೋವಿಂದ, ಗೋ..... ವಿಂ.... ಧ!

– ರಾಜ ಚೆರಿಯಮನೆ, ಜೋಡುಪಾ...

ಹಳೆಕಾಲದ ಒಲೆಬುಡದ ಕತೆಗ :

ಅಪ್ಪ ಎಲ್ಲಿಗೆ ಹೋತ್? - ಸಂತೆಗೆ ಹೋತ್
ಸಂತೆಂದ ಎಂತದ್‌ತಾತ್? - ಕಳ್ಳ್ ತಾತ್
ಕಳ್ಳ್‌ನ ಏನ್ ಮಾಡ್ತ್? - ಬಾಗ್ಲ್ ಸೆರೇಲಿ ಮಡ್‌ಗಿತ್ತ್
ಬಾಗ್‌ಲ್ ಎಂತಾ ಕೊಡ್ತ್? - ಬಾಗ್‌ಲ್ ಚೀಂಕ್ ಕೊಡ್ತ್
ಒಲೆ ಎಂತ್ ಕೊಡ್ತ್? - ಬೂದಿನ ಕೊಡ್ತ್
ಬೂದಿನ ಏನ್ ಮಾಡ್ತ್? - ಗದ್ದೆಗೆ ಹಾಕ್ಕಿತ್
ಗದ್ದೆ ಎಂತ ಕೊಡ್ತ್? - ಗದ್ದೆ ಬೆಳೆ ಕೊಡ್ತ್
ಬೆಳೆನ ಏನ್ ಮಾಡ್ತ್? - ಕಣಕ್ಕೆ ಹಾಕಿತ್
ಕಣ ಎಂತ ಕೊಡ್ತ್? - ಕಣ ಭತ್ತ ಕೊಡ್ತ್
ಭತ್ತನ ಏನ್ ಮಾಡ್ತ್? - ಹೊಸಕ್ಕಿ ಪಾಯಸ ಕೊಡ್ತ್
ಪಾಯಸನ ಏನಂ ಮಾಡ್ತ್? - ಪಾಯಸನ ಲಾಯ್ಕಲಿ ತಿಂದ್‌ಬುಟ್ಟೊ.

ದೇವಜನ ನಿರೂಪರಾಜ, ಬೆಂಗಳೂ...

ಸರ್ಪ ಗಂಧ



✦ ಕೌಂಡಿನ್ಯ

ಧಾರವಾಹಿ -9

ಇಲ್ಲಿಯವರೆಗೆ.........

ಗೆಳತಿ ಮೀನ ನಿಗೂಢ ರೀತಿಯಲ್ಲಿ ಹುತ್ತದ ಹತ್ತಿರ ಸತ್ತು ಬಿದ್ದಿರುತ್ತಾಳೆ. ಆ ರಾತ್ರಿ ರೇವತಿ ಗೆಳತಿಯ ಮನೆಯಲ್ಲೇ ಮಲಗಿಕೊಂಡಿರುತ್ತಾಳೆ. ಮೀನಳ ಪುಸ್ತಕದಲ್ಲಿ ಶ್ರೀಮಂತ ಯುವಕ ಪ್ರಸನ್ನನ ಫೋಟೋ ಇರುತ್ತದೆ

ಮುಂದೆ ಓದಿ...............

ಕಣ್ಣರಳಿಸಿ ನೋಡಿದಳು.

ಅದು.... ಅದು ಪ್ರಸನ್ನನ ಫೋಟೋ.

ಮದುವೆಯ ವಯಸ್ಸಿಗೆ ಬಂದಿರುವ ತುಂಬು ಪ್ರಾಯದ ಯುವತಿ ಈ ರೀತಿ ಫೋಟೋ ಇರಿಸಿಕೊಳ್ಳಲು ಕಾರಣ ಏನು?

ಅದೇ..... ಅದೇ

ಪ್ರೀತಿಯ ಉನ್ಮಾದತೆ !

ಮೀನಳ ಕೊಠಡಿಯಲ್ಲಿ ಪುಸ್ತಕಗಳ ಎರಡು ರ್‍ಯಾಕ್ ಇತ್ತು. ಮಂಚ, ಟೇಬಲ್, ಲ್ಯಾಂಪ್, ಕನ್ನಡಿ ಮತ್ತು ಡ್ರೆಸ್ಸಿಂಗ್ ಬಾಕ್ಸ್ ಇತ್ತು!

ನಂಬಿಕೆಯೇ ಬರುತ್ತಿಲ್ಲ !

ಮೀನ ಎಡತೊರೆಯ ಮನೆಯ ಶ್ರೀಮಂತ ಯುವಕ ಪ್ರಸನ್ನನನ್ನು ಪ್ರೀತಿಸುತ್ತಿದ್ದಳೆ !

ಹಾಗಾದರೆ ಪ್ರಸನ್ನ !

ಅದಕ್ಕೆ ಉತ್ತರ ಇರಲಿಲ್ಲ !

ರೇವತಿ ಫೋಟೋ ತಿರುಗಿಸಿ ನೋಡಿದಳು. ಮೀನಳ ಮುದ್ದು ಕೈ ಬರಹ ! ಪ್ರೇಮದ ನುಡಿ ಮುತ್ತುಗಳು.

ಪ್ರಸನ್ನ......... ಐ ಲವ್ ಯೂ !

ಸುಸ್ತಾದಳು ರೇವತಿ !

ಅಂದುಕೊಂಡಂತೆ ಅಲ್ಲ ಜೀವನ. ಏನೋ..... ಏನೋ ಇದೆ ! ಮೇಲೆ ಸಾಗುತ್ತಿರುವುದೆಲ್ಲಾ ಸತ್ಯವಲ್ಲ !

ಪತ್ರ ಪದರಗಳ ಮುಂದೆ ಇದೆ.

ತಕ್ಷಣ ನೆನಪಾಯಿತು ರೇವತಿಗೆ !

ಹಿಂದೆ ಕಾಲೇಜಿನಲ್ಲಿ ಹಾಸ್ಟೆಲಿನಲ್ಲಿ ಇದ್ದಾಗ ಮೀನ ಡೈರಿ ಬರೆಯುತ್ತಿದ್ದ ಸಂಗತಿ ಅವಳಿಗೆ ಗೊತ್ತಿತ್ತು !

ಮೀನಳ ಡೈರಿ !

ಖಂಡಿತ ಏನಾದರೂ ಗೊತ್ತಾಗುತ್ತದೆ.

ರೇವತಿ ಎದ್ದು ಈಗ ಪುಸ್ತಕಗಳ ರ್‍ಯಾಕ್‌ನ ಹತ್ತಿರ ಬಂದು ನಿಧಾನವಾಗಿ ತಡಕಾಡಿ ನೋಡಿದಳು.

ಡೈರಿ....... ಡೈರಿ ಸಿಗಲಿಲ್ಲ !

ಮತ್ತೊಂದು ರ್‍ಯಾಕ್ ನೋಡಿದಳು.

ಯಾರಾದರೂ ಡೈರಿಯನ್ನು ಎಲ್ಲರಿಗೂ ಕಾಣುವಂತೆ ಪುಸ್ತಕಗಳ ರ್‍ಯಾಕ್‌ನಲ್ಲಿ ಇಡುತ್ತಾರೆಯೇ?

ಆ ರೂಮಿನಲ್ಲಿ ಬೀರು ಇರಲಿಲ್ಲ !

ರೇವತಿ ತುಂಬಾ ಎಚ್ಚರಿಕೆಯಿಂದ ಅಂಗುಲ, ಅಂಗುಲವನ್ನು ಸಹ ಪರಿಶೀಲಿಸಿ ನೋಡುತ್ತಿದ್ದಾಳೆ.

ಆಗ ಕಂಡಿತು ಮಂಚದ ಅಡಿ !

ಹಳೆಯ ಕಾಲದ ಅಜ್ಜಿ ಟ್ರಂಕ್ !

ರೇವತಿಯ ಮುಖ ಅರಳಿತು, ಮಂಡಿಯೂರಿ ಕುಳಿತುಕೊಂಡು ಟ್ರಂಕನ್ನು ಎಳೆದಳು. ಕರಕರ ಶಬ್ದ ಮಾಡಿತು.

ಹಾಲ್‌ನಲ್ಲಿ ಮಲಗಿದ್ದ ಅಜ್ಜಿ "ಏನಮ್ಮ ಅದು ಶಬ್ದ............"!

"ಏನೂ ಇಲ್ಲ ಅಜ್ಜಿ"

ಅಜ್ಜಿ "ನಿನಗೆ ಅಲ್ಲಿ ನಿದ್ದೆ ಬರದೆ ಇದ್ದರೆ ನಮ್ಮ ಜೊತೆಯೇ ಮಲಗಿಕೊಳ್ಳಮ್ಮ" ಎಂದು ಕೂಗಿ ಹೇಳಿದಳು.

"ಪರವಾಗಿಲ್ಲ ಅಜ್ಜಿ ಇಲ್ಲೇ ಮಲಗುತ್ತೇನೆ" ಎಂದು ಸದ್ದಾಗದಂತೆ ಟ್ರಂಕ್‌ನ್ನು ಎತ್ತಿ ಕೊಂಡಳು.

ಅದಕ್ಕೆ ಒತ್ತಾಳೆ ಬೀಗ ಹಾಕಲಾಗಿತ್ತು!

ರೇವತಿ ತಲೆಯ ಕೂದಲುಗಳ ನಡುವೆ ಕೈ ತೂರಿಸಿದಳು. ಅಲ್ಲಿ ಯಾವ ಪಿನ್ನು ಇರಲಿಲ್ಲ. ಮಲಗುವಾಗ ತಲೆಗೆ ಅದು ಚುಚ್ಚ ಬಹುದೆಂದು ಬಿಚ್ಚಿ ತೆಗೆದಿರಿಸಿದ್ದಳು.

ಹೆಲ್ಪ್ ಲೆಸ್ ರೇವತಿ !

ಬೀಗ ಓಪನ್ ಮಾಡಲು ಸಾಧ್ಯವೇ ಇಲ್ಲ. ನಾಳೆಯ ದಿನ ಇದನ್ನು ತೆಗೆದು ನೋಡಬೇಕು ಎಂದುಕೊಂಡಳು.

ನಿದ್ರೆ ಬರುತ್ತಿಲ್ಲ !

ಗೆಳತಿ ಮೀನಳ ಹೆಣ !

ದೇಹಕ್ಕೆ ಸುತ್ತಿಕೊಂಡಿರುವ ಹಾವುಗಳು !

ಇದರ ಹಿನ್ನೆಲೆ ಏನು !

ಒಂದು ಗಂಟೆಯ ಕಾಲ ಹತ್ತಾರು ಸರ್ಪಗಳು ಮೀನಳ ದೇಹಕ್ಕೆ ಸುತ್ತಿಕೊಂಡಿರಲು ಕಾರಣವೇನು?

ಪ್ರಸನ್ನ ನೆನಪಾದನು.

ನಗುಮುಖದ ಚೆಲುವ !

ಅವನನ್ನು ಮೀನ ಪ್ರೀತಿಸುತ್ತಿದ್ದಳು. ಮೀನ ನನಗಿಂತಲೂ ಚೆನ್ನಾಗಿದ್ದಳು ಎಂದೇ ಹೇಳಬೇಕು.

ಹಾಗಾದರೆ ಪ್ರಸನ್ನ ಪ್ರೀತಿಸುತ್ತಿದ್ದನೆ?

ಪ್ರಸನ್ನನ ಇಬ್ಬರು ಅರೆಹುಚ್ಚ ಅಣ್ಣಂದಿರು ಮತ್ತು ನಡುವೆ ದಢೂತಿ ದೇಹದ ಅಕ್ಕ ನೆನಪಾದಳು !

ಪ್ರಸನ್ನನ ಅಕ್ಕನ ಗಂಡ ಸಹ ಹುಚ್ಚ ! ಆ ಮನೆಯೇ ಒಂದು ಹುತ್ತ ! ರೇವತಿಗೆ ತುಂಬಾ ಹೊತ್ತಿನ ನಂತರ ನಿದ್ದೆ ಬಂದಿತು. ಬೆಳಿಗ್ಗೆ ಎಚ್ಚರವಾದಾಗ ಒಂಭತ್ತು ಗಂಟೆ ಆಗಿತ್ತು !

ಮುಖ ತೊಳೆದ ಕೂಡಲೇ ಅಜ್ಜಿ ಕಾಫಿ ಮಾಡಿ ತಂದುಕೊಟ್ಟಳು. ಬಿಸಿ ಬಿಸಿಯಾದ ಕಾಫಿ !

ರೇವತಿ ಸ್ನಾನ ಮುಗಿಸಿದಳು.

ಸ್ನಾನ ಮಾಡುತ್ತಿರುವಾಗ ಅವಳಿಗೆ ಪ್ರಸನ್ನನ ನೆನಪಾಯಿತು. ಅವನಿಗೆ ಮದುವೆಯ ಬಗ್ಗೆ ಈ ದಿನ ತನ್ನ ನಿರ್ಧಾರವನ್ನು ತಿಳಿಸುತ್ತೇನೆ ಎಂದು ಹೇಳಿದ್ದಳು !

ಅವಳಿನ್ನೂ ನಿರ್ಧಾರಕ್ಕೆ ಬಂದಿರಲಿಲ್ಲ !

ಗೊಂದಲ ಉಂಟಾಗಿತ್ತು ಅವಳಿಗೆ !

ಅದೇನೋ ಅನುಮಾನ ಕಾಡುತ್ತಿತ್ತು.

ರೇವತಿ ಶ್ರೀಕಂಠನನ್ನು ತನ್ನ ಜೊತೆ ಕರೆಯಲಿಲ್ಲ. ಯಾಕೆ ಅಂದರೆ ಹುತ್ತ ನೋಡಲು ಬಾ ಅಂತ ಕರೆದರೆ ಅವನು ಖಂಡಿತ ಬರಲಾರ ಎಂದು ಅವಳಿಗೆ ಗೊತ್ತಿತ್ತು.

ಭಯ..... ಭಯ...... ಭಯ

ರೇವತಿ ಅಜ್ಜಿಗೆ ಯಾರನ್ನೊ ನೋಡಿ ಕೊಂಡು ಬರುತ್ತೇನೆ ಎಂದು ಹೇಳಿ ಮನೆಯಿಂದ ಹೊರಬಂದಳು.

ಆಗ ಬೆಳಗಿನ ಹತ್ತುವರೆ.

ಆಗಲೇ ಬಿಸಿಲಿನ ಪ್ರಖರತೆ ಏರುತ್ತಿತ್ತು !

ರೇವತಿ ಈಗ ಸೀರೆ ಉಟ್ಟಿರಲಿಲ್ಲ. ಚೂಡಿದಾರ್ ಧರಿಸಿದ್ದಳು. ತಲೆಯ ಕೂದಲು ಬೆನ್ನಿನ ತುಂಬಾ ಹರಡುತ್ತಿತ್ತು.

ರೇವತಿ ಮುದ್ದು ಮುಖದ ಚೆಲುವೆ !

ರಸ್ತೆಯ ಜನಗಳು ಕಣ್ಣರಳಿಸಿ ನೋಡುತ್ತಿದ್ದಾರೆ. ರೇವತಿಗೆ ಹುತ್ತ ಎಲ್ಲಿದೆ ಅಂತ ಗೊತ್ತಿರಲಿಲ್ಲ.

ಅದರ ಬಗ್ಗೆ ಕೇಳಲು ಭಯ !

ಹಾಗಾಗಿ ಅವಳು ರಸ್ತೆಯಲ್ಲಿ ತಿರುಗುತ್ತಾ ದನ ಕಾಯುತ್ತಿದ್ದ ಹುಡುಗನನ್ನು ಕೇಳಿದಳು.

ಅವನು ಹೆದರುತ್ತಲೇ ಹುತ್ತ ಇರುವ ಜಾಗ ತೋರಿಸಿ ಅಲ್ಲಿಂದ ಓಡಿ ಹೋಗಿ ಬಿಟ್ಟನು.

ಹತ್ತು ನಿಮಿಷಗಳು ಕಳೆಯಿತು.

ದೂರದಿಂದಲೇ ಕಾಣುತ್ತಿತ್ತು ಹುತ್ತಗಳು !

ಹತ್ತು ಅಡಿಗಳಿಗಿಂತಲೂ ಎತ್ತರವಾಗಿರುವ ಮೂರು ಹುತ್ತಗಳು ವೃತ್ತಾಕಾರವಾಗಿ ಬೆಳೆದುಕೊಂಡಿವೆ !

ಅದನ್ನು ನೋಡುತ್ತಿದ್ದರೆ ಭಯ ಉಂಟಾಗುತ್ತದೆ. ಬೆನ್ನಿನ ಹುರಿಯಲ್ಲಿ ನಡುಕ ಉಂಟಾಗುತ್ತದೆ !

'ಭುಸ್' ಎಂಬ ಪೂತ್ಕಾರ !

ರೇವತಿ ಬೆಚ್ಚಿ ಬಿದ್ದು ಹಿಂತಿರುಗಿದಳು.

ಅಲ್ಲಿ.... ಅಲ್ಲಿ ಹೆಡೆಯಾಡಿಸುತ್ತಿರುವ ಹಾವು !

ಇವಳ ಕಾಲಿನ ಹತ್ತಿರ !

ರಪ್ಪನೆ ಹೆಡೆ ಅಪ್ಪಳಿಸಿತು !

(ಮುಂದುವರೆಯುತ್ತದೆ)

ಕೊಡಗು ಸಂಗಾತಿ ಗೌಡರ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಿದೆ ಎಂಬುದಾಗಿ ತಿಳಿದಿರುವ ಜನ ಬರೇ ಬೆರಳೆಣಿಕೆಯಷ್ಟು. ಸಂಘಸಂಸ್ಥೆಗಳು ಸೇರಿ ಸಂಗಾತಿಗೆ ಸಹಾಯ ಮಾಡಿದರೆ ಮಾತ್ರ ಸಾಧ್ಯವಾದೀತು. ಇಲ್ಲದಿದ್ದರೆ ತುಂಬಾ ಕಷ್ಟಕರವಾಗುತ್ತದೆ.

ಪ್ರೊ. ಪೂಜಾರಿ ಪೊಣ್ಣಪ್ಪ,
ಬೆಂಗಳೂರು.

ಬಯಕೆ ಮತ್ತು ಸಂದೇಹ

ಶ್ರೇಷ್ಠ ಜನ್ಮ ಮಾನವ ಜನ್ಮ. ಶ್ರೇಷ್ಠತೆಯಲ್ಲಿ ವಿಶಿಷ್ಟತೆ ಇದೆ. ಜೀವನದಲ್ಲಿ ಕಷ್ಟನಷ್ಟಗಳ ಬೇನೆ ಬೇಸರಗಳು ತಪ್ಪದೆ ಬರುತ್ತದೆ. ಮಾನವನ ಮನಸ್ಸಿನಲ್ಲಿ ಸ್ವಾಭಾವಿಕವಾ ಏರಿಳಿತಗಳಾಗುತ್ತವೆ. ದೇಹದ ಆರೋಗ್ಯದಲ್ಲಿಯೂ ಏರುಪೇರು ಇದ್ದದ್ದೇ. ಇದನ್ನು ನಾ ಪ್ರಕೃತಿಯೆಂದು ಭಾವಿಸಿಕೊಳ್ಳುತ್ತೇವೆ. ಏನೇ ಆದರೂ ಮಾನವ ಜೀವನ ಪರಿವರ್ತನೆಯಾಗುತ್ತಲ ಇರುತ್ತದೆ. ಜೀವನದಲ್ಲಿ ಬದಲಾವಣೆ ಅನಿವಾರ್ಯ. ಬದಲಾವಣೆ ಇಲ್ಲದಿದ್ದರೆ ಜೀವನ ಮಾನವತ್ವ ಎಂಬ ಕಳೆ ಬಾರದು. ಕಷ್ಟ ಸುಖಗಳ ದ್ವಂದ್ವವೇ ಜೀವನಕ್ಕೆ ಮೆರಗು. ಸುಖ ದುಃ ಎಂದರೆ ಜನನ ಮರಣಗಳಂತೆ. ಜನನ ಮರಣವಿಲ್ಲವಾದರೆ ಮಾನವನಿಗೆ ಬೆಲೆ ಏನು? ಜ್ಞಾನಿಗಳ ಹೇಳುತ್ತಾರೆ ಸುಖ ದುಃಖಗಳನ್ನು ಎದುರಿಸಿ, ಅವುಗಳಲ್ಲಿ ಹಿಗ್ಗದೆ ಕುಗ್ಗದೆ ಸ್ಥಿತ ಪ್ರಜ್ಞನಂ ಬಾಳಬೇಕು. ಹೌದು ಈ ಮಾತು ನಿಜ. ಕೃತಿಯಲ್ಲಿ ಅಷ್ಟು ಸುಲಭವಲ್ಲ ಏಕೆ?

ಮಾನವ ಎಂದರೆ ಅವನಿಗೊಂದು ಮನಸ್ಸು ಇರುತ್ತದೆ. ಮನಸ್ಸಿಲ್ಲದೆ ಮಾನವನಿಲ್ಲ ಮನಸ್ಸಿದ್ದ ಮೇಲೆ ಬಯಕೆಗಳು ಇರಲೇಬೇಕು. ಬಯಕೆಯೆಂಬುದು ಮನಸ್ಸಿಗೆ ಭಾರ. Less luggage more comfort. ಇದೊಂದು ರೈಲು ಡಬ್ಬಿಗಳಲ್ಲಿ ಬರೆದ ಫಲಕ. ಮಾನವ ಜೀವನ ಧೀರ್ಘಪಯಣ. ಪಯಣ ಹಗುರವಾಗಿರಬೇಕು. ಅದಕ್ಕೆ ಬಯಕೆಗಳಿರಬಾರದು. ಬಯಕೆ ಎಂದರೇನು? ಕಾಡಿನಲ್ಲಿದ್ದ ಸೀತೆಯನ್ನು ವಾಲ್ಮೀಕಿ ಋಷಿ ತನ್ನ ಆಶ್ರಮಕ್ಕೆ ಕರೆದೊಯ್ಯುವಾಗ ಆಕೆಗೆ "ಅವಾವ ಬಯಕೆಯುಂಟೆಲ್ಲವಂ ನೋವಿಕೊಂಡಿರ್ಪೆನು" ಎನ್ನುತ್ತಾನೆ. ಅದು ಗರ್ಭಿಣಿಯರ ಬಯಕೆ. ಅಂದರೆ ಬಯಕೆ ಯಾರ ವಯಸ್ಸನ್ನಾಗಲೀ, ಅಧಿಕಾರವನ್ನಾಗಲಿ, ಸಂದರ್ಭವನ್ನಾಗಲೀ ಬಿಟ್ಟಿಲ್ಲ. ಬಯಕೆ ಬೇಕು. ಬೆಪ್ಪರಾಗಬಾರದು. ಬಯಕೆಗಳು ಹೆಚ್ಚಾದಂತೆ ನಮ್ಮಲ್ಲಿ ಶಕ್ತಿ. ಆತ್ಮಶಕ್ತಿ ಕುಂದುತ್ತಾ ಬರುತ್ತದೆ. ಬಯಕೆ ಎಂದರೆ ಆಸೆ.

ಮಗುವಿಗೆ ತಾಯಿಯ ಬಯಕೆ. ಬೆಳೆಗೆ ನೀರಿನ ಬಯಕೆ. ತಲೆಗೆ ಎಣ್ಣೆಯ ಬಯಕೆ. ಯುವಕ ಯುವತಿಯರಿಗೆ ಕಾಫಿ, ಟೀ, ಬೀಡಿ, ಸಿಗರೇಟು, ಮದ್ಯಪಾನ, ಇಸ್ಪೀಟು, ಟೀವಿ ಬಯಕೆ. ಸಾಧುವಿಕೆ ಮುಕ್ತಿಯ ಬಯಕೆ. ನದಿಗೆ ಸಮುದ್ರದ ಬಯಕೆ ಇವೆಲ್ಲಾ ಸಹಜ. ಆದರೆ ಬಯಕೆಗಳಲ್ಲಿ ತಮ್ಮನ್ನು ತಾವೇ ಹಾಳು ಮಾಡಿಕೊಳ್ಳುವ ಬಯಕೆ ಭಯಂಕರವಾದದ್ದು. ಅಂತಾ ಬಯಕೆಗಳನ್ನು ತ್ಯಜಿಸಲೇ ಬೇಕು. ಅದಕ್ಕೆ ಬುದ್ಧಿಯ ಕುಶಲತೆ ಬೇಕು. ಮಿತ ಮೀರಿದ ಆಸೆಗಳಿಂದ ಮತಿ ಗೆಡುತ್ತದೆ. ಮತಿಗೆಟ್ಟರೆ ನಮ್ಮ ನೈಜಸ್ಥಿತಿ ಮರತೇ ಹೋಗುತ್ತದೆ.

ಅದಕ್ಕೆ ಪರಿಹಾರ ಭಕ್ತಿಮಾರ್ಗ. ಭಕ್ತಿಯಿಂದ ಮುಕ್ತಿ ಎನ್ನುತ್ತೇವೆ. ಮುಕ್ತಿ ಬೇಕಿದ್ದರೆ ಭಕ್ತಿ ಬೇಕು. ಭಕ್ತಿ ಇದ್ದರೆ ಜ್ಞಾನ; ಜ್ಞಾನ ವೈರಾಗ್ಯದಿಂದ ಶೋಭಿಸಬೇಕು. ವೈರಾಗ್ಯದಿಂದ ತತ್ವದ ನಿಲುಮೆ. ತತ್ವಜ್ಞಾನದ ನಂತರ ಮುಕ್ತಿ ಸಹಜವಾದದ್ದು.

ಭಕ್ತಿ ಮುಕ್ತಿಯನ್ನು ಕದಡುವುದು ಸಂದೇಹ. ಸಂದೇಹ ಪ್ರೇಮ ಪ್ರೀತಿಯ ಕಡುವೈರಿ. ಸಂದೇಹ ಪ್ರೀತಿಯನ್ನು ಕದಡಿಸುತ್ತದೆ. ಪ್ರೀತಿ ವಾತ್ಸಲ್ಯವಿಲ್ಲದ ಮೇಲೆ ಜೀವನ ಏಕೆ? ವಿಶ್ವಾಸ ಮೂಡಿದರೆ ಸಂದೇಹ ನಿವಾರಣೆ, ಸಂದೇಹ ಮೂಡಿದರೆ ವಿಶ್ವಾಸದ ಸರ್ವನಾಶ. ಸಂದೇಹಕ್ಕೆ ಕಾರಣ ಮನಸ್ಸಿನ ದೌರ್ಬಲ್ಯ. ಮನಸ್ಸಿನ ದೌರ್ಬಲ್ಯಕ್ಕೆ ಕಾರಣ ಮನಸ್ಸಿನ ಸ್ಥಿರತೆ. ಸ್ಥಿರತೆಗೆ ಬೇಕು ಸಂದೇಹ ನಿವಾರಣೆ. ಹಾಗೆಯೇ ಸಂದೇಹ ನಿವಾರಣೆಗೆ ಮನಸ್ಸಿನ ಸ್ಥಿರತೆ ಅತ್ಯಾವಶ್ಯಕ. ಸ್ಥಿರತೆ ಬರುವುದು ಅಷ್ಟು ಸುಲಭವಲ್ಲ. ಅದಕ್ಕೆ ಶ್ರಮಿಸಬೇಕು. ಅಶ್ರಮಿಸುವಿಕೆಯೇ ಆಡುವ ಮಾತಿಗೂ, ಮಾಡುವ ಕಾರ್ಯಕ್ಕೂ ಹೊಂದಾಣಿಕೆ. ಇದೇ ಏಕತ್ವ. ಇದೇ ನಿಜವಾದ ಮಾನವತ್ವ. ಮಾನವತ್ವಕ್ಕೆ ಹೃದಯದಲ್ಲಿ ಸದಾ ಹರಿಚಿಂತನೆ ಬೇಕು. ಹರಿಚಿಂತನೆಯೊಂದಿದ್ದರೆ ಬೇರೆ ಯಾವ ಚಿಂತೆಯೂ ನುಸುಳುವುದಿಲ್ಲ. ಮನಸ್ಸಿನಲ್ಲಿ ಚಿಂತೆ ನುಸುಳದಿದ್ದರೆ ಅದೇ ಸಂಪತ್ತು. ಆ ಸಂಪತ್ತನ್ನು ಕೊಡುವವನು ದೇವನೊಬ್ಬನೇ. ಭಗವದ್ವಿಶ್ವಾಸವೇ ನಮ್ಮ ಶ್ವಾಸವಾಗಬೇಕು. ಇದಕ್ಕೆ ಪ್ರಯತ್ನ ಮುಖ್ಯ. ಈ ಪ್ರಯತ್ನಕ್ಕೆ ಬಯಕೆ, ಸಂದೇಹಗಳಿರಬಾರದು.

ಚೇಂದ್ರಿಮಾಡ ಗ. ಮುತ್ತಪ್ಪ.
ಕುಶಾಲನಗರ

ಕೊಡಗಿನ ಗೌಡರು ವಲಸೆ ಬಂದವರಲ್ಲ.

ಲೇಖಕ : ಎಸ್. ಎಸ್. ದೇವಿಪ್ರಸಾದ್, ಸಂಪಾಜೆ

(ಹಿಂದಿನ ಸಂಚಿಕೆಯಿಂದ.........)

ಯಾವುದೇ ಒಂದು ಪ್ರದೇಶದ ಜನರೊಡನೆ ಮಾತಾಡುವಾಗ ಬೇಗ್ಬ್ಬಾಗಿ ಅದರ ಶೈಲಿ ಅನುಕರಣೆ ಮಾಡುವ ಪ್ರಯತ್ನ ನಡೆಯುತ್ತದೆ. ಗೌಡಜನಾಂಗವು ಬ್ರಿಟಿಷರ ವಿರುದ್ಧ ಬಂಡೆದ್ದ ಕಾರಣ ಈ ಪ್ರದೇಶದ ಜನರು ಹೊರಗಿನ ಸಂಪರ್ಕ ಕಡಿದುಕೊಂಡಂತೆ ತೋರುತ್ತದೆ. 113 ವರ್ಷಗಳ ಬ್ರಿಟಿಷ್ ಆಳ್ವಿಕೆಯಲ್ಲಿ ಹೊರಪ್ರದೇಶದಲ್ಲಿ ಕನ್ನಡ ಭಾಷೆಯು ಬೇರೆ ಬೇರೆ ರೂಪದಲ್ಲಿ ಬೆಳೆದುದನ್ನು ಕಾಣುತ್ತೇವೆ. ಉತ್ತರ ಕೊಡಗಿನ ಗೌಡರು ಮೈಸೂರು ರಾಜ್ಯಕ್ಕೆ ಸೇರಿದ ತಮ್ಮ ಬಲಬಾಂಧವರ ಜೊತೆಗೆ ಸಂಪರ್ಕ ಇಟ್ಟುಕೊಂಡದ್ದರ ಪರಿಣಾಮವಾಗಿ, ಅವರು ಮಾತಾಡುವ ಶೈಲಿಯೇ ಬದಲಾಗಿರುವುದನ್ನು ಕಾಣಬಹುದು. ಉತ್ತರ ಕೊಡಗಿನ ಗಡಿನಾಡು (ಸೂರ್ಲಭಿ, ಗರವಾಲೆ) ಪ್ರದೇಶದಲ್ಲಿ ಗೌಡರು ದೊಡ್ಡ ಸಂಖ್ಯೆಯಲ್ಲಿ ಕೊಡವ ಜನಾಂಗಕ್ಕೆ ಸೇರಿದ್ದಾರೆ. ಹೀಗೆ ಇವರ ನಡುವೆ ಕಂದಕ ಏರ್ಪಟ್ಟಿದೆ. ಇದರ ಬಗ್ಗೆ ಸಂಶೋಧನೆಯಾಗಬೇಕು. ಹಾಗಾದಲ್ಲಿ ಮಲೆನಾಡಿನ ಒಕ್ಕಲಿಗರಲ್ಲಿ ಮತ್ತು ನಮ್ಮವರಲ್ಲಿ ಯಾವುದೇ ಭೇದ ಇಲ್ಲ ಎನ್ನುವುದು ಸಾಬೀತಾಗಬಹುದು.

ಭೌಗೋಳಿಕ ಪುರಾವೆಗಳು : ಟಿಪ್ಪುಸುಲ್ತಾನನ ಇತಿಹಾಸಕಾರರ ಪ್ರಕಾರ ಕೊಡಗಿನ ವರ್ಣನೆ ಹೀಗಿದೆ: "ಈ ಆಶ್ಚರ್ಯಕರವಾದ ಕಾಡು ಸೀಮೆಯನ್ನು ಕುರಿತು ನಾನು ಏನು ಹೇಳಲಿ? ಅದರ ಹೆಸರು ಹೇಳುವಾಗಲೇ ಲೇಖನಿ ನಡುಗುತ್ತದೆ. ಸೂರ್ಯನು ಸ್ವತಃ ಶಾಖವುಳ್ಳವನಾದರೂ ಇಲ್ಲಿ ಚಳಿಗೆ ಹೆದರಿ ಮೋಡಗಳಿಂದ ತನ್ನನ್ನು ಮುಚ್ಚಿಕೊಂಡು ಇಲ್ಲಿಂದ ಅವಸರವಸರವಾಗಿ ಹೋಗಿಬಿಡುತ್ತಾನೆ. ಬೇಸಿಗೆಯಲ್ಲಿ ಹೀಗಾದರೆ, ಮಳೆಗಾಲದಲ್ಲಿ ದೇವರೇ ನಮ್ಮನ್ನು ಕಾಪಾಡಬೇಕು. ತರುಣರೂ ಕೂಡಾ ಚಳಿಯಲ್ಲಿ ತಮ್ಮ ಅಂಗಾಂಗಗಳ ಬಿಸಿಕಳೆದುಕೊಂಡು ರಾತ್ರಿ ಹೊತ್ತಿನಲ್ಲಿ ತಮ್ಮ ಸಣ್ಣ ಗುಡಿಸಲುಗಳಲ್ಲಿ ಕಾಲುಗಳು ಎದೆಗೆಮುಟ್ಟುವಂತೆ ಬಿಲ್ಲಿನ ಹಾಗೆ ಶರೀರವನ್ನು ಮುದುಡಿಕೊಂಡು ಮಲಗುತ್ತಿದ್ದರು." ಜಿಗಣೆಗಳು ಅವರನ್ನು ಅವರ ದನಕರುಗಳನ್ನು ಕಚ್ಚಿ ತಮಗೆ ಬೇಕಾದಷ್ಟು ರಕ್ತ ಹೀರಿದ ಮೇಲೆಯೇ ಅವರ ಮೈಯನ್ನು ಬಿಡುತ್ತವೆ. ಇಲ್ಲಿನ ಚಳಿಯನ್ನು ವಿವರಿಸುವಾಗ ಬರೆಯುವುದಕ್ಕೆ ಮೊದಲೇ ಲೇಖನಿ ಹಿಡಿದ ಕೈ ಗಡ್ಡೆಕಟ್ಟಿದ ಸಮುದ್ರದೊಳಕ್ಕೆ ಮುಳುಗಿಸಿದ ಹಾಗೆ ಮರಗಟ್ಟುತ್ತದೆ.

ಈ ಮೇಲಿನ ವಾಕ್ಯಗಳಲ್ಲಿರುವ ಸತ್ಯಾಂಶ ಈಗಿನವರಿಗೆ ಗೊತ್ತಾಗದು. ಆದರೆ ವಯೋವೃದ್ಧರು ಇದರಲ್ಲಿ ಅತಿಶಯೋಕ್ತಿಯನ್ನು ಕಾಣುವುದಿಲ್ಲ. ಇಂತಹ ಪ್ರದೇಶ ಜನರನ್ನು ಯಾಕಾಗಿ ಆಕರ್ಷಿಸೀತು? ಎನ್ನುವುದನ್ನು ಯಾರೂ ವಿಮರ್ಶಿಸಿಲ್ಲ.

ನಡಿಕೇರಿಯಂಡ ಚಿಣ್ಣಪ್ಪನವರ ಪಟ್ಟೋಲೆ ಪಳಮೆಯಲ್ಲಿ ಬರೆದಿರುವ ಪ್ರಕಾರ ಪೂರ್ವ ಕಾಲದಲ್ಲಿ ಕೊಡಗು ಎಂಟು ನಾಡುಗಳಾಗಿದ್ದವು. ಅವುಗಳನ್ನು ಎಂಟು ಮಂದಿ ನಾಯಕರು ಆಳುತ್ತಿದ್ದರು. ಅವರನ್ನು 'ಅರೆಬಾಸೆಕಾರರು" ಎಂದು ಕರೆಯುತ್ತಿದ್ದರು. ಆಗ ಇದ್ದ ಎಂಟು ನಾಡುಗಳು ಯಾವುವೆಂದು ವಿಮರ್ಶಿಸಬೇಕು [ನಕ್ಷೆ]

ಈಗಲೂ ಕೊಡಗಿನಲ್ಲಿ ನಾಗರಿಕ ಸೌಲಭ್ಯಗಳ ಕೊರತೆಯಿರುವ ಸೂರ್ಲಬಿ, ಗರವಾಲೆ ಗಡಿನಾಡು ಎಂದು ಕರೆಯಲ್ಪಡುತ್ತದೆ. ಐಗೂರು ಸೀಮೆಯ ಗಡಿಯಲ್ಲಿದ್ದುದೇ ಈ ಹೆಸರಿಗೆ ಕಾರಣವಾಗಿರಬೇಕು. ಗಡಿಯು ಹೊರಗೆ ವಿಸ್ತರಿಸಿಕೊಂಡು ಹೋಗಿ ಅಲ್ಲಿ ನೆಲೆಸಿದವರನ್ನು ಹೊರಮಲೆನಾಡಿನವರೆಂದು ಗುರುತಿಸತೊಡಗಿರಬೇಕು. ಅಲ್ಲಿ ನೆಲೆಸಿದವರು ನೈಸರ್ಗಿಕ ಶ್ರೀಮಂತಿಕೆಯನ್ನು ಹಾಡಿ ಹೊಗಳಿ ತಮ್ಮ ನೆಂಟರಿಷ್ಟರನ್ನು ಬರಮಾಡಿ ತಮ್ಮ ಪಕ್ಕದಲ್ಲಿ ನೆಲೆಸುವಂತೆ ಮಾಡಿದಾಗ, ಜನಸಂಖ್ಯೆ ಹಾಲೇರಿದಂತೆ ಉಕ್ಕಿಬಂದು 'ಹಾಲೇರಿ ನಾಡು' ಎಂಬುದಾಗಿ ಗುರತಿಸಲ್ಪಟ್ಟಿರಬೇಕು. ಮುಂದಿನ ದಿನಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕುಟುಂಬಗಳು ಕೊಡಗಿನಲ್ಲಿ ಬಂದು ನೆಲೆಸಿದಾಗ 'ಮೂರು ನಾಡು' 'ನಾಲ್ಕು ನಾಡು'ಗಳಾಗಿ ಬೆಳೆಯುತ್ತಾ ವಿಸ್ತರಿಸಿರಬೇಕು. ದಟ್ಟಅರಣ್ಯದ ಅಂಚಿನತನಕ ಹೀಗೆ ವಿಸ್ತರಿಸಿದ್ದು, ಕೊನೆಯ ಆ ಭಾಗಕ್ಕೆ 'ಕಡೆಯತ್ತ ನಾಡು' ಎಂದು ಹೆಸರಾಗಿರಬೇಕು. ತಮ್ಮ ಪಕ್ಕದಲ್ಲಿ ಅಮರ ಸುಳ್ಯದ ಕಡೆಯಿಂದ ಬಂದು ನೆಲೆಸಿದವರನ್ನು 'ತಾವು' ನಾಡಿನವರೆಂದು ಗುರುತಿಸಿರಬೇಕು. ತಾವು ನಾಡಿನ ಪಕ್ಕದಲ್ಲಿರುವುದೇ 'ಬೇಂಗು' ನಾಡು. ಈ ಏಳು ನಾಡುಗಳ ಮಧ್ಯೆ ಇರುವುದೇ ಮದೆ ನಾಡು. ಅಲ್ಲಿ ವ್ಯಾಪಾರಿಗಳು ಬಂದು ನೆಲೆಸಿದ ಕೇರಿಯನ್ನು 'ಮದೆ ಕೇರಿ' ಎಂಬುದಾಗಿ ಕರೆಯುತ್ತಾ, ಅದೇ ಮುಂದೆ ಮಡಿಕೇರಿಯಾಗಿರಬೇಕು.

1681ರಲ್ಲಿ ಮುದ್ದುರಾಜ ಕೇರಿಯಾಗಿ ಸ್ಥಾಪನೆಗೊಂಡ ಪ್ರದೇಶವೆ ಮುಂದೆ ಮಡಿಕೇರಿಯಾಯಿತೆಂದು ಇತಿಹಾಸಕಾರರು ಬರೆದಿದ್ದಾರೆ. ಮುದ್ದು ರಾಜಕೇರಿಯೇ ಜನರ ಬಾಯಲ್ಲಿ ಮುದ್ದು ಕೇರಿಯಾಗಿ, ಕೊನೆಗೆ ಮಡಿಕೇರಿಯಾಯಿತೆಂದೂ ಚಿಂತಿಸುವುದಕ್ಕೆ ಅವಕಾಶವಿದೆ. ಮುಂದೆ 126 ವರ್ಷಗಳ ಅನಂತರ ದೊಡ್ಡ ವೀರರಾಜ ಬರೆಸಿದ 'ರಾಜೇಂದ್ರ ನಾಮೆ'ಯಲ್ಲಿ ಮುದ್ದು ರಾಜ ಕೇರಿಯ 'ರಾಜ' ಬಿಟ್ಟುಹೋಗಿ ಮುದ್ದುಕೇರಿಯಾಗಿ ಉಲ್ಲೇಖಿತಗೊಂಡಿದ್ದು ಕಂಡುಬರುತ್ತದೆ. ಆದರೆ ಆತ ತನ್ನ ವಂಶದ ಹಿರಿಯನ ಹೆಸರನ್ನು ವಿಕೃತಗೊಳಿಸುವುದು ಸಾಧ್ಯವೇ ಎಂದೂ ಇಲ್ಲಿ ಯೋಚಿಸಬೇಕಾಗುತ್ತದೆ. 1792ರಲ್ಲಿ ವೀರರಾಜೇಂದ್ರ ಪೇಟೆಯನ್ನು ಕಟ್ಟಿಸಿ ಇಂದಿಗೆ ಎರಡು ಶತಮಾನಗಳೇ ಕಳೆದರೂ, ಅವನ ವಂಶಸ್ಥರಾರೂ ಇಲ್ಲದಿದ್ದರೂ, ಮೂಲ ಹೆಸರಿನ ರೂಪ ಬದಲಾಗದಿರುವುದನ್ನೂ ಇಲ್ಲಿ ಗಮನಿಸಬೇಕು. ವೀರರಾಜ ಪೇಟೆ ಹೆಚ್ಚೆಂದರೆ ವಿರಾಜಪೇಟೆಯಾಗಿದೆಯೇ ಹೊರತು ಇಲ್ಲಿ ನಡುವೆ ಬರುವ ರಾಜ ಪದವು ಲೋಪಗೊಂಡಿಲ್ಲ. ಆದುದರಿಂದ ಮುದ್ದುರಾಜಕೇರಿಯನ್ನು ಮುದ್ದುಕೇರಿಯಾಗಿ ಬರೆಸಿದವನು ದೊಡ್ಡ ವೀರರಾಜನಲ್ಲ. ಹಾಗಾದರೆ ರಾಜೇಂದ್ರನಾಮೆಯ ಕರ್ತೃ ಯಾರು?

ವಿರಾಜಪೇಟೆಯು ಬ್ರಿಟಿಷರ ಅನುಕೂಲಕ್ಕಾಗಿ ನಿರ್ಮಾಣವಾದದ್ದು. 1792ರಲ್ಲಿ ಟಿಪ್ಪು ತನ್ನ ಮಕ್ಕಳನನು ಒತ್ತೆಯಾಳುಗಳಾಗಿ ಕಳುಹಿಸಿ ಮಾಡಿಕೊಂಡ ಒಪ್ಪಂದದಲ್ಲಿ ಸಿಕ್ಕಿದ ಕೊಡಗಿನಲ್ಲಿ ಮೊದಲು ಚರ್ಚ್ ಹಾಗೂ ಪೇಟೆಗಳನ್ನು ನಿರ್ಮಿಸಲಾಯ್ತು. ಅದರ ಸುತ್ತಲೂ

ಎಡೆನಾಲ್ಕು ನಾಡು, ಅಮತ್ತಿ ನಾಡು, ಬೆಪ್ಪು ನಾಡು, ಕಿಗ್ಗಟ್ಟು ನಾಡುಗಳು ಬೆಳೆದವು. ಕಿಗ್ಗಟ್ ನಾಡು ತಾಲೂಕಿನಲ್ಲಿ ಅಂಜಿಕೇರಿ ನಾಡು, ತಾವಳಕೇರಿ ನಾಡು, ಹತ್‌ಗಟ್ಟ್ ನಾಡು ಬೆಟ್ಟದ ನಾಡುಗಳಲ್ಲಿ ನಾಗರಿಕತೆ ಕಾಣಿಸಿಕೊಂಡಿತು. 1835ರಲ್ಲಿ ಪೊನ್ನಂಪೇಟೆ ರಚಿತವಾಯಿತು.

ಆದುದರಿಂದ ಚರಿತ್ರೆಯನ್ನು ಈ ಕೆಳಗಿನಂತೆ ಎರಡು ಭಾಗಗಳಾಗಿ ಮಾಡಬೇಕಾಗಿದೆ.

1. ರಾಜೇಂದ್ರ ನಾಮೆಯಲ್ಲಿ ಸಿಗುವ ಕಪೋಲ ಕಲ್ಪಿತ ಕತೆ;
2. 1792ರಲ್ಲಿ ಬ್ರಿಟಿಷರು ಕೊಡಗನ್ನು ಪಡೆದುಕೊಂಡ ಅನಂತರ ಚರಿತ್ರೆ. ಅದೇ ವರ್ಷ ವೀರರಾಜ ಪೇಟೆಯನ್ನು ನಿರ್ಮಿಸಿ ಕೊಡಗು ರಾಜವಂಶದವನೆಂದು ದೊಡ್ಡ ವೀರರಾಜನನ್ನು ಪರಿಚಯಿಸುವರು. ಬ್ರಿಟಿಷರು, ಬ್ರಿಟಿಷರೇ ದಾಖಲಿಸಿದಂತೆ ಕೊಡಗಿನ ಪ್ರಮುಖ ಘಟನೆಗಳು ಇಂತಿವೆ :
   1. ದೊಡ್ಡ ವೀರರಾಜ, ಆತನ ಪತ್ನಿ, ಪುತ್ರಿ ಮತ್ತು ತಮ್ಮಂದಿರಾದ ಅಪ್ಪಾಜಿ, ಲಿಂಗರಾಜ ಪಿರಿಯಾಪಟ್ಟಣ ಕೋಟೆ(ಹೈದರಾಲಿಯ ಸೆರೆಮನೆ)ಯಿಂದ ತಪ್ಪಿಸಿ ಕೊಳ್ಳುವುದು. (14-12-1788)
   2. ತಲಚೇರಿಯ ಬ್ರಿಟಿಷ್ ಅಧಿಕಾರಿ ಕ್ಯಾ. ರಾಬರ್ಟ್ ಟೈಲರ್ ಜತೆ ವೀರರಾಜ ಟಿಪ್ಪುವನ್ನು ವಿರೋಧಿಸುವ ಒಪ್ಪಂದ ಮಾಡಿಕೊಳ್ಳುವುದು. (15-10-1789)
   ಮೇಲಿನ ಎರಡು ಘಟನೆಗಳನ್ನು ನಂತರದ ಚರಿತ್ರೆಗೆ ಪೂರ್ವಭಾವಿಯಾಗಿ ಸೃಷ್ಟಿಸಿರಬಹುದು.
   3. ಹೆಗ್ಗಳದ ಹತ್ತಿರದ ಬೆಟುವಳಿ, ಮುಗ್ಗುಲ ಗ್ರಾಮಗಳಲ್ಲಿ ವೀರರಾಜೇಂದ್ರ ಪೇಟೆ ಮತ್ತು ಚರ್ಚ್ ಕಟ್ಟಿಸಿದ್ದು (ಮೇ 1792)
   4. ವಾರ್ಷಿಕ 8,000 ಕಂಠಿರಾಯ ಪಗೋಡ (ರೂ. 24,000) ಕೊಡುವ ಒಪ್ಪಂದದಲ್ಲಿ ಕೊಡಗನ್ನು ರಾಬರ್ಟ್ ಅಬರ್ ಕ್ರಾಂಬಿಯು ವೀರರಾಜನಿಗೆ ಬಿಟ್ಟುಕೊಡುವುದು. (31-3-1793)
   5. ನಾಲ್ಕು ನಾಡು ಅರಮನೆ ಗೃಹಪ್ರವೇಶ (ಏಪ್ರಿಲ್ 1795)
   6. ವೀರರಾಜೇಂದ್ರನ ಮದುವೆ ಮತ್ತು ಪಟ್ಟಾಭಿಷೇಕ (ಫೆಬ್ರವರಿ 1796) ಪಟ್ಟಾಭಿಷೇಕಕ್ಕೆ ಮೊದಲ ನಾಲ್ಕು ವರ್ಷ ಆತ ಬ್ರಿಟಿಷರಿಂದ ಪರಿಶೀಲನೆಗೆ ಒಳಪಟ್ಟಿರ ಬಹುದು.
   7. ಟಿಪ್ಪುಸುಲ್ತಾನನ ಮರಣ (14-5-1799)
   8. ಅಮರಸುಳ್ಯ ಮತ್ತು ಏಳುಸಾವಿರ ಸೀಮೆ ಕೊಡಗಿಗೆ ಸೇರಬೇಕೆಂದು ಕ್ಯಾಪ್ಟನ್ ಮೆಹೊನಿಯ ವಕಾಲತ್ತು (12-10-1799)
   9. ಕ. ವಾರನ್ ಕ್ಲೋಸ್‌ನಿಂದ ಕೊಡಗಿನ ರಾಜನಿಗೆ ಅವಮಾನಕರ ಪತ್ರ (16-11-1799)
   10. ವೀರರಾಜನ ಉತ್ತರ (16-12-1799)
   11. ವೀರರಾಜನ ಮಗಳು ರಾಜಮ್ಮಾಜಿಯನ್ನು ಸೋದರ ಬಸವಲಿಂಗರಾಜನಿಗೆ ವಿವಾಹ ಮಾಡಿಕೊಟ್ಟದ್ದು (ಡಿಸೆಂಬರ್ 1801)
   12. ಅಮರ ಸುಳ್ಯ ಜೋಡಣೆಯೊಂದಿಗೆ ಕೊಡಗನ್ನು ವಿಸ್ತಾರಗೊಳಿಸಿದ್ದು (1804)
   13. ರಾಣಿ ದೇವಮ್ಮಾಜಿ ಮರಣ ಮತ್ತು ರಾಜನಿಗೆ ಮತಿಭ್ರಮಣೆ (7-5-1807)
   14. 'ರಾಜೇಂದ್ರ ನಾಮೆ' ಎಂಬ 1633 ರಿಂದ 1807ರವರೆಗಿನ 175 ವರ್ಷ, 2 ತಿಂಗಳು 7 ದಿನಗಳ ಚರಿತ್ರೆಯನ್ನು ಬರೆಸಿದ್ದು (1807)
   15. ದೊಡ್ಡ ವೀರರಾಜನ ಮರಣ (9-6-1809)
   16. ದೇವಮ್ಮಾಜಿ ಚಿಕ್ಕಪ್ಪ ಲಿಂಗರಾಜನಿಗೆ ರಾಜ್ಯಭಾರವನ್ನು ಬಿಟ್ಟುಕೊಟ್ಟದ್ದು (9-9-1810)
   17. ಲಿಂಗರಾಜ ಹುಕುಂನಾಮೆ ಬರೆಸಿದ್ದು (1811)
   18. ಮಡಿಕೇರಿ ಕೋಟೆಯೊಳಗಿನ ಅರಮನೆ ನಿರ್ಮಾಣ (1812)
   19. ಓಂಕಾರೇಶ್ವರ ದೇವಸ್ಥಾನ ನಿರ್ಮಾಣ (26-3-1820)
   20. ಲಿಂಗರಾಜನ ಮರಣ ಮತ್ತು ಚಿಕ್ಕವೀರರಾಜನ ಆಳ್ವಿಕೆಯ ಆರಂಭ (1820)
   21. ಕಾಜಿ ಮೇಜರ್ ಕೊಡಗಿಗೆ ಪ್ರವೇಶಿಸಿದ್ದು. (ನವೆಂಬರ್ 1826)
   22. ದೇವಮ್ಮಾಜಿ, ಚೆನ್ನಬಸವ ಕಾಜಿ ಮೇಜರ್‌ನ ಆಶ್ರಯ ಪಡೆದದ್ದು (17-9-1832)
   23. ಆಶ್ರಿತರನ್ನು ವೀರರಾಜನಿಗೆ ಬಿಟ್ಟುಕೊಡುವುದಿಲ್ಲ ಎಂಬ ತೀರ್ಮಾನ ತೆಗೆದುಕೊಂಡದ್ದು. (18-1-1833)
   24. ಬ್ರಿಟಿಷರ ಸೈನ್ಯ ಕೊಡಗಿಗೆ ಪ್ರವೇಶಿಸಿದ್ದು (2-4-1834)
   25. ಬೋಪು ದಿವಾನ 400 ಸೈನಿಕರೊಂದಿಗೆ ಕುಶಾಲನಗರದಲ್ಲಿ ಶರಣಾಗತನಾದದ್ದು. (5-4-1834).
   26. ಮಡಿಕೇರಿ ಕೋಟೆಯೊಳಗೆ ರಾಜನ ಧ್ವಜ ಇಳಿಸಿ ಬ್ರಿಟಿಷ್ ಧ್ವಜ ಏರಿಸಿದ್ದು (6-4-1834 - 4 ಗಂಟೆಗೆ)
   27. ಮಡಿಕೇರಿಯಲ್ಲಿ ಬ್ರಿಟಿಷರ ಆಳ್ವಿಕೆ ಘೋಷಿಸಿದ್ದು. (11-4-1834)
   28. ಚಿಕ್ಕವೀರರಾಜನ ಪರಿವಾರ ಮಡಿಕೇರಿಯಿಂದ ವಾರಣಾಸಿಗೆ ಹೋದದ್ದು (24-4-1834)

ಮೇಲಿನ ಘಟನೆಗಳಿಂದ ಒಂದು ಕಾಲದಲ್ಲಿ ಬ್ರಿಟಿಷರು ಟಿಪ್ಪುಸುಲ್ತಾನನ್ನು ಸೋಲಿಸುವುದಕ್ಕಾಗಿ ಕೊಡಗಿನ ರಾಜ್ಯವನ್ನು ಮತ್ತು ಕೊಡಗಿನ ಚರಿತ್ರೆಯನ್ನು ತಯಾರಿಸಿದರು ಎಂಬ ಅನುಮಾನ ಹುಟ್ಟುತ್ತದೆ. ಟಿಪ್ಪುಸುಲ್ತಾನನ ಮರಣದ ಅನಂತರ ಹತ್ತು ಹದಿನೈದು ವರ್ಷಗಳ ಕಾಲಮಾತ್ರ ಕೊಡಗಿನ ಬಗ್ಗೆ ಅವರು ಗಮನ ಇರಿಸಿದ್ದರು. ಅನಂತರ ಹತ್ತು ವರ್ಷ ಕೊಡಗು ಅವರ ಕೈತಪ್ಪಿ ಹೋಗಿತ್ತೆಂಬುದನ್ನು ಗಮನಿಸಬಹುದು. ಲಿಂಗರಾಜನ ಮರಣದ ದಿನಾಂಕ ಕೂಡಾ ಅವರು ಬರೆದ ಚರಿತ್ರೆಯಲ್ಲಿ ದಾಖಲಿಸಲ್ಪಟ್ಟಿಲ್ಲ. ಒಡೆದು ಆಳುವ

ಯಂತೆ ಕಾಜಿ ಮೇಜರ್ ಮತ್ತು ಚೆನ್ನಬಸವರು 1826ರಿಂದ ಕಗಿನಲ್ಲಿ ರಾಜಕೀಯ ಅಲೆಗಳನ್ನೆಬ್ಬಿಸತೊಡಗುತ್ತಾರೆ. ಹಾಗಾಗಿ ಲ ಎಂಟುವರ್ಷಗಳಲ್ಲಿ ಕೊಡಗು ಬ್ರಿಟಿಷರ ಸಂಪೂರ್ಣ ಹಿಡಿತಕ್ಕೆ ತ್ತದೆ.

1837ರ ದಂಗೆ ಯಾರು ಬ್ರಿಟಿಷರ ಪರ ಇದ್ದಾರೆ, ಯಾರು ರ ವಿರೋಧಿಗಳಾಗಿದ್ದಾರೆ ಎಂಬುದನ್ನು ಕಂಡುಹಿಡಿಯಲು ರಿಗೆ ಉಪಯುಕ್ತವಾಗುತ್ತದೆ. **ಗೌಡಜನಾಂಗ ಒಟ್ಟು ರಾಗಿನಿಂತು ಬ್ರಿಟಿಷರ ವಿರುದ್ಧ ದಂಗೆ ಏಳುತ್ತದೆ.** 1837 ಏಪ್ರಿಲ್ ಡು ಬ್ರಿಟಿಷರನ್ನು ಮಂಗಳೂರಿನಿಂದ ಓಡಿಸಿ ಬಾವುಟ ಗುಡ್ಡದಲ್ಲಿ ಸ ಏರಿಸುತ್ತಾರೆ. ಈ ಅರ್ಥದಲ್ಲಿ 1857ರಲ್ಲಿ ನಡೆದ ಯಿದಂಗೆಗೆ 20 ವರ್ಷಗಳ ಹಿಂದೆಯೇ ಕ್ರಾಂತಿಗೆ ನೆಲ ನುಗೊಂಡಿತ್ತು. ಎನ್ನಬಹುದು. ಕೊಡಗಿನ ಹುಲಿ ಕೊಂದ ಜಯ್ಯನು, ಹೈದರಾಬಾದ್, ದೆಹಲಿ, ಲಾಹೋರ್‌ಗಳನ್ನು ರ್ಕಿಸಿ, ಸಂಚರಿಸಿಬಂದು ಮೈಸೂರು, ತಿರುಚಿನಾಪಳ್ಳಿಗಳೊಂದಿಗೆ ಪರ್ಕ ಇಟ್ಟುಕೊಂಡಿದ್ದನ್ನು. ಆದರೆ ಮೈಸೂರು ಅರಸರು ಪಾಯದ ಗುಟ್ಟನ್ನು ಬಯಲುಮಾಡಿ ಬ್ರಿಟಿಷರಿಗೆ ಆಪ್ತರಾಗಿರಂದು ನ್ ಹೇಳುತ್ತಾನೆ.

ಈಗ ಒಂದೂವರೆ ಶತಮಾನಗಳಿಂದ ಕೊಡಗು ಎಂಬುದಾಗಿ ರುತಿಸುವ ಪ್ರದೇಶವು 1834ರಲ್ಲಿ ಬ್ರಿಟಿಷರ ಆಡಳಿತ ಲಭ್ಯಕ್ಕಾಗಿ ರಚಿತವಾದದ್ದು ಎಂಬುದನ್ನು ಒಪ್ಪಿಕೊಳ್ಳಲೇ ಕಾಗುತ್ತದೆ. ಕೊಡಗಿನ ಮೂರನೇ ಒಂದು ಭಾಗವನ್ನು ಮದ್ರಾಸ್ ಸ್ಯಕ್ಕೆ ಸೇರಿಸಲಾಗಿತ್ತು. ಬ್ರಿಟಿಷರಿಗೆ ವೈರಿಗಳಾಗಿದ್ದವರನ್ನು ಕಷ್ಟಕ್ಕೆ ುಕಿಸುವುದು ಇದರ ಉದ್ದೇಶವೆಂಬುದು ಸ್ಪಷ್ಟವಾಗುತ್ತದೆ. ಲ್ಲಿಯ ಜನ ಮುಂದೆ ಮೂರೇ ವರ್ಷಗಳಲ್ಲಿ ದಂಗೆ ಎದ್ದುದು ಇದಕ್ಕೆ ಣರ.

ಈಗಿನ ಕೊಡಗು ಯಾವತ್ತಾದರೂ ಒಂದು ನಿರ್ದಿಷ್ಟವಾದ ುಾನ ವೈಶಿಷ್ಟ್ಯ ಅಂಶಗಳನ್ನು ಹೊಂದಿತ್ತೆ ಎಂದರೆ, ಖಂಡಿತ ಇಲ್ಲ ನ್ನಬೇಕಾಗುತ್ತದೆ. ಇಲ್ಲಿಯ **ಶೇಕಡಾ ಎಂಬತ್ತರಷ್ಟು ಜನ ಕೊಡವ ಷೆ ಅಥವಾ ಕೊಡವ ಸಂಸ್ಕೃತಿಯನ್ನು ಅನುಸರಿಸುತ್ತಿಲ್ಲ.** ೋಮವಾರ ಪೇಟೆ ತಾಲ್ಲೂಕು ಎರಡು ಶತಮಾನಗಳಿಂದ ಕೊಡಗು ಜ್ಯದೊಳಗಿದ್ದು ನಂತರ ಜಿಲ್ಲೆಯೊಳಗೆ ಇದ್ದರೂ ಇನ್ನೂ ಂಸ್ಕೃತಿಕವಾಗಿ ಕೊಡಗಿಗಿಂತ ಭಿನ್ನವಾಗಿಯೇ ಉಳಿದಿದೆ. 1870ರಲ್ಲಿ ನೇಕ ಮನೆತನದವರು ದಕ್ಷಿಣ ಕೊಡಗಿನಲ್ಲಿ ಹಾಗೂ ಉತ್ತರ ಡಗಿನಲ್ಲಿ ಕೊಡವ ಜನಾಂಗಕ್ಕೆ ಸೇರಿದರು ಎನ್ನುವುದು ರಿಕ್ತರನ ್ಯಸೆಟಿಯರ್ ಆಫ್ ಕೂರ್ಗ್‌ನ ಪುಟ 231-232ಗಳಲ್ಲಿ ಲ್ಲೇಖಗೊಂಡಿದೆ.

ಒಂದು ನಿರ್ದಿಷ್ಟ ಕಾರಣದಿಂದ ಒಂದು ಊರು ಗೋಳಿಕವಾಗಿ ಒಂದು ಪ್ರದೇಶದ ಕೇಂದ್ರವಾಗುವುದಾದರೆ, ಮೊತ್ತ ಮದಲು ಕೊಡಗಿನ ಕೇಂದ್ರವಾಗಿದ್ದ ವಿರಾಜಪೇಟೆ ಹಾಗೂ ದೊಡ್ಡ ೀರರಾಜನು ಅರಮನೆ ಕಟ್ಟಿಸಿದ ನಾಲ್ಕುನಾಡು ಬಹಳಕಾಲ ಕೊಡಗಿನ ೇಂದ್ರವಾಗಿ ಮುಂದುವರಿಯಲಿಲ್ಲ. ಟಿಪ್ಪುವಿನ ಮರಣದ ಅನಂತರ ೊಡಗಿನ ವಿಸ್ತಾರವನ್ನು ಹೆಚ್ಚಿಸಿದ್ದು ಮತ್ತು ಮಡಿಕೇರಿಯನ್ನು ಕೇಂದ್ರವಾಗಿ ಬದಲಾಯಿಸಿದ್ದು ಇದಕ್ಕೆ ಕಾರಣವಾಗಿರಬಹುದು. ಕೊಡಗಿನ ಹುಟ್ಟು, ಬೆಳವಣಿಗೆಯಲ್ಲಿ ಸಹಜವಾದ ಮಾನವ ಪ್ರಕ್ರಿಯೆಗಿಂತ ಹೆಚ್ಚಾಗಿ ಬ್ರಿಟಿಷರ ಬಲಪ್ರದರ್ಶನದಿಂದ ಪ್ರಯತ್ನಪೂರ್ವಕವಾಗಿ ಸಾಧಿಸಿದ ಅಂಶವೇ ಎದ್ದು ಕಾಣುತ್ತದೆ.

ಕಾಡು ಪ್ರದೇಶವಾದ ಕೊಡಗಿನಲ್ಲಿ ವಾಸದ ನೆಲೆಗಳು ಮುಂದೆ ಗ್ರಾಮಗಳಾಗಿ ಬೆಳೆದು ಬಂದು, ಅವುಗಳನ್ನು ಕೊಂಬುಗಳೆಂದು ಗುರುತಿಸಿದ್ದು, ಮುಂದೆ ನಾಯಕರೆಂಬ ಪಾಳೆಯಗಾರರು ಅವನ್ನು ಆಳಿದ್ದಾಗಿ ಇತಿಹಾಸಕಾರರು ಗುರುತಿಸಿದ್ದಾರೆ. ಅಂದಿನ ಅರಣ್ಯಪ್ರದೇಶದಲ್ಲಿ 50 ರಿಂದ 150 ಜನ ಒಂದು ಮನೆಯಲ್ಲಿ ವಾಸಿಸುತ್ತಿದ್ದು, ಅಂತಹ ಮನೆಗಳೇ ಒಂದು ಕೊಂಬು ಆಗಿರಬಹುದು. ಇಂತಹ ಎಂಟು ಕೊಂಬುಗಳು ಅಥವಾ ನಾಡುಗಳನ್ನು ಒಬ್ಬ ಅರಸ ಅಧೀನದಲ್ಲಿ ಇಟ್ಟುಕೊಳ್ಳುವ ಸಂಭವ ಹಾಗೂ ಸಾಧ್ಯತೆಯನ್ನು ಗಂಭೀರವಾಗಿ ಚರ್ಚಿಸುವ ಅಗತ್ಯವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಆಗಿನ ಕಾಲದ ಅವಶ್ಯಕತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಚಿಸಬೇಕಾದ ಅಗತ್ಯವಿದೆ. ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಮಡಿಕೇರಿ ಮತ್ತು ಭಾಗಮಂಡಲಗಳನ್ನು ಮಲಬಾರು ಮತ್ತು ಮಂಗಳೂರುಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಸೈನ್ಯ ಸಾಮಾಗ್ರಿಗಳ ದಾಸ್ತಾನು ಕೇಂದ್ರವಾಗಿಟ್ಟುಕೊಂಡಿದ್ದರು. ಆಗಿನ ಕಾಲದ ಕೊಡಗಿನಿಂದ ಅವರಿಗೆ ಬೇರೆ ಯಾವುದೇ ಆದಾಯ ಇರಲಿಲ್ಲ ಎಂಬುದನ್ನೂ ಈ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ.

1802ರಲ್ಲಿ ಐಗೂರು ವೆಂಕಟಾದ್ರಿನಾಯಕನನ್ನು ಗಲ್ಲಿಗೇರಿಸಿದ ನಂತರ ಆತನ ರಾಜ್ಯವನ್ನು 1804ರಲ್ಲಿ ಕೊಡಗಿಗೆ ಸೇರಿಸಲಾಯಿತು. ಆದರೂ ಐಗೂರು ರಾಜ್ಯಕ್ಕೆ ಸೇರಿದ ಜನರು ದೊಡ್ಡ ವೀರರಾಜನ ಆಡಳಿತವನ್ನು ಒಪ್ಪಿಕೊಳ್ಳಲಿಲ್ಲ. ಆತ ಮೃತನಾದ ನಂತರ ಆತನ ತಮ್ಮ ಲಿಂಗರಾಜನ ಆಡಳಿತದಲ್ಲಿಯೂ ಕೂಡಾ ಇಲ್ಲಿಯ ಜನ ಕೊಡಗಿನ ಆಡಳಿತವನ್ನು ಒಪ್ಪಿಕೊಂಡಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಇದಕ್ಕೆ ಲಿಂಗರಾಜನ ಹುಕುಂ ನಾಮೆಯಲ್ಲಿ ಆಧಾರಗಳು ಸಿಗುತ್ತವೆ.

1. ಹುಕುಂನಾಮೆಯಲ್ಲಿ 25ನೇ ಅಪ್ಪಣೆಯಲ್ಲಿ ಕುಲ ಕಸುಬು ಮಾಡುವ ಜಾತಿಗಳಿಗೆ ವಾರ್ಷಿಕ ವೃತ್ತಿ ತೆರಿಗೆಯನ್ನು ವಿಧಿಸಿದ ವಿವರ ಕೊಡಲಾಗಿದೆ. ಮಾತ್ರವಲ್ಲದೆ ಬೇಸಾಯ ಮಾಡುವ ನಾಲ್ಕು ಜಾತಿಗಳಲ್ಲಿ (ಕೊಡಗರ್‍ರು, ಅಂಮ್ಮಗಳು, ಮುಕ್ಕಾಟಿಗಳು ಹೆಗ್ಗಡೆಯಿ ನಾಲ್ಕು ಜಾತ್ತಿ ವಿನಹಾ ಸದ್ರಿ ಬರಶಿಯಿರ್‍ರುವ ಜಾತ್ತಿ) ಏನೇ ನ್ಯಾಯಪಂಚಾಯಿತಿ ಆದರೆ ಕೈ ತಪ್ಪು, ಬಾಯಿತಪ್ಪು, ಇರುಳು ತಪ್ಪು, (ವಿವಾಹಿತಳೊಂದಿಗೆ ವ್ಯಭಿಚರಿಸುವುದು) ಇತ್ಯಾದಿ ಮಾಡಿದವರಿಗೆ ಪಂಚಾಯಿತಿದಾರರು ಕಂಠಿರಾಯ ಹಣ ಮೂರರಿಂದ ಮೂವತ್ತುರಷ್ಟು ತಪ್ಪು ಕಾಣಿಕೆಯ ವ್ಯವಸ್ಥೆಯನ್ನು ಸೂಚಿಸಲಾಗಿದೆ. 25ನೇ ಅಪ್ಪಣೆಯಲ್ಲಿ ಹೇಳಲಾಗಿರುವ ಕುಲಕಸುಬು ಮಾಡುವ 19 ಜಾತಿಗಳು ಮತ್ತು ಬೇಸಾಯ ಮಾಡುವ 4 ಜಾತಿಯವರು ಮಾತ್ರ ಹುಕುಂ ನಾಮೆ ರಚನೆಯ ಕಾಲದಲ್ಲಿ (1812) ಆತನ ಆಳ್ವಿಕೆಯನ್ನು ಒಪ್ಪಿಕೊಂಡ ಪ್ರಜೆಗಳಾಗಿದ್ದದು ತಿಳಿದು ಬರುತ್ತದೆ.

2. ಇದೇ 25ನೇ ಅಪ್ಪಣೆಯಲ್ಲಿ "ಪರಶಿಮೆಯಿಂದ ರೈತರು ಮುಂತಾದವರು ಯಾರದರು ಆ ಶಿಮೆಯಲ್ಲಿ ಕಳವು ಅನ್ಯಾಯ

ಮುಂತಾಗಿ ಮಾಡಿ ಬಂದು ತನಗೆ ಒಪ್ಪಿಸಿದ ಬಳಿ ಅರಮನೆ ಶಿಮೆಯಲ್ಲಿ ತನ್ನ ಕುಶಿ ಇಸ್ಟಲಿ ಇದ್ದುಕೊಳ್ಳುವಲ್ಲಿ, ಆ ಶಿಮೆಯಲ್ಲಿ ಮಾಡಿದ ತಕ್ಸಿರು ಈ ಶಿಮೆಯಲ್ಲಿ ವಿಸ್ತರಿಸಿಕ್ಕಿರುಕುಳಮಾಡ್ವ ಕೆಲಸವಿಲ್ಲ. ಅಲ್ಲಿಂದ ಅರಮನೆ ಶಿಮೆಗೆ ಬಂದ ಮೇಲೆ ಹೊಸ್ತಾಗಿ ಯಾದಾದ್ರು ಕಷ್ಟ ಮಾಡಿದ್ರೆ ಅದನ್ನು ವಿಚಾರ್ನುವುದು" ಎನ್ನುವ ಮೂಲಕ ಜನಸಂಖ್ಯೆ ಕಡಿಮೆ ಇದ್ದ ಅರಮನೆ ಶಿಮೆಗೆ ಅಂದರೆ ನಾಲ್ಕುನಾಡು ಅರಮನೆ ಸುತ್ತಲ ಪ್ರದೇಶಕ್ಕೆ ಪರ ಊರಿನ ಕಳ್ಳಕಾಕರಿಗೆ ಬಂದು ನೆಲೆಸಲು ಅವಕಾಶ ಇತ್ತು.

3. 1812ರಲ್ಲಿ ಅರಮನೆ ಶಿಮೆ ಮತ್ತು ಕೊಡಗಿನ (ಈಗಿನ) ಪ್ರದೇಶದಲ್ಲಿ ಹೊಂದಾಣಿಕೆ ಇರುವಿಲ್ಲವೆನ್ನುವ ಸಂಶಯ ಉಂಟಾಗುತ್ತದೆ. ಲಿಂಗರಾಜನ ಪ್ರಜೆಗಳಾಗಿ 23 ಜಾತಿಗಳನ್ನು ಮಾತ್ರ ಗುರುತಿಸಿದ್ದು **ಗೌಡ, ವಕ್ಕಲಿಗ, ಲಿಂಗಾಯಿತ ಮುಸಲ್ಮಾನ ಕ್ರೈಸ್ತರಿಗೆ ಯಾವುದೇ ತೆರಿಗೆ** ವಿಧಿಸಿಲ್ಲ. 1792ರಲ್ಲೇ ವಿರಾಜಪೇಟೆ ಮತ್ತು ಚರ್ಚ್ ರಚನೆಯಾಗಿದೆ. ತನ್ನ ಆಳ್ವಿಕೆಯ ಪ್ರದೇಶದಲ್ಲಿ ಇದ್ದ ಬಲಿಷ್ಠ ಜಾತಿಗಳಿಂದ ತೆರಿಗೆ ಅಥವಾ ಕಂದಾಯ ವಸೂಲು ಮಾಡುತ್ತಿರಲಿಲ್ಲವೆಂಬ ಅನುಮಾನ ಹುಟ್ಟಿಸುತ್ತದೆ.

4. ಮೂರನೇ ಅಪ್ಪಣೆಯಲ್ಲಿ "ಸಾಗು ರೈತರಿಂದ 100 ಬಟ್ಟಿ ಉತ್ಪತ್ತಿ ಬರುವಲ್ಲಿ ಎರಡೂವರೆ ವರಹದಂತೆ ಎಷ್ಟು ಬರಬೇಕೋ ಅದನ್ನು" ಎಂಬುದಾಗಿ ಬರೆದಿದ್ದು ಮುಂದೆ "ಜಮ್ಮ ರೈತರ ಭೂಮಿ ಲಿಂಗರಾಜೇಂದ್ರ ಗಜದಲ್ಲಿ ಅಳತೆ ಮಾಡಿ ಶಿಸ್ತು (ಕಂದಾಯ) ನಿಗದಿ ಮಾಡಿ ಹುಜೂರ್ ದಫ್ತರ್ ಖಾನೆಯಲ್ಲಿ ಮಡಗಿದೆ........." ಎಂಬುದಾಗಿ ಸ್ಪಷ್ಟಪಡಿಸಲಾಗಿದೆ. ಇದರ ಪ್ರಕಾರ ಅರಮನೆ ಶಿಮೆಯಿಂದ ದೂರದಲ್ಲಿದ್ದ ಸಾಗು ರೈತರ ಮೇಲೆ ಆತನ ಹಿಡಿತ ಇದ್ದಂತೆ ಕಾಣುವುದಿಲ್ಲ. ಅದೇ ಅಪ್ಪಣೆಯ ಕೊನೆಯಲ್ಲಿ "ನಾವು ಮಾಡಿದ ಉಪಕಾರ ಮರೆತು ನಮ್ಮ ನಿಂದನೆ ಮಾಡಿ ಅಪಕಾರ ಯೋಚಿಸುವ ರೈತರಿಗೆ ನಾವು ಶಿಕ್ಷೆ ಮಾಡೆವು (ಬಹುಶಃ ಶಕ್ತನಲ್ಲವೆಂದು ತಿಳಿದುಕೊಂಡಿರಬಹುದು) ಇದರ ಮೇಲೆ ಜನರ ನಡತೆ ಇದ್ದಂತೆ ಶಿವ ಮಹಾ ರುದ್ರ ಶಂಭುವೇ ವಿಚಾರಿಸಿಕೊಳ್ಳಲಿ." ಎಂದು ಬರೆದಿರುವುದನ್ನು ವಿಮರ್ಶಿಸಿದರೆ ಬಹುತೇಕ ಸಾಗು ರೈತರು ಕಂದಾಯ ಸಲ್ಲಿಸುತ್ತಿರಲಿಲ್ಲ. ಜಮ್ಮ ರೈತರು ಮಾತ್ರ ಆತನನ್ನು ಅರಸನೆಂದು ಒಪ್ಪಿರುವಂತೆ ಕಂಡು ಬರುತ್ತದೆ.

5. 35ನೇ ಅಪ್ಪಣೆಯಲ್ಲಿ ಕೊಡಗಿಗೆ ದಕ್ಷಿಣಕನ್ನಡ ಜಿಲ್ಲೆಯಿಂದ ಬಂದವರ ಬಗ್ಗೆ ಪ್ರಸ್ತಾಪಿಸಲಾಗಿದೆ. **"ಮರ್ದಾಳ, ಸಿಗೆಕಲ್ಲು ಬಳ್ಪದ ಬಂಟರು, ಬಿಲ್ಲವರು" ಎಂಬುದಾಗಿ ಬರೆದಿದೆ ಹೊರತು ಗೌಡರ ಬಗ್ಗೆ ಹೇಳಿಲ್ಲ**. ಸುಬ್ರಹ್ಮಣ್ಯ ಸಮೀಪದ ಈ ಊರುಗಳಲ್ಲಿ ಗೌಡ ಜನಾಂಗದ ದೊಡ್ಡ ಜಮೀನ್ದಾರರು, ಸಣ್ಣ ಹಿಡುವಳಿದಾರರು, ಭೂ ರಹಿತ (ಭೂಮಿ ಕಳೆದುಕೊಂಡ) ಕೃಷಿ ಕಾರ್ಮಿಕರು ಸಾಕಷ್ಟು ಇದ್ದಾರೆ. ಆದರೆ ಶತಮಾನಗಳ ಹಿಂದೆ ಅಲ್ಲಿಂದ ಊರು ಬಿಟ್ಟು ಹೊರಡುವ ಬಡತನ ಅವರಿಗೆ ಇದ್ದಿರಲಿಲ್ಲ ವೆನ್ನಿಸುತ್ತದೆ. ಅದೇ ಅಪ್ಪಣೆಯಲ್ಲಿ ಬಂದವರನ್ನು ಹೆಸರಿಸುತ್ತಾ ಅರಗುಟ್ಟಿ, ರುದ್ರಯ್ಯ, ತುದಿಯ್ಯಡಕ ಕೃಷ್ಣಯ್ಯ ಎಂಬುದಾಗಿ ಸ್ಪಷ್ಟಪಡಿಸಿ, ಮುಳ್ಳೂರು ಪೇಟೆ ಗೌಡನ ಕುಳ ಒಂದು ಎಂದು ಮಾತ್ರ ಬರೆಯಲು ಕಾರಣವೇನು? ಗೌಡನ ಹೆಸರು ಯಾಕೆ ಬರೆದಿಲ್ಲ?

ಹೀಗಾಗಿ ಒಬ್ಬನೇ ಒಬ್ಬ ಗೌಡ ವಲಸೆ ಬಂದ ಎನ್ನುವು ಒಪ್ಪುವಂತಿಲ್ಲ.

6. 37ನೇ ಅಪ್ಪಣೆಯಲ್ಲಿ ಕೊಡಗಿಗೆ ಬರಲು ಹೋ ರಹದಾರಿ/ಕಟ್ಟೆಚೀಟು ಇದ್ದಿತು. ಉಕ್ಕಡ ಎಂಬ ತನಿಖಾ ಕ ಅಥವಾ ಗೇಟು ತೊಡಿಕಾನದಲ್ಲಿ ಇತ್ತೆಂದು ತಿಳಿದು ಬರುತ ಕೊಡಗಿಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಪ್ರವೇಶಿಸಲು ಬಿಸ್ಲೆಯಿ ಪ್ರಾರಂಭಿಸಿ, ಕರಿಕೆಯ ತನಕ ಕನಿಷ್ಟ ಹತ್ತು ಹೆದ್ದಾರಿಗಳಿದ್ದುವು. ಯಾವುದೇ ಉಕ್ಕಡಗಳಿರಲಿಲ್ಲ. ಹಾಗಿರುವಾಗ 1804ರಿಂದ 18 ತನಕ ಕೊಡಗಿಗೆ ಸೇರಿದ್ದ ಸುಳ್ಯ, ಪುತ್ತೂರು, ಬೆಳ್ತಂಗಡಿ ವ ಬಂಟ್ವಾಳ ತಾಲ್ಲೂಕುಗಳು ಕೊಡಗು ರಾಜನ ಆಡಳಿತಕ್ಕೆ ಸೇರಿ ಸೇರದಂತೆ ಇದ್ದಿರಬಹುದು.

ಈ ಎಲ್ಲ ದಾಖಲೆಗಳನ್ನು ವಿಮರ್ಶಿಸಿ ವಿಚಾರ ಮಾಡಿದ ಕೊಡಗು ಜಿಲ್ಲೆಗೆ ಗೌಡರು ವಲಸೆ ಬಂದವರಲ್ಲ ಅಥವಾ ಅವ ಯಾವನೇ ಅರಸ ಆಮಂತ್ರಣ ನೀಡಿಯೊ ಇಲ್ಲ ಬಲಾತ್ಕಾರ ಕರೆಸಿಕೊಂಡಿಲ್ಲವೆನ್ನುವುದು ನಿಶ್ಚಯ. ಆದರೆ ಕೊಡಗಿನ ಉ ಭಾಗದಿಂದ ಗೌಡರ ಮನೆಗಳಲ್ಲಿ ಜನಸಂಖ್ಯೆ ಹೆಚ್ಚಿದಾಗ ಕಗ್ಗಾಡಾ ಇಂದಿನ ಕೊಡಗು ಜಿಲ್ಲೆಯೊಳಗೆ ಒತ್ತುವರಿ ಮಾಡುತ್ತಾ ಸಹಸ್ರ ವರ್ಷಗಳ ಹಿಂದೆ ಬಂದು ನೆಲೆಸಿದ್ದು ಕೊಡಗಿಗೆ ನಾಗರಿಕತೆಯನ್ನು ತ ಪ್ರಮುಖ ಜನಾಂಗ ಎಂಬ ಅಂಶ ಸಾಬೀತಾಗುತ್ತದೆ.

— ಮುಗಿಯಿ

ಹೆಮ್ಮೆಯ ಪುತ್ರ

ಅಂ - ದ್ ಹಾಡಿ ಕುಣ್ದ್ ಕುಪ್ಪಳಿಸುತ್ತಿದ್ದ ನ
ಮ್ಮಾ - ಸಂಸ್ಕೃತಿ ಮೂಲೆಯಾಗ್ತ್ತಿರ್‌ಕನ ಅದಿಕೆ ಹೊಸ
ಜೇ - ವಕೊಟ್ಟ್ ಹಾಡ್‌ನ ರೂಪಲಿ ಬರ್ದ್ ಅದನ್ನ
ರಾ - ಗಲೀ ಹಾಡಿ ಇಂದ್ ಪ್ರತಿ ಗೌಡರ ಮನೇಲಿರುವ
ಪೊ - ನಿಧ್ವನಿತೆಳುವ ಅರೆಭಾಷೆ ಧ್ವನಿಸುರುಳಿಯ
ನ್ನ - ಬಿಡುಗಡೆ ಮಾಡಿ ತನ್ನ ಅಮ್ಮ ಅ
ಪ್ಪ - ನ ಹೆಸ್‌ರ್‌ವುಳ್‌ಸಿ ಹೊಗಳಿಸಿಕೊಂಡ ಹೆಮ್ಮೆಯ ಪು

ಅಣ್ಣೆಚೀರಾ ಭಾರತಿ ಸೋಮ
ಮಕ್ಕಂದೂರು ಗ್ರಾ

ತಿದ್ದುಪಡಿ : ಸವಿನೆನಪು

ಸಂಚಿಕೆ 12ರಲ್ಲಿ ಬಿ. ಪಟ್ಟೆಮನೆ ಕೃಷ್ಣಪ್ಪ, ಸುಂಠಿಕೊ ಇವರ ಮರಣ 26-6-1997 ಎಂತಲೂ, 2ನೇ ವರ್ಷದ ಸವಿನೆನ ಎಂತಲೂ, ಹಾಗೂ ಕುಟುಂಬದವರು ಎಂದು ಓದಿಕೊಳ್ಳುವುದ ಅಚಾತುರ್ಯವಾಗಿ ತಪ್ಪಾಗಿ ಮುದ್ರಣಗೊಂಡಿರುವುದ ವಿಷಾದಿಸುತ್ತೇವೆ.

ಸಂಪಾದ

ೌಡ ಮಹಿಳಾ ಒಕ್ಕೂಟದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಖನ : ಗೌಡ ಸಂಸ್ಕೃತಿ : ಅಂದು, ಇಂದು, ಮುಂದೆ.



ಪ್ರೊ. ಪೂಜಾರಿ ಮೊಣ್ಣಪ್ಪನವರು ಬೆಂಗಳೂರಿನ ಕೊಡಗು ಮತ್ತು ಕನ್ನಡ ಜಿಲ್ಲಾ ಗೌಡ ಸಮಾಜದ ಅಧ್ಯಕ್ಷರಾಗಿದ್ದು ಕಳೆದ ವರ್ಷವಷ್ಟೇ ನಿವೃತ್ತಿಯಾದವರು. ಅರೆಭಾಷೆ ಬಗ್ಗೆ ಕಟ್ಟಾ ಅಭಿಮಾನವಿರುವ ಇವರು ಸಾಕಷ್ಟು ಲೇಖನ ಬರೆದಿದ್ದಾರೆ. ಅರೆಭಾಷಿಕಾ ಜನಾಂಗದ ಸಾಹಿತಿಯೂ ಹೌದು. ಲೇಖಕರು ಹೌದು. ಉತ್ತಮ ಬರಹಗಾರರು ಹೌದು. ಸಂಗಾತಿ ಪತ್ರಿಕೆಯಲ್ಲಿ ಇವರ ಲೇಖನವಿಲ್ಲದ ಸಂಚಿಕೆಗಳಿಲ್ಲ. ಜನಾಂಗದ ಮೇರು ಸಾಹಿತಿಯಾದ ಇವರು ನಮ್ಮ ಅರೆಭಾಷಿಕಾ ಸಾರಸ್ವತ ಲೋಕದ ದಿಗ್ಗಜರು. ಶ್ರೀಯುತರ ವ್ಯಕ್ತಿ ಪರಿಚಯವನ್ನು ಈ ಹಿಂದೆಯೇ ಕೊಡಗು ಸಂಗಾತಿಯಲ್ಲಿ ಓದುಗರಿಗೆ ನೀಡಲಾಗಿದೆ.

ಸಂಪಾದಕಿ

ಅಂದು : ಟಿಪ್ಪು ಸುಲ್ತಾನನ ಹಾವಳಿಯಿಂದಾಗಿ ಕೊಡಗಿನ ಗಿನ ಮಡಿಕೇರಿ ತಾಲ್ಲೂಕಿನಲ್ಲಿ ಜನಸಂಖ್ಯೆ ಕಡಿಮೆಯಾಗಿ ಇಲ್ಲಿನ ಮಿಯಲ್ಲಾ ಪಾಳು ಬಿದ್ದದ್ದರಿಂದ ಆಗಿನ ಕೆಳಗಿನ ಕೊಡಗಿನಲ್ಲಿ ಕ್ಷಿಣ ಕನ್ನಡ ಜಿಲ್ಲೆ) ನೆಲೆಸಿದ್ದ ಗೌಡರನ್ನು ದೊಡ್ಡ ವೀರರಾಜೇಂದ್ರ ಡೆಯರ್ 1799ರಲ್ಲಿ ಕರೆದುಕೊಂಡು ಬಂದು ಇವರಿಗೆ ಜಮ್ಮದ ಮಿಯನ್ನು ಕೊಟ್ಟು ನೆಲೆ ನಿಲ್ಲುವಂತೆ ಮಾಡಿದರು. ಆಗ ಇವರಿಗೆ ಪ್ಪಸ ದಟ್ಟಿ ಮತ್ತು ರುಮಾಲೆಯನ್ನು ಕೊಟ್ಟುದ್ದರಿಂದ ಈ ಗೌಡರು ಜ ದರ್ಬಾರಿಗೂ, ಹಬ್ಬ ಮದುವೆಗಳಲ್ಲೂ ಕುಪ್ಪಸ ದಟ್ಟಿಯನ್ನು ಪಯೋಗಿಸಲು ಪ್ರಾರಂಭವಾಗಿ ಸಾಧಾರಣ 1940ರ ವರೆವಿಗೆ ಪ್ಪಸ ದಟ್ಟಿಯನ್ನು ಧರಿಸುತ್ತಿದ್ದರು, ಮಹಿಳೆಯರು ಗೇಂಟಿಗೆ ಕಟ್ಟಿ ರೆ, ತಲೆಗೆ ವಸ್ತ್ರವನ್ನು ಕಟ್ಟುತ್ತಿದ್ದರು 1940ರಿಂದಾಚೆಗೆ ಗೌಡರು ದುವೆಯಲ್ಲಿ ಕುಪ್ಪಸ ದಟ್ಟಿಯ ಬದಲು ಕೋಟು ಪಂಚೆಯನ್ನು ಡಲು ಪ್ರಾರಂಭಿಸಿದರು. ಮಹಿಳೆಯರು ಸಹ ಗೇಂಟಿಗೆ ಸೀರೆಯ ದಲು ಸೆರಗು ಹಾಕಿ ಸೀರೆಯನ್ನು ಉಡಲು ಪ್ರಾರಂಭಿಸಿದರು. ಒಂದೆ ಒಂದು ಮದುವೆಗೆ 200 ರಿಂದ 300 ಜನ ಮಾತ್ರ ಸೇರಿಸುತ್ತಿದ್ದರು. ಮದುವೆ ಮಾಡುವವನಿಗೆ ಅವನ ಕುಟುಂಬಸ್ಥರು ಊರಿನವರು ಮದುವೆಗೆ ಬೇಕಾದ, ಬಾಳೆಲೆ, ಬಾಳೆಹಣ್ಣು, ತರಕಾರಿ, ಬಟ್ಟೆಲು ಹಿಟ್ಟು, ಕೊಟ್ಟು ಸಹಾಯ ಮಾಡುತ್ತಿದ್ದರು. ಆಗ ಮದುವೆ ಊಟಕ್ಕೆ ಹಂದಿ ಮಾಂಸದ ಸಾರು, ಅನ್ನ ಬಟ್ಟಲು ಹಿಟ್ಟನ್ನು ಮಾತ್ರ ಬಡಿಸುತ್ತಿದ್ದರು, ಮದುವೆಯನ್ನು ಹೆಚ್ಚಾಗಿ ಕುಟುಂಬದ ಐನ್ ಮನೆಗಳಲ್ಲಿ ಮಾಡುತ್ತಿದ್ದರು. ಕುಟುಂಬದ ಯಜಮಾನ ಪಟ್ಟೆದಾರ. ಒಂದು ಕುಟುಂಬದಲ್ಲಿ ಆಗುತ್ತಿದ್ದ ಶುಭ ಮತ್ತು ಅಶುಭ ಕಾರ್ಯಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ. ಪಟ್ಟೆದಾರರಿಗೆ ತುಂಬ ಗೌರವ ಕೊಡುತ್ತಿದ್ದರು. ಪಟ್ಟೆದಾರರ ಅಪ್ಪಣೆ ಇಲ್ಲದೆ ಕುಟುಂಬದಲ್ಲಿ ಯಾವ ಕಾರ್ಯವನ್ನು ಕೈಗೊಳ್ಳುತ್ತಿರಲಿಲ್ಲಾ. ಕುಟುಂಬದ ಸದಸ್ಯರಲ್ಲಿ ಭಿನ್ನಾಭಿಪ್ರಾಯಗಳು ಉಂಟಾದರೆ ಅದನ್ನು ಸರಿಪಡಿಸುತ್ತಿದ್ದ. ಗ್ರಾಮದಲ್ಲಿ ಗ್ರಾಮಗೌಡ ಮತ್ತು ಬುದ್ಧಿವಂತ ಎಂಬ ಎರಡು ಗೌಡ ಮುಖ್ಯಸ್ಥರಿರುತ್ತಿದ್ದರು. ಅವರು ಆ ಗ್ರಾಮದ ಗೌಡರಲ್ಲಿ ಆಗುವ ಶುಭ ಅಶುಭ ಕಾರ್ಯಗಳಲ್ಲಿ ಮಾರ್ಗದರ್ಶನ ಮಾಡುತ್ತಿದ್ದು, ಗೌಡರ ಜಾತಿ ಪದ್ಧತಿಗಳ ವಿಷಯದಲ್ಲಿ ತಕ್ಕುದಾದ ಮಾರ್ಗದರ್ಶನ ಮಾಡುತ್ತಿದ್ದ. ಕುಟುಂಬದಲ್ಲೂ ಗ್ರಾಮದಲ್ಲೂ ಒಗ್ಗಟ್ಟು ಇತ್ತು. ಕುಟುಂಬದವರ ಯಾ ಗ್ರಾಮದ ತೀರ್ಮಾನವನ್ನು ಪ್ರತಿಯೊಬ್ಬ ವ್ಯಕ್ತಿಯೂ ಪಾಲಿಸಲೇ ಬೇಕು. ಪಾಲಿಸದೇ ಹೋದರೆ ಅವನಿಗೆ ದಂಡ ಯಾ (ಪರಂಬಡಿ) ಬಹಿಷ್ಕಾರ ಹಾಕುತ್ತಿದ್ದರು, ಆದುದ್ದರಿಂದ ಎಲ್ಲರೂ ಸೇರಿ ಮಾಡಿದ ತೀರ್ಮಾನಕ್ಕೆ ಬೆಲೆ ಇತ್ತು.

ಮದುವೆಯಲ್ಲಿಯೂ ಸಹ ಪ್ರತಿಯೊಂದು ಪದ್ಧತಿಯನ್ನು ಚಾಚೂ ತಪ್ಪದಂತೆ ಮಾಡುತ್ತಿದ್ದರು. ಯಾರಾದರೂ ತಪ್ಪಿದ್ದಲ್ಲಿ ಅವರಿಗೆ ದಂಡ ವಿಧಿಸುತ್ತಿದ್ದರು. ಪದ್ಧತಿಯ ಕೆಲಸದಲ್ಲಿ ಎಲ್ಲಿಯಾದರೂ ತಪ್ಪಾದೀತೆಂಬ ಭಯ ಇತ್ತು. ಈ ರೀತಿಯ ಒಗ್ಗಟ್ಟಿನಿಂದ ಜನರಲ್ಲಿ ಭಯ ಭಕ್ತಿ ಇತ್ತು ಪ್ರೀತಿ ಇತ್ತು.

ಆಗಿನ ಕಾಲದಲ್ಲಿ ವಧುವರರು ಅದರಲ್ಲೂ ವರನು ತಾನು ಚಪ್ಪರದಂದು ರಾತ್ರಿ ಸ್ನಾನವಾದ ನಂತರ ತೊಟ್ಟ ಉಡುಪನ್ನು ದಿಬ್ಬಣ ಹೋಗಿ ಹೆಣ್ಣನ್ನು ಮನೆ ಹತ್ತಿಸುವವರೆಗೂ ಬದಲಾಯಿಸಬಾರದೆಂಬ ಕಟ್ಟು ಕಟ್ಟಳೆ ಇತ್ತು. ಮಗುವಿನ ತೊಟ್ಟಿಲು ಹಾಕುವದರಿಂದ ಹಿಡಿದು. ಕಿವಿ ಚುಚ್ಚುವ, ನೆರೆದ ಮದುವೆ, ಮದುವೆ ಬಯಕೆಯ ಮದುವೆ ಸಾವು, ಶುದ್ಧ ತಿಥಿ, ದೀಪಾವಳಿ ಮುಂತಾದ ಶುಭ ಮತ್ತು ಅಶುಭ ಕಾರ್ಯಗಳಲ್ಲಿ ಕ್ರಮಬದ್ಧವಾಗಿ ಆಚರಿಸುತ್ತಿದ್ದರು. ಮದುವೆ ಚಪ್ಪರಕ್ಕೆ ಹನ್ನೆರಡು ಕಂಬಕ್ಕೆ ಹನ್ನೆರಡು ಗುಂಬ (ಕುಡಿಕೆ)ಗಳನ್ನು ಇಡುತ್ತಿದ್ದರು ಹುತ್ರಿ ಕೈಲ್ ಮಹೂರ್ತದಲ್ಲಿ ಕುಟುಂಬದವರೆಲ್ಲಾ ಸೇರಿ ತೊಂಬಾರದ (ಎಲ್ಲರೂ ಸೇರಿ ಮಾಡುವ ಅಡಿಗೆ) ಅಡಿಗೆಗಳಲ್ಲಿ ಪ್ರತಿಯೊಬ್ಬರೂ ಕೂಡುತ್ತಿದ್ದರು

ಈಗ : ಈಗಿನ ಕಾಲದಲ್ಲಿ ಮದುಮಗ ಅಡೋಳಿಯನ್ನು ಬಿಟ್ಟರೆ ಬೇರೆ ಯಾರೂ ಮದುವೆ ಉಡುಪನ್ನು ಧರಿಸುವುದಿಲ್ಲ,

ಮನೆಯಿಂದ ದಿಬ್ಬಣ ಹೋಗಿ ಹೆಣ್ಣು ಕರೆದುಕೊಂಡು ಬರುವ ಮದುವೆ ಕಡಿಮೆಯಾಗಿದೆ. ದಂಪತಿ ಮುಹೂರ್ತವೆಂಬ ಹೊಸ ಪದ್ಧತಿಯನ್ನು ಪ್ರಾರಂಭಿಸಿದ್ದಾರೆ. ಈ ದಂಪತಿ ಮುಹೂರ್ತ ಪದ್ಧತಿಯಲ್ಲಿ ಮದುವೆಯ ಎಲ್ಲಾ ಪದ್ಧತಿಗಳನ್ನು ಸಮರ್ಪಕ ರೀತಿಯಲ್ಲಿ ಆಚರಿಸುವುದಕ್ಕೆ ಸಮಯದ ಅಭಾವದಿಂದ ಸಾಧ್ಯವಿಲ್ಲ. ಮದುವೆಯಲ್ಲಿ ಈಗ 500 ಜನರಿಗೆ ಮೇಲ್ಪಟ್ಟು ಜನ ಸೇರಿಸಿ ನವೀನ ವಿಧವಿಧದ ಅಡುಗೆಗಳನ್ನು ಮಾಡಿ ಉಪಚರಿಸುತ್ತಾರೆ. ಕೆಲವು ಮದುವೆಗಳಲ್ಲಿ "ಮಿನಿ" ಬಾರ್‌ಗಳನ್ನು ಸಹಾ ತೆಗೆಯುತ್ತಾರೆ, ಆಡಂಬರದ ಕಡೆ ವಾಲಿ ಪಾಶ್ಚಾತ್ಯ ರೀತಿಯ ಊಟ ಉಪಚಾರ ಉಡಿಗೆ ತೊಡಿಗೆ ಸ್ವರ್ಗೀಯ ಪಾನೀಯಗಳು ಹೊಸ ಹೊಸ ಬಗೆಯ ವಾಹಕ ಯಂತ್ರಗಳು, ಬೆಲೆ ಬಾಳುವ ಅಣಿ ಮಾಡಿದ ಆಹಾರ, ಲಜ್ಜಾಪಾನ, "ಬಫೆ" ಸಿಸ್ಟಂ, ಸ್ವೇಚ್ಛಾ ವಿಹಾರಿ, ವಿಚಿತ್ರ ವ್ಯಸನ ನಾರಿಯರ ನೂತನ ಭಾವ ನೂತನ ಭಂಗಿ ಇವುಗಳೆಲ್ಲ ಹಿಂದೆಂದೂ ಕಂಡರಿಯದ ಆಸೆಯನ್ನು ಪ್ರಚೋದಿಸುತ್ತದೆ. ಗೌಡರ ವಿವಾಹ ಸಮಾರಂಭಗಳಲ್ಲಿ ಸೋಬಾನೆಗಳು ಬಹಳ ಅಪರೂಪವಾಗಿದೆ, ಸೋಬಾನೆಗಳಲ್ಲಿ ಹೇಳುವ ನೀತಿ ನುಡಿಗಟ್ಟುಗಳನ್ನು ಯುವಕ ಯುವತಿಯರು ತಿಳಿಯುವ ಹವ್ಯಾಸಕ್ಕೆ ಹೋಗುವುದಿಲ್ಲ, ನಮ್ಮ ಶಾಸ್ತ್ರ ಪದ್ಧತಿಗಳನ್ನು ಗೊಡ್ಡು ಸಂಪ್ರದಾಯವೆಂದು ಹಿಯ್ಯಾಳಿಸುತ್ತಿದ್ದಾರೆ, ಆರತಕ್ಷತೆಯ ಕಾಲದಲ್ಲಿ ಗಂಡು ತನ್ನ ಪದ್ಧತಿಯ ಉಡುಪನ್ನು ಕಳಚಿ ಪಾಶ್ಚಾತ್ಯ ರೀತಿಯ ಉಡುಗೆಯಿಂದ ಶೂ ಹಾಕಿಕೊಂಡು ದೀವಿಗೆ ಹಚ್ಚದೆಯೇ ಆರತಕ್ಷತೆಗೆ ಕೂರುತ್ತಾನೆ.

ಹಿರಿಯರಿಗೆ ಮರ್ಯಾದೆ ಕೊಡುವುದನ್ನು ಯುವಕ ಯುವತಿಯರು ಮರೆತಿದ್ದಾರೆ. ಕುಟುಂಬದ ಯಜಮಾನ ಪಟ್ಟೆದಾರ ಭೂಮಿಯ ಜಮಾಬಂದಿಯಲ್ಲಿ ಮಾತ್ರ ಕಾಣುತ್ತಿದೆ. ಹಲವಾರು ಐನ್ ಮನೆಗಳು ಬಿದ್ದು ಹೋಗಿವೆ, ಕುಟುಂಬದವರಲ್ಲಿ ಒಗ್ಗಟ್ಟಿಲ್ಲ. ಪ್ರತಿಯೊಬ್ಬ ಅವರವರ ಸ್ವಂತ ಅಭಿಪ್ರಾಯದಂತೆಯೇ ನಡೆಯುತ್ತಿದ್ದಾರೆ. ಸಂಪ್ರದಾಯಗಳನ್ನು ಮುರಿದವರನ್ನು ಹಿರಿಯರಾಗಲಿ ಸಮಾಜವಾಗಲಿ ಕೇಳುವುದಿಲ್ಲವಾಗಿದೆ.

ಮುಂದೆ : ಈಗಿರುವ ರೀತಿಯಲ್ಲಿ ನಮ್ಮ ಸ ಮುಂದುವರೆಯುತ್ತಿದ್ದರೆ ಇನ್ನು ಹತ್ತಿಪ್ಪತ್ತು ವರ್ಷಗಳಲ್ಲಿ ಸಂಸ್ಕೃತಿ ಇತ್ತೋ ಇಲ್ಲವೋ ಎಂಬ ಸಂಶಯ ಬರುವ ಹಾಳಾಗಿಹೋಗುತ್ತಿದೆ ಎಂಬ ಭಯ ಜನರಲ್ಲಿ ಹುಟ್ಟಿದೆ. ಇ ಹೋಗಲಾಡಿಸಲು ಪ್ರತಿಯೊಂದು ಗ್ರಾಮಗಳಲ್ಲಿ ಗೌಡ ಸ ಹಾಗೂ ಮಹಿಳಾ ಸಮಾಜಗಳನ್ನು ಸ್ಥಾಪಿಸಬೇಕು. ಇದರ ಮುಖ ನಮ್ಮ ಸಂಸ್ಕೃತಿಯನ್ನು ಯುವಕರು ಯುವತಿಯರಿಗೆ ಹೇಳಬ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಯುವಕ ಯುವತಿಯರು ಸಂಸ್ಕೃ ವಿಷಯ ಅಧ್ಯಯನ ಮಾಡುವ ಏರ್ಪಾಡು ಆಗಬೇಕು. ಕೊ ಸಂಗಾತಿಯಂತಹ ಜನಾಂಗದ ಪತ್ರಿಕೆಗಳಲ್ಲಿ ಸಂಸ್ಕೃತಿಯ ವಿ ತಿಳಿದವರು ಲೇಖನಗಳನ್ನು ಬರೆದು ಎಲ್ಲರೂ ಓದುವಂತಾಗಬೆ ಹಿಂದಿನ ಕಾಲದಂತೆ ಮನೆ ಮನೆಗಳಲ್ಲಿ ಮದುವೆ ಸಮಾರಂಭಗ ನಡೆಸಲು ಸಾಧ್ಯವಾಗದಿದ್ದರೂ ಕಲ್ಯಾಣ ಮಂಟಪಗಳಲ್ಲಿ ಮಾ ಮದುವೆಗಳಲ್ಲಿ ಶಾಸ್ತ್ರ ಪದ್ಧತಿಗಳನ್ನು ಬಿಟ್ಟು ಹೋಗದಂತೆ ಜಾ ವಹಿಸಬೇಕು. ಅನಾವಶ್ಯದ ದುಂದು ಖರ್ಚಿಗೆ ಎಡೆ ಕೊಡಬಾ ಹಿಂದಿನ ರೀತಿಯ ಒಗ್ಗಟ್ಟು ಮೂಡುವುದದಕ್ಕೆ ಏನಾದ ಪರಿಹಾರವೆಂಬುದನ್ನು ಜನರು ಸೇರಿ ಚರ್ಚಿಸಿ ನಿರ್ಧಾರಕ್ಕೆ ಬ ಅದನ್ನು ಅನುಷ್ಠಾನಕ್ಕೆ ತರಬೇಕು. ತಪ್ಪಿತಸ್ಥರಿಗೆ ತಕ್ಕ ದಂಡ ವಿಧಿ ಪದ್ಧತಿ ಪುನರಾವರ್ತನೆ ಆಗಬೇಕು. ಪ್ರತಿ ಗ್ರಾಮಗಳಲ್ಲಿ ಇಬ್ಬರನ್ನು ಸಂಸ್ಕೃತಿ ಹಾಗೂ ಪದ್ಧತಿಗಳ ಬಗ್ಗೆ ಸರಿಯಾದ ತರಬ ನೀಡಿ ಅವರ ಮುಖಾಂತರ ಪದ್ಧತಿಗಳ ಅನುಷ್ಠಾನಕ್ಕೆ ಮಾಡಿಕೊಡಬೇಕು. ನಮ್ಮ ಮುಂದಿನ ಜನಾಂಗದವರ ಎಳೆಯರಿದ್ದಾಗಲೇ ಸಂಸ್ಕೃತಿ ವಿಷಯ ತಿಳುವಳಿಕೆ ಕೊಡುವು ಮಹಿಳೆಯರಿಂದಲೇ ಸಾಧ್ಯ.


ಪ್ರೊ. ಪೂಜಾರಿ ಅಚ್ಚಯ್ಯ ಮೊಣ್ಣ
ಬೆಂಗಳೂ

6ನೇ ಪುಟದಿಂದ

ಸರಕಾರದ ಪಟ್ಟಿಯಲ್ಲಿ ಹಿಂದುಳಿದ ಜನಾಂಗವಾಗಿದ್ದರೂ ಆರ್ಥಿಕವಾಗಿ ಪ್ರಬಲರಾಗಿರುವ ಆರ್ಯಈಡಿಗ ಜನಾಂಗದವರು ಪ್ರತೀ ವರ್ಷ ಅವರ ಜನಾಂಗದಲ್ಲಿ ಸಾಮೂಹಿಕ ವಿವಾಹ ಏರ್ಪಡಿಸುತ್ತಾರೆ. **ಸಾಂಪ್ರದಾಯಿಕವಾಗಿ ಕಟಿಬದ್ಧನಾಗಿ ಸಾಮೂಹಿಕ ವಿವಾಹ ಏರ್ಪಡಿಸುತ್ತಾರೆ.** ನಾಡಿನ ಮೂಲೆ ಮೂಲೆಗಳಿಂದ ಜನಾಂಗ ಬಂಧುಗಳು ಅಲ್ಲಿ ನೆರೆಯುವುದರಿಂದ ಪರಸ್ಪರ ಸಂಪರ್ಕ ಬೆಳೆದು, ಅದೊಂದು ಜನಾಂಗೀಯ ಉತ್ಸವದಂತೆ ಕಂಡುಬರುತ್ತದೆ. ಇಂತಹ ವಿವಾಹದಿಂದ ಆ ಜನಾಂಗದಲ್ಲಿ ವರ್ಷವೊಂದಕ್ಕೆ ಕಡಿಯೆಂದರೂ **ಸುಮಾರು 15 ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆ, (ಸಮಯ, ಶ್ರಮ ಹೊರತುಪಡಿಸಿ) ಈ ಹಣ ಜನಾಂಗದ ಕಲ್ಯಾಣಕ್ಕಾಗಿ ಉಪಯೋಗವಾಗುವುದರಿಂದ, ಬಡವರ ಸಮಸ್ಯೆಗಳನ್ನು ನೀಗಿಸಲು ಅನುವಾಗುತ್ತದೆಂಬುದು ಆ ಜನಾಂಗದ ಪ್ರಮುಖರೊಬ್ಬರ ಅಭಿಪ್ರಾಯ.** ಆದುದರಿಂದ ಸಾಮೂಹಿಕ ವಿವಾಹಗಳು ಇತ್ತೀ ಜನಪ್ರಿಯವಾಗತೊಡಗಿವೆ. ಹಲವಾರು ಜನಾಂಗಗಳು ಅತ್ತ ಗ ನೀಡುತ್ತಿವೆ. ಹಲವಾರು ಸಚಿವರು, ಪ್ರಮುಖರು ತಮ್ಮ ಮಕ್ಕಳ ಸಾಮೂಹಿಕ ವಿವಾಹದಲ್ಲಿ ತೊಡಗಿಸಿ ಮಾದರಿಯಾಗುತ್ತಿದ್ದಾ ಕರ್ನಾಟಕದ ನಗರಾಭಿವೃದ್ಧಿ ಸಚಿವ ಎಂ. ಎಸ್. ಪಾಟೀಲರು ಇ ಜೂನ್ 21ರಂದು ತಮ್ಮ ಇಬ್ಬರು ಪುತ್ರರನ್ನೂ ಸಾಮೂ ವಿವಾಹಕ್ಕೆ ಒಳಪಡಿಸಿದ್ದಾರೆ. ಹಾಗಾದರೆ ಇದು ನಮ್ಮ ಗ ಜನಾಂಗದಲ್ಲಿ ಸಾಧ್ಯವಿಲ್ಲವೇ? ಅಥವಾ ನಮ್ಮ ಜನಾಂಗಕ್ಕೆ ಇ ಅವಶ್ಯಕವಿಲ್ಲವೇ? ಆಡಂಬರದ ಮದುವೆಗಳೇ ಸುಖಜೀವ ಸೋಪಾನವೇ? ಈ ಪ್ರಶ್ನೆಗಳಿಗೆ ಉತ್ತರ ನಮ್ಮ ಜನಾಂಗದಲ್ಲಿಂ **ಇದೆ. ಅದನ್ನು ಕಾರ್ಯಗತ ಮಾಡುವ ಜವಾಬ್ದಾರಿಯನ್ನೂ ಗ ಸಂಸ್ಥೆಗಳು ನಿರ್ವಹಿಸಬೇಕಷ್ಟೆ, ಮತ್ತು ಕಾದು ನೋಡೋಣ.**

ಲೇಖನ : ಪಟ್ಟಡ ಶಿವಕುಮಾ

ಅಖಿಲ ಭಾರತೀಯ ಅಂಚೆ ಇಲಾಖೆ, ಕೊಡಗು ಜಿಲ್ಲಾ ಘಟಕದ ಅಧ್ಯಕ್ಷರಾಗಿ ಆಯ್ಕೆ ಆಗಿರುವ ಶ್ರೀ ಇ. ಕೆ. ತಿಮ್ಮಪ್ಪನವರು



ಪರಶುರಾಮನ ಕೊಡಲಿಯ ಮಹಿಮೆಯಿಂದ ಹುಟ್ಟಿದ ವನ್ಯರಾಶಿಗಳಿಂದ ಕಂಗೊಳಿಸುವ ಪಶ್ಚಿಮ ಘಟ್ಟದ ಸಮುದ್ರ ತಡಿಯ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಗೇರುಕಟ್ಟೆ ಗ್ರಾಮದ ಹೀರ್ಯಾ ಮನೆ ದಿ. ಶಾಂತಪ್ಪ ಗೌಡ ಮತ್ತು ಬೂದಮ್ಮ ದಂಪತಿಗಳ ಐವರು ಮಕ್ಕಳಲ್ಲಿ ಒಬ್ಬರಾದ ಇ. ಕೆ. ತಿಮ್ಮಪ್ಪ ವಿದ್ಯಾಭ್ಯಾಸ ಕಲಿತದ್ದು ಕೊಡಗು ಮತ್ತು ಉಡುಪಿಯಲ್ಲಿ 1988ರಲ್ಲಿ ಅಂಚೆ ಇಲಾಖೆಯಲ್ಲಿ ಇಲಾಖೇತರ ನೌಕರರಾಗಿ ಪಾಲಿಬೆಟ್ಟದ ಮೇಕೂರಿನಲ್ಲಿ ಸೇರ್ಪಡೆ ಇವರು ಹವ್ಯಾಸಿ ಬರಹಗಾರರು. ಪತ್ರಕರ್ತರು ಹೌದು ಇದೀಗ ನಾಪೋಕ್ಲುವಿಗೆ ಸಮೀಪದ ಎಮ್ಮೆಮಾಡು ಗ್ರಾಮದಲ್ಲಿ ಅಂಚೆ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಹೊಸ ದಿಗಂತ, ಶಕ್ತಿ ಮತ್ತು ಕೊಡಗು ಫ್ರೆಂಟ್ ದಿನಪತ್ರಿಕೆಗಳಿಗೆ ನಾಪೋಕ್ಲುವಿನ ಪತ್ರಿಕಾ ವರದಿಗಾರರಾಗಿದ್ದಾರೆ.

ಸಂಘ ಸಂಸ್ಥೆಗಳಲ್ಲಿ : ದಿನಾಂಕ 21-2-1999ರಂದು ಕೊಡಗು ಜಿಲ್ಲೆಯಲ್ಲಿರುವ ಅಖಿಲ ಭಾರತಿಯ ಅಂಚೆ ಇಲಾಖೆಯ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ. ಮಲೆನಾಡು ಕಲಾ ಸಾಹಿತ್ಯ ವೇದಿಕೆ ನಾಪೋಕ್ಲು ಘಟಕದ ಪ್ರಧಾನ ಕಾರ್ಯದರ್ಶಿಯಾಗಿಯೂ ಉತ್ತಮ ಛಾಯ ಚಿತ್ರಗ್ರಾಹಕ ರಾಗಿಯು ಮುಂದುವರೆಯುತ್ತಿದ್ದಾರೆ. ನಾಪೋಕ್ಲಿನಲ್ಲಿ ತಾಯಿ ಬೂದಮ್ಮ, ಪತ್ನಿ ದೇವಮ್ಮ ಮಕ್ಕಳಾದ ರಂಜಿತ, ರಂಜನ್‌ರೊಂದಿಗೆ ಸರಳ ಜೀವನ ನಡೆಸುತ್ತಿದ್ದಾರೆ.

ದುಗ್ಗಳ ಸದಾನಂದಗೌಡ

ಚಂದದಾರರಲ್ಲಿ ವಿನಂತಿ

ಕೊಡಗು ಸಂಗಾತಿ ಪತ್ರಿಕೆಯ ಚಂದದಾರರು ತಮ್ಮ ವಿಳಾಸವು ಬದಲಾದಲ್ಲಿ ಕೂಡಲೆ ಸಂಗಾತಿ ಕಛೇರಿಗೆ ತಿಳಿಸುವಂತೆ ಈ ಮೂಲಕ ವಿನಂತಿಸುತ್ತೇವೆ. 25 ಪೈಸೆ ಅಂಚೆ ಕಾರ್ಡಿನಲ್ಲಿ ವ್ಯವಹರಿಸಿದರೂ ಸಾಕು.

– ಸಂಪಾದಕಿ

ಸಂಗಾತಿ ಓದುಗರಿಗೊಂದು ಸಂತೋಷದ ಸುದ್ದಿ

ಕೊಡಗು ಸಂಗಾತಿಯ ಮುಖಪುಟದಲ್ಲಿ ಮುದ್ರಿಸಲು ಅರ್ಹವಾಗಿರುವ ಛಾಯಾಚಿತ್ರಗಳು ಬೇಕಾಗಿದೆ. ಅರ್ಹವೆನಿಸಿದವುಗಳನ್ನು ಪ್ರಕಟಿಸುವುದಲ್ಲದೆ ಕಳುಹಿಸಿದವರ ಹೆಸರನ್ನು ಮುದ್ರಿಸಲಾಗುವುದು. ಚಿತ್ರ ಯಾವುದೇ ಇರಲಿ, ಸಮಯ ಪ್ರಜ್ಞೆಯ ಚಿತ್ರವಾಗಿರಬೇಕು. ಅರ್ಹಚಿತ್ರಗಳನ್ನು ಖಂಡಿತವಾಗಿಯೂ ಪ್ರಕಟಿಸುತ್ತೇವೆ.

– ಸಂಪಾದಕಿ


ಶುಭ ಹಾರೈಕೆ

ಕೊಡಗು ಸಂಗಾತಿ ಇದೆಯೆಂದು ಗೊತ್ತಾಗಿದ್ದು ಕೆಲವು ದಿನಗಳ ಹಿಂದೆಯಷ್ಟೆ. ನಿಜವಾಗಿಯೂ ಇದೊಂದು ಗೌಡ ಜನಾಂಗದ ನೂತನ ಇತಿಹಾಸ ನಿರ್ಮಿಸಲು ಕಾಲಿಟ್ಟ ಸಂಘಟನೆಯ ಪ್ರಥಮ ಹೆಜ್ಜೆ ಎನ್ನಬಹುದು. ನಮ್ಮ ಜನಾಂಗದ ಜನವಾಣಿ ಮೂಲವಾಣಿಯೂ ಆಗಿರುವ "ಕೊಡಗು ಸಂಗಾತಿ" ಪಾಕ್ಷಿಕವು ಪ್ರಗತಿ ಪಥದತ್ತ ಸಾಗಲಿ ಎಂದು ಹಾರೈಸುತ್ತೇವೆ.

ದುಗ್ಗಳ ಸದಾನಂದ ಗೌಡ, ಪತ್ನಿ : ಲಕ್ಷ್ಮಿ, ಮಗ : ಕಾರ್ತಿಕ್

ರಮ್ಯ ಸ್ಟುಡಿಯೋ, ಮುಖ್ಯ ರಸ್ತೆ, ನಾಪೋಕ್ಲು - 571214, ಫೋನ್ : 08272/37366

ಶುಭಾಶಯಗಳು



ನಾವುಗಳು ಕೊಡಗು ತಾಯ್ನಾಡನ್ನು ಬಿಟ್ಟು 18 ವರ್ಷಕ್ಕು ಮೇಲೆ ಆಗಿರುವುದರಿಂದ ನಮ್ಮ ಮಕ್ಕಳಿಗೆ ನಮ್ಮ ಸಂಸ್ಕೃತಿ, ಭಾಷೆ, ಆಚಾರ, ವಿಚಾರವೆಲ್ಲಾ ಮರೆತು ಹೋಗುತ್ತೊ ಅನ್ನುವ ತವಕದಲ್ಲಿದ್ದಾಗ ನಮ್ಮೆಲ್ಲರ ಅಚ್ಚುಮೆಚ್ಚಿನ **"ಕೊಡಗು ಸಂಗಾತಿ"** ಪತ್ರಿಕೆ ನೋಡಿ ಮರಳುಗಾಡಿನಲ್ಲಿ ಓಯಸ್ಸಿಸ್ ಸಿಕ್ಕಿದಷ್ಟು ಆನಂದವಾಗಿರುತ್ತದೆ.

ನಿಮಗೂ, ನಿಮ್ಮ ಪತ್ರಿಕೆಗೂ ಹಾಗೂ ಬಳಗಕ್ಕೂ ನಮ್ಮೆಲ್ಲರ ಹಾರ್ದಿಕ ಶುಭಾಶಯಗಳು

ಇಂದ : **ಕರ್ಣೇಯ್ಯನ ಆರ್. ವಸಂತ ಮತ್ತು ಶ್ಯಾಮಲ**

ಹಾಗೂ ಚಾಂದಿನಿ, ಪ್ರಜ್ವಲರು.

TVS Electronics Limited

34, Developed Plots, South Phase, Industrial Estate, Guindy
Chennai - 600032 Tele. : 2331411, 2325509
Fax : +91-44-2327577

Kodagu Sangathi Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.